
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

12 ಜುಲೈ 2017 ಪುಟ 16 ರೂ. 15/-




'ಶಾಶ್ವತ ಶಂಕಿತರ' ಬದುಕಿನ ಕಥೆ-ವ್ಯಥೆ






ಇಫ್ತಾರ್ ಕೂಟ ಮುತಾಲಿಕ್ ಮಳ್ಳಾಟ!!




ಚೆಡ್ಡಿ ಬಿಡಾರದಲ್ಲಿ ಟಿಕೆಟ್ ತಂತ್ರ-ತರಲೆ!!



ಹುಬ್ಬಳ್ಳಿ:
ಅಬ್ಬಯ್ಯನ ಕೈ ಅನಾಥ-
ಜೆಪಿಯ ಟಿಕೆಟ್ ಕಿತ್ತಾಟ!

ಮೈಸೂರು:
ಆಹಾರದ ವಿರುದ್ಧ
ಚೆಡ್ಡಿಗಳ ಕೇಕೆ!






ಮೊಳಕಾಲ್ಮೂರು:
ಕಾಂಗ್ರೆಸ್ ಟಿಕೆಟ್
ಯಾರ 'ಕೈ'ಗೆ?

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಸರ್ಕಾರೀ ಜಯಂತಿಗಳು ಮತ್ತು ಐಡೆಂಟಿಟಿ ರಾಜಕಾ

ಅಂಚಿನಿಂದ.....



ಡಾ.ವಾಸು ಎಚ್.ವಿ.


ಕೆಂಪೇಗೌಡ ಜಯಂತಿ ಆಚರಿಸಿದ ಮರುದಿನವೇ ಇದನ್ನು ಬರೆಯುತ್ತಿರುವುದು ಕಾಕತಾಳೀಯ ಅಷ್ಟೇ. ಶಂಕರಾಚಾರ್ಯರ ಜಯಂತಿಯ ಆಚರಣೆಯೇ ಸರ್ಕಾರದ ಮೂಲಕ ನಡೆಯುತ್ತಿರುವಾಗ ಕೆಂಪೇಗೌಡರ ಜಯಂತಿ ಯಾಕೆ ನಡೆಯಬಾರದು? ಮಧ್ವಾಚಾರ್ಯರ ಕಡೆಯವರು ಯಾವಾಗ ತಗಾದೆ ತೆಗೆಯುತ್ತಾರೋ ಗೊತ್ತಿಲ್ಲ, ಬಹುಶಃ ಅವರು ತಗಾದೆ ತೆಗೆಯಲಾರರು; ತಮ್ಮ ಬಳಿಗೆ ಬಂದು ಕೃತಾರ್ಥನಾಗಬಯಸುವ ಮುಖ್ಯಮಂತ್ರಿಯನ್ನು ಉಡುಪಿಯ ಪರ್ಯಾಯಕ್ಕೆ ಕರೆಯುತ್ತಾರೆ; ಆತ್ಮೀಯವಾಗಿ ಸನ್ಮಾನಿಸುತ್ತಾರೆ; ಮತ್ತು ಇದ್ದಕ್ಕಿದ್ದಂತೆ ಸಂಜೆಯ ಕಾರ್ಯಕ್ರಮದಲ್ಲಿ ಸರ್ಕಾರೀ ಮಧ್ವಾಚಾರ್ಯರ ಜಯಂತಿಯನ್ನು, ಕ್ಷಮಿಸಿ ಮಧ್ವಾಚಾರ್ಯರ ಸರ್ಕಾರೀ ಜಯಂತಿಯನ್ನು ಆಚರಿಸುವ ಬಿನ್ನವತ್ತಳೆ ಅರ್ಪಿಸುತ್ತಾರೆ. ಇನ್ನೂ ಸನ್ಮಾನದ ಹಾಗೂ ಸಾನ್ನಿಧ್ಯದ ಅಮಲಿನಲ್ಲಿ ತೇಲುತ್ತಿರುವ ಮುಖ್ಯಮಂತ್ರಿ ತಾನು ಮಾತನಾಡುವಾಗ "ಮುಂದಿನ ವರ್ಷದಿಂದ ರಾಜ್ಯ ಸರ್ಕಾರದ ವತಿಯಿಂದ ಮಧ್ವ ಜಯಂತಿಯನ್ನು ಆಚರಿಸಲಾಗುತ್ತದೆ ಮತ್ತು ಕೇಂದ್ರದಿಂದಲೂ ಆಚರಿಸುವಂತೆ ಪತ್ರ ಬರೆಯುತ್ತೇನೆ" ಎಂದು ಘೋಷಿಸುತ್ತಾರೆ. ಈ ರೀತಿ ಆಗುವುದಿಲ್ಲವೆಂದು ಖಚಿತವಾಗಿ ಹೇಳುವ ಜ್ಯೋತಿಷಿಗಳು ಯಾರಾದರೂ ಇದ್ದರೆ ದಯವಿಟ್ಟು ತಿಳಿಸಿ.


ಇದೆಲ್ಲಾ ಎಲ್ಲಿಂದ ಆರಂಭವಾಯಿತು ಎಂದು ಹೇಳುವುದು ಕಷ್ಟ. ಮೊಟ್ಟ ಮೊದಲ ಜಯಂತಿ ಗಾಂಧಿಯವರದ್ದೇ ಆಗಿರಲು ಸಾಧ್ಯ. ಆ ನಂತರ ನೆಹರೂ ಜಯಂತಿಯನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸಲು ಶುರು ಮಾಡಿರಬೇಕು. ಅಲ್ಲಿಂದಾಚೆಗೆ ಯಾವುದೇ ಮಹಾಪುರುಷರ ಜಯಂತಿಗಳನ್ನು ಸರ್ಕಾರವು ಆಚರಿಸಿದಂತೆ ಕಂಡುಬರುವುದಿಲ್ಲ. ನೆಹರೂ ಅವರ ಮೊಮ್ಮಗ ಪ್ರಧಾನಮಂತ್ರಿಯಾದಾಗಲೇ ಅವರ ಜನ್ಮಶತಮಾನೋತ್ಸವ ಬಂದಿತು. ಅದನ್ನು ಹಿಂದಿನ ಯಾವುದೇ ಅಂತಹ ಕಾರ್ಯಕ್ರಮಗಳಿಗಿಂತ ವಿಶೇಷವಾಗಿ ವರ್ಷವಿಡೀ ದೊಡ್ಡದಾಗಿ ಆಚರಿಸಲಾಯಿತು. ಇವೆಲ್ಲಕ್ಕೂ ಅಂತಹ ದೊಡ್ಡ ತಕರಾರು ಯಾರಿಂದಲೂ ಬಂದಂತಿಲ್ಲ.

ಇದರ ನಂತರ ಅಂಬೇಡ್ಕರ್‌ರವರ ಜಯಂತಿಯನ್ನು ಆಚರಿಸುವ ತೀರ್ಮಾನವು ಸರ್ಕಾರದಿಂದ ಘೋಷಣೆಯಾದಾಗಲೂ ಬಹಿರಂಗ ತಕರಾರು ಬಂದಿದ್ದು ನೆನಪಿಲ್ಲ. ಅದುವರೆಗೆ ಅಂಬೇಡ್ಕರ್‌ರ ಸ್ಮೃತಿ ನಾಶದ ಕೆಲಸವನ್ನು ಮಾಡಿದ್ದ ಸರ್ಕಾರಗಳು, 80ರ ದಶಕದ ದಲಿತ ಚಳವಳಿಯ ಕಾರಣದಿಂದ ಅನಿವಾರ್ಯವಾಗಿ ಅಂಬೇಡ್ಕರ್‌ರ ಬರಹಗಳನ್ನು ಮುದ್ರಿಸಬೇಕಾಯಿತು. ಅವರು ಸತ್ತ ಮೂರೂವರೆ ದಶಕಗಳ ನಂತರ ಮರಣೋತ್ತರ ಭಾರತರತ್ನ ನೀಡಲಾಯಿತು. ಆ ನಂತರ ಜನ್ಮಶತಮಾನೋತ್ಸವ ಆಚರಣೆಯೂ ಆಯಿತು. ದಲಿತ ಚಳವಳಿಯು ದಲಿತರ ಸ್ವಾಭಿಮಾನವನ್ನು ಬಡಿದೆಬ್ಬಿಸಿತಷ್ಟೇ ಅಲ್ಲದೇ, ದಲಿತ ಓಟ್‌ಬ್ಯಾಂಕ್ ಹಿಂದಿನ ರೀತಿಯಲ್ಲಿ ಊರ ಯಜಮಾನರಿಗೆ ನಿಷ್ಠೆಯ ರೀತಿಯಲ್ಲಿ ಉಳಿದುಕೊಳ್ಳುವುದಿಲ್ಲ ಎಂಬುದನ್ನೂ ಸಾಬೀತುಪಡಿಸಿತು. ಇದರ ಜೊತೆಜೊತೆಗೇ ಉತ್ತರ ಪ್ರದೇಶದಲ್ಲಿ ಬಹುಜನ ಚಳವಳಿ ಮತ್ತು ಬಹುಜನ ಸಮಾಜ ಪಕ್ಷವೂ ಬೆಳೆದುನಿಂತಿತು.


ಇವೆಲ್ಲದರ ಪರಿಣಾಮವಾಗಿ ಕಾಲಾನಂತರ ಅಂಬೇಡ್ಕರ್ ಜಯಂತಿಯನ್ನು ಸರ್ಕಾರವು ಆಚರಿಸುವಂತೆ ಮತ್ತು ತಾನು ಇನ್ನೂ ಹೆಚ್ಚು ದಲಿತಪರ ಎಂದು ಘೋಷಿಸಿಕೊಳ್ಳಲು ಅದಕ್ಕೆ ಸರ್ಕಾರೀ ರಜೆಯನ್ನೂ ಘೋಷಿಸುವಂತೆ ಆಯಿತು. ಇಲ್ಲಿಯವರೆಗೆ ತೊಂದರೆಯಿರಲಿಲ್ಲ. ಭಾರತವೆಂಬ ದೇಶವು ರೂಪುಗೊಳ್ಳಲು ಕಾರಣವಾದ ಸ್ವಾತಂತ್ರ್ಯ ಚಳವಳಿಯ ಐಕಾನ್ ಆಗಿದ್ದ ಮಹಾತ್ಮ ಗಾಂಧಿ (ದೇಶದ ಹಲವು ವರ್ಗಗಳಿಗೆ ಇದರ ಬಗ್ಗೆ ತಕರಾರಿರಬಹುದು), ದೇಶ ರೂಪುಗೊಂಡ ನಂತರ ಮೊದಲ ಪ್ರಧಾನಿಯಾಗಿದ್ದ ನೆಹರೂ (ಇದು ಸಾರ್ವತ್ರಿಕ ಜಯಂತಿ ಆಚರಣೆಯಾಗದೇ, ಶಾಲೆಗಳಲ್ಲಿ ನಡೆಯುವ ಆಚರಣೆಯಷ್ಟೇ ಆಗಿತ್ತು) ಮತ್ತು ದೇಶದ ಬಹುಸಂಖ್ಯಾತ ಶೋಷಿತ ಸಮುದಾಯಗಳ ಐಕಾನ್ ಹಾಗೂ ಸಂವಿಧಾನದ ಪ್ರಧಾನಶಿಲ್ಪಿಯಾಗಿದ್ದ ಅಂಬೇಡ್ಕರ್ ಅವರ ಜಯಂತಿಗಳನ್ನು ಸಾಂಕೇತಿಕವಾಗಿ ಸರ್ಕಾರವು ಆಚರಿಸುವುದು ಸಹಜವಾಗಿತ್ತು.

ಆದರೆ, ಅಲ್ಲಿಂದ ಆರಂಭವಾಗಿ ಇಂದು ಬಸವ ಜಯಂತಿ, ಮಹಾವೀರ ಜಯಂತಿ, ಬಾಬು ಜಗಜೀವನರಾಂ ಜಯಂತಿ, ಕನಕದಾಸ ಜಯಂತಿ, ವಾಲ್ಮೀಕಿ ಜಯಂತಿ, ಮಹಾವೀರ ಜಯಂತಿ, ಟಿಪ್ಪು ಜಯಂತಿ, ವಚನಕಾರರ ಜಯಂತಿ, ಭಗೀರಥ ಜಯಂತಿ, ಶಂಕರ ಜಯಂತಿ, ಕೆಂಪೇಗೌಡ ಜಯಂತಿಯವರೆಗೆ ಬಂದು ನಿಂತಿರುವುದು ಏಕಾಯಿತು? ಇದರಲ್ಲಿ ಹಲವು ಜಯಂತಿಗಳಿಗೆ ಸರ್ಕಾರೀ ರಜೆಯೂ ಸಿಕ್ಕಿದೆ. ಇನ್ನು ಮುಂದೆ ಯಾವ ಜಯಂತಿಗಳಿಗೂ ಸರ್ಕಾರೀ ರಜೆ ಇರುವುದಿಲ್ಲವೆಂದು ಮುಖ್ಯಮಂತ್ರಿಗಳು ಘೋಷಿಸಿದ್ದಾರಾದರೂ, ಸಂಖ್ಯೆ ಹಾಗೂ ಬಲದ ಕಾರಣಕ್ಕೆ ಕೆಲವು ಸಮುದಾಯಗಳು ರಜೆಗೆ ಒತ್ತಾಯಿಸುವುದಿಲ್ಲವೆಂಬ ಖಾತರಿ ಇಲ್ಲ. ಇದಲ್ಲದೇ ಕೇಂದ್ರ ಸರ್ಕಾರವು ಕೆಲವು ದಿನಗಳನ್ನು ಕಡ್ಡಾಯ ಮಾಡಿದಂತಿದೆ. ಭಯೋತ್ಪಾದನಾ ವಿರೋಧಿ ದಿನವನ್ನಾಗಿ ಇಂದಿರಾ ಗಾಂಧಿಯವರದ್ದೋ, ರಾಜೀವ್ ಗಾಂಧಿಯವರದ್ದೋ ಸತ್ತದಿನಗಳನ್ನು ಆಚರಿಸುವ ರೂಢಿಯಿದೆ. ಇದಲ್ಲದೇ ಬಿಜೆಪಿ ಸರ್ಕಾರವಿದ್ದಾಗ ವಿವೇಕಾನಂದರ ಜಯಂತಿಗೆ ಏನೋ ಹೆಸರು ಕೊಟ್ಟು, ಅದನ್ನು ಆಚರಿಸಿತು. 2010ರ ಏಪ್ರಿಲ್ 24ರಂದು ಸರ್ಕಾರವು ರಾಜ್‌ಕುಮಾರ್ ಜಯಂತಿ ಆಚರಣೆ ಮಾಡಿತು. ಇದಲ್ಲದೇ ದೇವರಾಜ ಅರಸರ ಜಯಂತಿಯನ್ನೂ ಪ್ರತೀವರ್ಷ ಆಚರಿಸುತ್ತಾ ಬಂದಂತಿದೆ. ವಿಶ್ವಕರ್ಮ ಜಯಂತಿಯನ್ನು ಸರ್ಕಾರವೇ ಪ್ರತೀ ವರ್ಷ ಆಚರಿಸುತ್ತಿದೆಯೋ ಇಲ್ಲವೋ ಗೊತ್ತಿಲ್ಲ, ಇದ್ದರೂ ಇರಬಹುದು. ಕೆಲವನ್ನು ಬಿಟ್ಟಿದ್ದರೆ ಯಾರೂ ಅನ್ಯಥಾ ಭಾವಿಸಬಾರದೆಂದು ಮನವಿ!!





ನಮ್ಮ ಪರಿಸ್ಥಿತಿ ಇಲ್ಲಿಗೆ ಬಂದು ನಿಂತಿದೆ. ಯಾವುದನ್ನಾದರೂ ಬಿಟ್ಟರೆ, ಆ ನಿರ್ದಿಷ್ಟ 'ಮಹಾಪುರುಷ'ರ ಜಾತಿಗೆ ಸೇರಿದ ಜನರು ಬೇಸರ ಮಾಡಿಕೊಳ್ಳಬಹುದೆಂದು ಆತಂಕ. ಜಾತಿಗಣತಿಯ ವಿವರಗಳು ಬಹಿರಂಗವಾದರೆ, ಶೇ.5ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಜಾತಿಯವರು ಸೂಚಿಸುವ ಆ ಜಾತಿಯ ಮಹಾಪುರುಷರ (ಮಹಿಳೆಯ ಹೆಸರು ಸೂಚಿಸುವುದು ಅನುಮಾನ) ಜಯಂತಿ ಆಚರಣೆ ಮಾಡಬೇಕೆಂದು ತೀರ್ಮಾನವಾದರೆ ಏನು ಮಾಡುವುದು? ಏನೂ ಮಾಡುವಂತಿಲ್ಲ, ಆಗ ಜಾತಿಗಳೊಳಗೆ ಉಪಪಂಗಡಗಳೇ ಶೇ. 5ರಷ್ಟಿದ್ದರೆ, ಅವರು ಪ್ರತ್ಯೇಕ ಜಾಗ ಕೇಳಬಹುದು. ಲಿಂಗಾಯತ ಪಂಚಮಸಾಲಿಗಳು ಕಿತ್ತೂರು ಚೆನ್ನಮ್ಮರ ಫೋಟೋ ಹಾಕಿಕೊಳ್ಳುತ್ತಾರೆಂದು ಯಾರೋ ಹೇಳಿದರು. ಅವರೇನಾದರೂ ಶೇ.5ಕ್ಕಿಂತ ಹೆಚ್ಚಿದ್ದರೆ, ಬಹುಶಃ ಮಹಿಳಾ ಮೀಸಲಾತಿ ಸಿಗಬಹುದು. ಆಗ ಶೇ. 10ಕ್ಕಿಂತ ಹೆಚ್ಚಿರುವ ಸಮುದಾಯದವರು, ತಮ್ಮ ಜಾತಿಯ ಕೋಟಾದಲ್ಲಿ ಇಬ್ಬರಿಗೆ ಅವಕಾಶ ಮಾಡಿಕೊಡಬೇಕೆಂದು ಕೇಳಬಹುದು ಮತ್ತು ಶೇ. 4ಕ್ಕಿಂತ ಕಡಿಮೆ ಇರುವ ಬ್ರಾಹ್ಮಣರು ಶಂಕರ ಮತ್ತು ಮಧ್ವ ಇಬ್ಬರ ಜಯಂತಿಗಳನ್ನು ಕಳೆದುಕೊಳ್ಳಲೂಬಹುದು. ಒಕ್ಕಲಿಗರು ಆಗೇನಾದರೂ ಕೆಂಪೇಗೌಡರ ಜೊತೆಗೆ ಕುವೆಂಪು ಅವರನ್ನು ಹೆಸರಿಸುವ ದುರಂತ ಈ ರಾಜ್ಯದಲ್ಲಿ ನಡೆಯಬಹುದೇ?



ಇವನ್ನೆಲ್ಲಾ ನಾವು ತಮಾಷೆಯಾಗಿ ಚರ್ಚಿಸಬೇಕೇ ಅಥವಾ ವಿಷಾದದಿಂದಲೇ ಗೊತ್ತಾಗುತ್ತಿಲ್ಲ. ಏಕೆಂದರೆ, ಆಧುನಿಕ ಪ್ರಜಾಪ್ರಭುತ್ವದಲ್ಲಿ ಪ್ರಜಾತಂತ್ರವನ್ನು ವಿಸ್ತರಿಸಿದ ಅಂಬೇಡ್ಕರ್‌ರ ಜಯಂತಿಯನ್ನೂ, ಪ್ರಜಾತಂತ್ರವನ್ನು ಕುಗ್ಗಿಸುವ ಸಿದ್ಧಾಂತ ಹೊಂದಿದ ಶಂಕರಾಚಾರ್ಯರ ಜಯಂತಿಯನ್ನೂ ಒಂದೇ ಸರ್ಕಾರ ಆಚರಿಸುವುದು ಎಂದರೆ ಅದಕ್ಕೆ ಅರ್ಥವೇನು? ಬಸವಣ್ಣ ಯಾವ ಜಾತಿಗೆ ಸೇರಿದವರೂ ಅಲ್ಲ, ಅವರು ವಿಶ್ವಮಾನವ ತತ್ವದವರು ಎಂದು ಹೇಳಿದರೆ ಸಂಬಂಧಪಟ್ಟವರು (!?) ಒಪ್ಪುತ್ತಾರೆಯೇ? ಮಹಾಪುರುಷರನ್ನು ಜಾತಿಗೆ ಸೀಮಿತಗೊಳಿಸಬಾರದು ಎಂದು ಈ ಎಲ್ಲಾ ಜಯಂತಿಗಳ ಭಾಷಣಗಳಲ್ಲಿ ಹೇಳುವುದೂ ವಾಡಿಕೆಯಾಗಿಬಿಟ್ಟಿದೆ. ಟಿಪ್ಪು ಸುಲ್ತಾನ್ ಜಯಂತಿಯನ್ನು ಆಚರಿಸಲು ತೀರ್ಮಾನಿಸಿದ್ದೂ ಸಹ ಮುಸ್ಲಿಂ ಎಂಬ ಕಾರಣಕ್ಕೇನೇ. ಅದನ್ನು ವಿರೋಧಿಸುತ್ತಿರುವವರೂ ಸಹ ಅದೇ ಕಾರಣಕ್ಕಾಗಿ ವಿರೋಧಿಸುತ್ತಿರುವುದು ಎಲ್ಲರಿಗೂ ಗೊತ್ತಿದೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಬಹುಶಃ ಅಬ್ದುಲ್ ಕಲಾಂರ ಜಯಂತಿಯನ್ನು ಮಾಡುತ್ತೇವೆ, ಟಿಪ್ಪು ಜಯಂತಿ ರದ್ದು ಮಾಡುತ್ತೇವೆ ಎಂಬ ತೀರ್ಮಾನ ತೆಗೆದುಕೊಳ್ಳುತ್ತಾರೆ. ಆಗ ಯಾರು ಶ್ರೇಷ್ಠ ಎಂಬ ಚರ್ಚೆಯನ್ನು ಟಿವಿ ಚಾನೆಲ್‌ಗಳಾದಿಯಾಗಿ ಎಲ್ಲೆಡೆ ನಡೆಯುತ್ತದೆ. ಈಗಾಗಲೇ ಕಲಾಂ ಶ್ರೇಷ್ಠ ಎಂದು ಸೋಷಿಯಲ್ ಮೀಡಿಯಾದಲ್ಲಿ ಸಾಬೀತು ಮಾಡಲಾಗಿದೆ! ಎಷ್ಟರಮಟ್ಟಿಗೆ ಎಂದರೆ, ಟಿಪ್ಪು ಸುಲ್ತಾನ್ ಹೇಳಿರಬಹುದಾದ ಮಾತುಗಳನ್ನೂ ಹಾಕಿ, ಕೆಳಗಡೆ ಇದನ್ನು ಹೇಳಿದವರು ಅಬ್ದುಲ್ ಕಲಾಂ ಎಂದು ಹಾಕಿ ಪೋಸ್ಟ್ ಮಾಡಿ ವಾಟ್ಸಾಪ್‌ನಲ್ಲಿ ಶೇರ್ ಮಾಡಲಾಗುತ್ತದೆ!!



ಈ ಕಾಲದ ಕೋಮುವಾದಿ. ರಾಜಕಾರಣ ಏನೇನನ್ನು ಮಾಡಬಹುದು ಎಂಬುದನ್ನು ಕೇವಲ ಊಹೆಯ ಮೇಲೆ ಕಲ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಕಲ್ಪಿಸಿಕೊಳ್ಳಬಹುದಾದ್ದಕ್ಕಿಂತ ಭೀಕರವಾಗಿ ಅದನ್ನು ಅವರು ಕ್ರಿಯೆಗಿಳಿಸುತ್ತಾರೆ.

ಅದೇನೇ ಇದ್ದರೂ, ಇದರ ಆರಂಭವು ಐಡೆಂಟಿಟಿ ರಾಜಕಾರಣದಿಂದ ಶುರುವಾಯಿತು ಎಂಬುದರಲ್ಲಿ ಅನುಮಾನವೇ ಇಲ್ಲ. ಇದಕ್ಕೆ ದಲಿತ ಚಳವಳಿಯೇ ಕಾರಣ ಎಂದು ಕೆಲವರು ಹೇಳುತ್ತಾರೆ. ವಾಸ್ತವದಲ್ಲಿ ಇದಕ್ಕೆ ದಲಿತ ಚಳವಳಿ ಕಾರಣವಲ್ಲ, ದಲಿತ ಚಳವಳಿಯ ಪ್ರಧಾನ ಧಾರೆ ಹಿಡಿದ ಅಡ್ಡಹಾದಿ ಕಾರಣ ಎಂದಷ್ಟೇ ಹೇಳಬಹುದು. ಏಕೆಂದರೆ, ದಲಿತ ಎಂಬ ಪದದ ನಿರ್ವಚನವನ್ನು ಜಾತಿಗೆ ಸೀಮಿತಗೊಳಿಸಿ ಆ ಚಳವಳಿಯು ಮಾಡಿರಲಿಲ್ಲ, ಹಲವು ಸಮುದಾಯಗಳಿಗೆ ಸೇರಿದವರು ಅದರಲ್ಲಿ ಕಡಿಮೆ ಪ್ರಮಾಣದಲ್ಲಿಯಾದರೂ ಇದ್ದರು ಮತ್ತು ವಿವಿಧ ಸಮುದಾಯಗಳಿಗೆ ಸೇರಿದ ಸಮಸ್ಯೆಗಳನ್ನು ತೆಗೆದುಕೊಂಡೂ ಅದು ಹೋರಾಟ ಮಾಡಿತ್ತು. ದಲಿತ ಚಳವಳಿಯ ಮೂಲ ಉದ್ದೇಶ ಜಾತಿವಿನಾಶವಾಗಿತ್ತಾದ್ದರಿಂದ, ಅದು ಐಡೆಂಟಿಟಿಯನ್ನು ಬೆಳೆಸುವುದು ಆಗಿರಲಿಲ್ಲ. ಇಂದು ದಲಿತ ಚಳವಳಿ ಎಂದು ಯಾವುದನ್ನು ಗುರುತಿಸಲಾಗುತ್ತಿದೆಯೋ, ಅದು ಇದೇ ರೀತಿ ಉಳಿದುಕೊಂಡಿಲ್ಲ ಎಂಬುದು ವಾಸ್ತವ. ಹಾಗಾಗಿಯೇ ಅಂಬೇಡ್ಕರ್ ಒಬ್ಬರನ್ನು ತಮ್ಮ ಸ್ವಾಭಿಮಾನೀ ಚಿಂತನೆಯ ಸಮಗ್ರ ಆಶೋತ್ತರಗಳನ್ನು ಬಿಂಬಿಸುವ ಏಕೈಕ ಐಕಾನ್ ಎಂದು ಒಪ್ಪುವುದು ಇಡೀ ದಲಿತ ಸಮುದಾಯಕ್ಕೆ ಸಾಧ್ಯವಾಗಿಲ್ಲ.



ಇದಕ್ಕೆ ಆ ಚಳವಳಿಯ ಒಳಗಿನ ಕಾರಣಗಳು ಮಾತ್ರ ಇದ್ದವು ಎನಿಸುವುದಿಲ್ಲ. ಈ ವ್ಯವಸ್ಥೆಯೊಳಗೆ ಅದು ಛಿದ್ರವಾಗುವುದನ್ನು ಬಯಸುತ್ತಿದ್ದ ಇದ್ದವು ಮತ್ತು ಅದರ ಹುನ್ನಾರವನ್ನು ಅ ವಿಫಲಗೊಳಿಸುವುದು ಚಳವಳಿಯ ಒಳಗಿ ಆಗಲಿಲ್ಲ.

ಇವೆಲ್ಲದರ ಪರಿಣಾಮವಾಗಿ ಇಂದು ಜಯಂತಿಗಳನ್ನು ಸರ್ಕಾರವು ಮಾಡಬಾರದ ನಾವೇನಾದರೂ ಪ್ರತಿಪಾದಿಸಿದರೆ, ಬಲಾಢ್ಯ ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ಅಂಬೇ ಜಯಂತಿಯಿಂದ ಶುರು ಮಾಡಬೇಕೆಂದು ದಲಿತ ಸಮುದಾಯದ ಭಾಗವಾಗಿರುವ ಸಮುದಾಯವು ಬಾಬು ಜಗಜೀವನರಾಂ ಜಯಂತಿಯನ್ನು ತೆಗೆಯಬೇಕೆಂದರೂ ಒ ಹೀಗಾಗಿ 'ಮಹಾಪುರುಷ'ರೆಂದು ಸರ್ಕಾರ ಅನಿವಾರ್ಯವಾಗಿ ಘೋಷಿಸಿರುವ ಎಲ್ಲರ ಚಿಂತನೆಗಳೂ ಮುಂದಿನ ದಿನಗಳಲ್ಲಿ ಜಯ ಮಾತ್ರವಲ್ಲದೇ, ಪಠ್ಯಗಳಲ್ಲೂ ಸೇರಬಹುದು ಫೋಟೋಗಳನ್ನು ಸರ್ಕಾರೀ ಕಚೇರಿಗಳಲ್ಲಿ ಮಾತ್ರವಲ್ಲದೇ, ಶಾಲಾಕಾಲೇಜುಗಳಲ್ಲೂ ಹ ಬರಬಹುದು. ಪ್ರಜಾಪ್ರಭುತ್ವದ ಆಶಯಗ ಮುಕ್ಕಾಗುವಂತೆ ಇವೆಲ್ಲವೂ ನಮ್ಮ ಕಣ್ಣೆದು ನಡೆಯಲಿದೆ. ಹೀಗಾಗಿ ಆದಷ್ಟು ಬೇಗ ಎಚ್ಚೆತ್ತುಕೊಂಡು ಇದಕ್ಕೊಂದು ಪರಿಹಾರ ಹುಡುಕುವುದು ಅನಿವಾರ್ಯವಾಗಿದೆ.

ಒಂದು ಪರಿಹಾರ ಹೀಗಿರಬಹುದು. ಜಯಂತಿಯ ಸಂದರ್ಭವನ್ನಿಟ್ಟುಕೊಂಡು ಚಾನೆಲ್, ಕೆಂಪೇಗೌಡರ ಆಶಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕೇ ಹೊರತು ವ್ಯ ಎಂದು ಚರ್ಚೆ ನಡೆಸಿತು. ಹಾಗಾಗಿ ಬೆಂಗ ಕೆರೆಗಳನ್ನು ಕಟ್ಟಿಸಿದ ಪುಣ್ಯಾತ್ಮನ ಜಯಂ ಸರ್ಕಾರವು ಕೆರೆಗಳ ವಿರೋಧಿ ಯೋಜನೆ ಮಾಡಬಾರದು ಎಂದು ಆಂಕರ್ ಕಿರುಚು ನಮ್ಮ ಚಾನೆಲ್‌ಗಳನ್ನು ಆವರಿಸಿಕೊಂಡಿರು ಜಾತಿಯ ಜನರಿಗೆ ಕೆಂಪೇಗೌಡ ಜಯಂತಿ ಸಂದರ್ಭದಲ್ಲಿ ಕಷ್ಟವಾಗಿರುವ ಸಾಧ್ಯತೆಯಿ ಹಾಗಾಗಿಯೂ ಅವರು ಇದನ್ನು ಮಾಡಿರ ಎಂಬ ಗುಮಾನಿ ಬಂದಿತು. ಅದೇನೇ ಇ ವಿಚಾರ ಸರಿಯಿದೆ.

ಯಾರೆಲ್ಲರನ್ನೂ ನಾವು ಮಹಾಪುರು ಬಗೆಯುತ್ತೇವೆಯೋ ಅವರ ಚಿಂತನೆಗಳನ್ನು ಪರಿಶೀಲಿಸೋಣ. ನಮ್ಮ ಸಂವಿಧಾನದ ಆ ಇಟ್ಟುಕೊಂಡು, ಈ ಮಹಾನುಭಾವರ ವಿ ಸದ್ವಿಚಾರಗಳು ಯಾವಿವೆಯೋ ಅವನ್ನು ನ ಪರಿಗಣನೆಗೆ ತೆಗೆದುಕೊಳ್ಳೋಣ. ಯಾವ ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಭ್ರಾತೃತ್ವಗಳಿಗೆ ಪೂರಕವಾಗಿದೆಯೋ ಅವ ನಮ್ಮದಾಗಿಸಿಕೊಳ್ಳೋಣ. ಇಂತಹ ಆಶಯ ಜಾರಿ ಮಾಡದ ಸರ್ಕಾರವು ಅವರ ಜಯ ಮಾಡಬಾರದು ಎಂಬ ಒತ್ತಡವನ್ನು ನಿಮಿ ಆಧುನಿಕ ಪ್ರಜಾಪ್ರಭುತ್ವವಾದಿ ಸರ್ಕಾರವು ಮಾಡಬೇಕಾದ್ದು ಇಷ್ಟನ್ನು ಮಾತ್ರ ಎಂಬು ನಿಲುವಾಗಿರಬೇಕು.

ಆ ಮೂಲಕ ಸರ್ಕಾರೀ ಜಯಂತಿಗಳ ಅಪ್ರಸ್ತುತಗೊಳಿಸುತ್ತಾ ಹೋಗಬೇಕು. ಯಾ ವಿಚಾರಗಳು ಸಂವಿಧಾನದ ಆಶಯಕ್ಕೆ (ಮ ಮೂಲಭೂತ ಹಕ್ಕುಗಳು ಮತ್ತು ರಾಜ್ಯ ತತ್ವಗಳಿಗೆ) ಪೂರಕವಾಗಿವೆಯೋ ಅವು ಮ ಬರುವಂತೆ ಮಾಡುವುದು ಬಹಳ ಬಹಳ ಮುಖ್ಯವಾಗಿವೆ. ಇಲ್ಲದಿದ್ದರೆ, ಮುಂದಿನ ಜ ನಾವು ಆದರ್ಶ ವ್ಯಕ್ತಿಗಳು ಯಾರು ಎಂದು ಬಿಂಬಿಸಬೇಕಾದರೆ ಕಷ್ಟವಾಗುತ್ತದೆ. ಬಹುಶ ಮುಂದೆ ಪ್ರತೀ ಜಯಂತಿಯ ಸಂದರ್ಭದ ನಡೆಯಬೇಕಾದ ಕೆಲಸವಿದು. ಈ ವರ್ಷ ಗೌರಿಬಿದನೂರಿನ ದಲಿತ ಸಂಘಟನೆಗಳು ಅಂಬೇಡ್ಕರ್ ಜಯಂತಿಯನ್ನು ಬಹಿಷ್ಕರಿಸಿ ಒಟ್ಟಾಗಿ ಪ್ರತ್ಯೇಕವಾಗಿ ಕಾರ್ಯಕ್ರಮವನ್ನು ಅಲ್ಲಿ ಅಂಬೇಡ್ಕರ್ ಅವರ ಆಶಯಗಳ ಕ ನಡೆಯಿತು. ಜಾತಿವಿನಾಶಕ್ಕೆ ಪೂರಕವಾಗು ರೀತಿಯಲ್ಲಿ ಎಲ್ಲಾ ಜಾತಿ ಸಮುದಾಯಗಳ ಒಳಗೊಳ್ಳಬೇಕಾದ್ದು ಆಗಿಲ್ಲ. ಪಾಂಡವಪುರ ವರ್ಷ ಅಲ್ಲಿನ ಶಾಸಕ ಕೆ.ಎಸ್.ಪುಟ್ಟಣ್ಣಯ್ 'ವಿಶ್ವಮಾನವರ ಜಯಂತಿ' ಹೆಸರಿನಲ್ಲಿ ಎ ಜಯಂತಿಗಳನ್ನೂ ಒಂದೆಡೆ ಆಚರಿಸುವ ಮಾಡಿದರು. ಈ ರೀತಿಯ ಬೇರೆ ಬೇರೆ ಹುಡುಕಿಕೊಳ್ಳುತ್ತಾ ಹೋಗುವ ಕರ್ತವ್ಯ ನ ಮೇಲಿದೆ.


“ಬ್ರೇಕಿಂಗ್ ನ್ಯೂಸ್: ಇವತ್ತು ದೇಶದ ಯಾವ ಭಾಗದಿಂದಲೂ ‘ಲಿಂಚಿಂಗ್’ ಪ್ರಕರಣ ವರದಿಯಾಗಿಲ್ಲ!”



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಹದಿನೈದು ವರ್ಷ ವಯಸ್ಸಿನ ಜುನೈದನ ಹಾಲುಗಲ್ಲದ ಮೇಲೆ ಇನ್ನೂ ಗಡ್ಡ ಮೂಡಿರಲಿಲ್ಲ. ಸೂರತ್‌ನಲ್ಲಿರುವ ಒಂದು ಮದರಸದಲ್ಲಿ ಓದುತ್ತಿದ್ದ ಜುನೈದ್ ಪವಿತ್ರ ರಮಜಾನ್ ತಿಂಗಳಲ್ಲಿ ಮಾತ್ರ ರಜೆ ಪಡೆದು ದೆಹಲಿಗೆ ಹತ್ತಿರದಲ್ಲೇ ಇರುವ ಹರಿಯಾಣಾದ ತನ್ನ ಹಳ್ಳಿಗೆ ಭೇಟಿ ಕೊಡುತ್ತಿದ್ದ. ಈದ್ ಮುಗಿದ ನಂತರ ಸೂರತ್‌ಗೆ ವಾಪಸ್ಸಾಗುತ್ತಿದ್ದ. ಕಳೆದ ವಾರ 26ರ ರಮಜಾನ್ ಹಬ್ಬಕ್ಕೆ ಹೊಸ ಬಟ್ಟೆ ಖರೀದಿಸಲು ತನ್ನ ಅಮ್ಮ ಸೈರಾ ಅವರಿಂದ ಹಣ ಪಡೆದು ತನ್ನ ಅಣ್ಣ ಹಾಶಿಮ್ ಮತ್ತು ಇನ್ನಿಬ್ಬರು ಮಿತ್ರರೊಂದಿಗೆ ದೆಹಲಿಗೆ ಹೋಗಿದ್ದ. ಬಟ್ಟೆ ಮತ್ತು ಇತರೆ ಸಾಮಾನುಗಳನ್ನು ಖರೀದಿಸಿ ಎಲ್ಲರೂ ಲೋಕಲ್ ಟ್ರೈನ್ ಹತ್ತಿದರು. ರಿಸರ್ವೇಶನ್ ಇಲ್ಲದ ಬೋಗಿಯಲ್ಲಿ ಅವರೆಲ್ಲರೂ ತಮ್ಮ ಮೊಬೈಲ್‌ಗಳಲ್ಲಿ ಲೂಡೋ ಆಟವಾಡುತ್ತಾ ಕೂತರು.




ಅವರೆಲ್ಲರೂ ಜುಬ್ಬ ಪೈಜಾಮ ತೊಟ್ಟಿದ್ದರು ಮತ್ತು ತಲೆಯ ಮೇಲೆ ಟೋಪಿ ಇದ್ದವು. ಓಕ್ಲಾ ನಿಲ್ದಾಣದಲ್ಲಿ ಸುಮಾರು 25 ಜನ ಅದೇ ಬೋಗಿ ಪ್ರವೇಶಿಸಿದರು. ಅವರೆಲ್ಲರೂ ದೆಹಲಿಯ ಹೊರವಲಯದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಹಿಂದೂಗಳು. ಹಲವರ ಪ್ರಕಾರ ಸೀಟ್ ವಿಷಯ ಕುರಿತು ಮುಸಲ್ಮಾನ ಹುಡುಗರೊಂದಿಗೆ ವಾಗ್ವಾದ ಶುರುವಾಯಿತು. ಇನ್ನು ಕೆಲವರ ಪ್ರಕಾರ ನಿಂತಿದ್ದ ಜುನೈದನನ್ನು ಹೊಸದಾಗಿ ಬೋಗಿ ಪ್ರವೇಶಿಸಿದ ಒಬ್ಬ ಜೋರಾಗಿ ನೂಕಿದ್ದರಿಂದ ಆತ ಬಿದ್ದು ಬಿಟ್ಟ. ಅದನ್ನು ಮುಸಲ್ಮಾನ ಯುವಕರು ಪ್ರತಿಭಟಿಸಿದಾಗ ವಾಗ್ವಾದ ಶುರುವಾಯಿತು. ವಾಗ್ವಾದ ಹೇಗೇ ಶುರುವಾಗಿರಲಿ, ಅದು ಅಂತ್ಯಗೊಂಡಿದ್ದು ಮಾತ್ರ ಭೀಕರವಾಗಿ.

ಗಲಾಟೆ ಶುರುವಾಗುತ್ತಿದ್ದಂತೆ ಹಾಶಿಮ್ ತನ್ನ ಅಣ್ಣ ಶಾಕಿರ್‌ಗೆ ಫೋನ್ ಮಾಡಿ “ಬೇಗನೆ ರೈಲ್ವೆ ನಿಲ್ದಾಣಕ್ಕೆ ಬಂದು ನಮ್ಮನ್ನು ಕರೆದುಕೊಂಡು ಹೋಗು. ಇಲ್ಲಿ ಗಲಾಟೆ ಆಗುತ್ತಿದೆ” ಎಂದು ಹೇಳಿದ. ಆಗ ಹಿಂದೂ ಗೂಂಡಾಗಳು ಮುಸಲ್ಮಾನ ಯುವಕರ ಟೋಪಿ ಕಿತ್ತೆಸೆದಿದ್ದಾರೆ, ನೂಕಿದ್ದಾರೆ, ಹೊಡೆದಿದ್ದಾರೆ, ಗಡ್ಡ ಹಿಡಿದು ಜಗ್ಗಿದ್ದಾರೆ. ಜೊತೆಗೆ “ನೀವು ಮುಸಲ್ಮಾನರು. ಸುನತಿ ಮಾಡಿಸಿಕೊಂಡಿರುವವರು. ಗೋಮಾಂಸ ತಿನ್ನುವವರು. ಪಾಕಿಸ್ತಾನಕ್ಕೆ ಹೋಗಿ” ಎಂದೆಲ್ಲ ಬೈದಿದ್ದಾರೆ. ಆಘಾತಕಾರಿಯಾದ ಸಂಗತಿ ಯಾವುದೆಂದರೆ, ಬೋಗಿಯಲ್ಲಿದ್ದ ಇತರರು ಅವರ ಗೂಂಡಾಗಿರಿಯನ್ನು ತಡೆಯುವ ಬದಲು ಅವರನ್ನು ಪ್ರೋತ್ಸಾಹಿಸಿದ್ದಾರೆ. “ಅವರನ್ನ ಹೊಡಿಯಿರಿ, ಓಡಿಸಿರಿ” ಎಂದೆಲ್ಲಾ ಪ್ರಚೋದಿಸಿದ್ದಾರೆ. ಆಗ ಯಾರೋ ಇಬ್ಬರು ಚಾಕುಗಳನ್ನು ಹೊರತೆಗೆದು ಆ ಮುಸಲ್ಮಾನ ಯುವಕರನ್ನು ಇರಿದಿದ್ದಾರೆ. ಅಷ್ಟು ಹೊತ್ತಿಗೆ ಶಾಕಿರ್ ನಿಲ್ದಾಣಕ್ಕೆ ಬಂದಿದ್ದ, ಅವನನ್ನೂ ಬೋಗಿಯೊಳಗೆ ಸೆಳೆದ ಗೂಂಡಾಗಳು ಅವನ ಮೇಲೆಯೂ ದಾಳಿ ಮಾಡಿದ್ದಾರೆ. ಕೊನೆಗೆ ರೈಲು ಅಸೋತಿ ತಲುಪಿದಾಗ ಶಾಕಿರ್, ಹಾಶಿಮ್ ಮತ್ತು ಜುನೈದನನ್ನು ಬೋಗಿಯಿಂದ ಹೊರಗೆಸೆದಿದ್ದಾರೆ.

ಆದರೆ ಅಷ್ಟು ಹೊತ್ತಿಗೆ ಜುನೈದನ ಪ್ರಾಣ ಹಾರಿಹೋಗಿತ್ತು, ಶಾಕಿರ್‌ನ ದೇಹ ಹಲವಾರು ಇರಿತಗಳಿಂದ ಗಾಯಗೊಂಡು ಆತ ಮೂರ್ಛೆ ಹೋಗಿದ್ದ, ಹಾಶಿಮ್‌ಗೂ ಗಾಯಗಳಾಗಿದ್ದವು. ರೈಲ್ವೆ ನಿಲ್ದಾಣದಲ್ಲಿ ಪೊಲೀಸರಿದ್ದರೂ ಇವರತ್ತ ಅವರು ಸುಳಿಯಲಿಲ್ಲ, ಇತರೆ ಯಾರೂ ನೆರವಿಗೆ ಬರಲಿಲ್ಲ. ಗಲಾಟೆಯಲ್ಲಿ ತಪ್ಪಿಸಿಕೊಂಡಿದ್ದ ಮೊಹಸಿನ್ ಎಂಬ ಇನ್ನೊಬ್ಬ ಹುಡುಗ ಮೂರ್ಛೆ ಹೋಗಿದ್ದ ಶಾಕಿರ್‌ನನ್ನು ಹೆಗಲಮೇಲೆ ಹೊತ್ತುಕೊಂಡು ಹೊರಗಿದ್ದ ಆಂಬುಲೆನ್ಸ್ ಹತ್ತಿಸಿದ. ಹಾಶಿಮ್ ಕೂಡ ಮುಸ್ತಾಕಿಮ್ ಎಂಬ ಇನ್ನೊಬ್ಬನ ನೆರವು ಪಡೆದು ನಡೆದುಕೊಂಡೇ ಆಂಬುಲೆನ್ಸ್ ಏರಿದ.

ಕುಟುಂಬದೊಂದಿಗೆ ಸಂತೋಷವಾಗಿ ಹಬ್ಬವನ್ನು ಆಚರಿಸಲು ಹೊರಟಿದ್ದ ಜುನೈದ್ ಎಂಬ ಅಮಾಯಕ ಬಾಲಕ ಮುಸಲ್ಮಾನ ಎಂಬ ಕಾರಣಕ್ಕೆ ಹೀಗೆ ಕೊಲೆಯಾದ. (ಹೀಗೆ




ಕೊಲೆಯಾದ ಜುನೈದ್

ಕೊಲೆ ಮಾಡುವುದನ್ನು ಇಂಗ್ಲಿಷ್‌ನಲ್ಲಿ ‘ಲಿಂಚಿಂಗ್’ ಅನ್ನುತ್ತಾರೆ.) ಆತನನ್ನು ಕೊಂದವರಲ್ಲಿ ಒಬ್ಬನನ್ನು ಪೊಲೀಸರು ಬಂಧಿಸಿದ್ದು, ಪ್ರಕರಣ ನಡೆದಾಗ ತಾನು ಪಾನಮತ್ತನಾಗಿದ್ದೆ ಎಂದೂ, ಮುಸಲ್ಮಾನರು ಗೋ ಮಾಂಸ ತಿನ್ನುವುದರಿಂದ ಆ ಯುವಕರ ಮೇಲೆ ದಾಳಿ ಮಾಡಲು ಇತರರು ತನ್ನನ್ನು ಪ್ರಚೋದಿಸಿದರೆಂದೂ ಆತ ಒಪ್ಪಿಕೊಂಡಿದ್ದಾನೆ.

ಇತ್ತೀಚೆಗೆ ಹಿಂದೂತ್ವ ಕೋಮುವಾದಿಗಳು ದನದ ಮಾಂಸ ತಿಂದರು ಎಂದೋ, ದನಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದರು ಎಂದೋ, ಹಿಂದೂ ಹುಡುಗಿಯನ್ನು ಮದುವೆಯಾಗಲು ನೆರವಾದರು ಎಂದೋ ಆರೋಪಿಸಿ ಮುಸಲ್ಮಾನರನ್ನು ಕೊಲ್ಲುವುದು ‘ನಾರ್ಮಲ್’ ಆಗುತ್ತಿದೆ. ಈ ಹಿಂದೆ, ಮೋದಿ ಪ್ರಧಾನಿ ಆಗುವ ಮುನ್ನ, ಇಂತಹ ಪ್ರಕರಣಗಳು ನಡೆದಿರಲಿಲ್ಲ ಎಂದಲ್ಲ, ನಡೆದಿದ್ದವು. ಆದರೆ ಅವು ಈಗಾಗುತ್ತಿರುವಂತೆ “ಮುಸಲ್ಮಾನರಿಗೆ ತಕ್ಕ ಪಾಠ ಕಲಿಸಬೇಕು”, “ಸಾಬರಿಗೆ ಅವರ ಜಾಗ ತೋರಿಸಬೇಕು” ಎಂಬ ಧೋರಣೆಯೊಂದಿಗೆ ಸಂಭವಿಸುತ್ತಿರಲಿಲ್ಲ ಮತ್ತು ಹೆಚ್ಚಿನವರು ಅದನ್ನು ಖಂಡಿಸುತ್ತಿದ್ದರು. ಆದರೆ ಈಗ ಪರಿಸ್ಥಿತಿ ಹೇಗಿದೆ ಎಂದರೆ, ಇದೇ ಬುಧವಾರ ಸಂಜೆ ದೇಶ ಮತ್ತು ವಿದೇಶಗಳಲ್ಲಿ ಇಂತಹ ಹತ್ಯೆಗಳನ್ನು ಖಂಡಿಸಿ ನಡೆಯುತ್ತಿರುವ ‘ನಾಟ್ ಇನ್ ಮೈ ನೇಮ್’ ಪ್ರತಿಭಟನೆಯ ಬಗ್ಗೆ ನನ್ನೊಂದಿಗೆ ನ್ಯಾಷನಲ್ ಕಾಲೇಜಿನಲ್ಲಿ ಓದಿದ ಜನರ ವಾಟ್ಸ್‌ಆಪ್ ಗುಂಪಿನೊಂದಿಗೆ ಹಂಚಿಕೊಂಡಾಗ, ಉಮಾನಾಥ್ ಎಂಬಾತ ಹೀಗೆ ಪ್ರತಿಕ್ರಿಯಿಸಿದ: “ನಿನ್ನ ಪೋಸ್ಟ್‌ಗಳು ಕೆಟ್ಟ ಅಭಿರುಚಿಯಿಂದ ಕೂಡಿರುತ್ತವೆ. ಸಮಾಜವನ್ನು ಗುಣಪಡಿಸುವ ಬದಲು ನಿನ್ನ ಅಭಿಪ್ರಾಯಗಳು ಸೌಹಾರ್ದತೆಯನ್ನು ಕೆಡಿಸುತ್ತವೆ.” ಸುಶಿಕ್ಷಿತ, ಗೃಹಸ್ಥ, ಉನ್ನತ ಹುದ್ದೆಗಳಲ್ಲಿರುವ ಇಂತಹ ಮೂರ್ಖರಿಗೆ ಬುದ್ಧಿ ಬರುವುದು ಯಾವಾಗ?

ಉತ್ತರ ಪ್ರದೇಶದ ದಾದ್ರಿಯಲ್ಲಿ ದನದ ಮಾಂಸ ತಿಂದ ಎಂದು ಆರೋಪಿಸಿ ಮೊಹಮ್ಮದ ಅಖ್ಲಾಕ್‌ನನ್ನು ಇದೇ ಗೋವು-ರಕ್ಷಕರು ಕೊಂದು ಹಾಕಿದರು. ಶ್ರೀನಗರದಲ್ಲಿ ಎಂಜಿನಿಯರ್ ರಶೀದ್ ಎಂಬ ಶಾಸಕ ತನ್ನ ಮಿತ್ರರಿಗೆ ಬೀಫ್ ಪಾರ್ಟಿ ಕೊಟ್ಟ ಎಂದು ಕುಪಿತಗೊಂಡ ಹಿಂದೂತ್ವ ಗ್ಯಾಂಗ್ ಒಂದು, ಉಧಮಪುರ ಎಂಬಲ್ಲಿ ಬೀಫ್ ಪಾರ್ಟಿ ಪ್ರಕರಣಕ್ಕೂ ಜಾಹಿದ್ ರಸೂಲ್ ಭಟ್ ಎಂಬ 18 ವರ್ಷ ವಯಸ್ಸಿನ ಯುವಕನಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ, ಆತನ ಮೇಲೆ ಪೆಟ್ರೋಲ್ ಸುರಿದು ಕೊಂದುಹಾಕಿದರು.


ರಾಜಸ್ತಾನದ ಆಲ್ವರ್‌ನಲ್ಲಿ ಹೈನುಗಾರಿಕೆಗೆಂದು ಹಸುಗಳನ್ನು ಖರೀದಿಸಿ ಸಾಗಿಸುತ್ತಿದ್ದ ಪೆಹಲು ಖಾನ್ ಅವುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದಾನೆ ಎಂದು ಆರೋಪಿಸಿ ರಸ್ತೆ ಮಧ್ಯದಲ್ಲೇ ಕೊಂದು ಹಾಕಿದರು. ಅಸ್ಸಾಮ್ ರಾಜ್ಯದಲ್ಲಿ ಅಬು ಹನೀಫ ಮತ್ತು ರಿಯಾಜುದ್ದೀನ್ ಎಂಬ ಯುವಕರು ದನಗಳನ್ನು ಕದಿಯುತ್ತಿದ್ದರು ಎಂದು ಆರೋಪಿಸಿದ ಹಳ್ಳಿಗರು ಅವರಿಬ್ಬರನ್ನೂ ಕೊಂದು ಹಾಕಿದರು.



ಉತ್ತರ ಪ್ರದೇಶದಲ್ಲಿ ಮುಸಲ್ಮಾನ ಯುವಕನೊಬ್ಬ ಹಿಂದೂ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿದ. ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹುಟ್ಟುಹಾಕಿರುವ ಹಿಂದೂ ಯುವವಾಹಿನಿ ಎಂಬ ಸಂಘಟನೆಯ ಸದಸ್ಯರು ಆ ಮುಸಲ್ಮಾನ ಯುವಕನ ಸಂಬಂಧಿ ಘುಲಾಮ್ ಮೊಹಮ್ಮದ್ ಎಂಬ 66 ವರ್ಷ ವಯಸ್ಸಿನ ಹಿರಿಯನನ್ನು ಕೊಂದು ಹಾಕಿದರು.

ಇವೆಲ್ಲಾ ಕೊಲೆ ಪ್ರಕರಣಗಳು ಮೋದಿ ಅಧಿಕಾರಕ್ಕೇರಿದ ನಂತರ ನಡೆದಿರುವಂತಹವು. ಅಷ್ಟೇ ಮುಖ್ಯವಾಗಿ ಆ ಎಲ್ಲಾ ರಾಜ್ಯಗಳಲ್ಲಿ ಅಧಿಕಾರದಲ್ಲಿರುವುದು ಬಿಜೆಪಿ.

ಕರ್ನಾಟಕದಲ್ಲಿ ಮತ್ತು ಇತರೆ ರಾಜ್ಯಗಳಲ್ಲಿ ಗೋರಕ್ಷಣೆಯ ಹೆಸರಲ್ಲಿ ಕೊಲೆಗಳು ಮತ್ತು ಇತರೆ ಅಪರಾಧಗಳು ನಡೆದಿಲ್ಲ ಎಂದಲ್ಲ. ಇಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಹಲವಾರು ಮುಸಲ್ಮಾನ ಯುವಕರು ಗೋ ಗೂಂಡಾ ಪಡೆಗಳಿಗೆ ಬಲಿಯಾಗಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದನಂತರ ಬಿಜೆಪಿಯ ಸದಸ್ಯನೇ ಆಗಿದ್ದ ಪ್ರವೀಣ್ ಪೂಜಾರಿಯನ್ನು ಹಿಂದೂ ಜಾಗರಣ ವೇದಿಕೆಯ ಪಾತಕಿಗಳೇ ಕೊಂದು ಹಾಕಿದರು. ಇಂತಹ ಪ್ರಕರಣಗಳು ಇತರೆ ರಾಜ್ಯಗಳಲ್ಲೂ ನಡೆದಿವೆ. ಇಂಡಿಯಾ ಸ್ಪೆಂಡ್ ಎಂಬ ವೆಬ್‌ಸೈಟ್ ನಡೆಸಿರುವ ಸಮೀಕ್ಷೆಯ ಪ್ರಕಾರ ಗೋರಕ್ಷಣೆ ಹೆಸರಲ್ಲಿ ಸಂಭವಿಸಿರುವ ಅಪರಾಧಗಳಲ್ಲಿ ಶೇ. 79.3 ಪ್ರಕರಣಗಳು ಉತ್ತರ ಭಾರತದ 12 ರಾಜ್ಯಗಳಲ್ಲಿ ನಡೆದಿವೆ. ಶೇ. 14.3 ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ನಡೆದಿವೆ. ಹಾಗೆಯೇ ಶೇ. 6.3 ಪ್ರಕರಣಗಳು ಈಶಾನ್ಯ ಭಾಗದ (ಪಶ್ಚಿಮ ಬಂಗಾಳವೂ ಸೇರಿದಂತೆ) 9 ರಾಜ್ಯಗಳಲ್ಲಿ ನಡೆದಿವೆ. ಈ ಅಂಕಿಅಂಶಗಳು ಏನನ್ನು ಸ್ಪಷ್ಟಪಡಿಸುತ್ತವೆ



ಎಂದರೆ, ಮೋದಿ ಅಧಿಕಾರಕ್ಕೇರಿದ ನಂತರ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಹಿಂದೂತ್ವದ ಹರಾಮಿಗಳು ಯಾವ ಲಂಗುಲಗಾಮೂ ಇಲ್ಲದೆ ಅಮಾಯಕರನ್ನು ಕೊಲೆಗೈಯುತ್ತಿದ್ದಾರೆ.

ಎಲ್ಲಕ್ಕಿಂತ ಆಘಾತಕಾರಿಯಾದದ್ದು ಯಾವುದೆಂದರೆ ಇಂತಹ ಕೊಲೆಗಳು ನಡೆದಾಗ ಮೋದಿ ಆದಿಯಾಗಿ ಬಿಜೆಪಿ ಮತ್ತು ಆರೆಸ್ಸೆಸ್‌ನ ಹಲವಾರು ಸಂಘಟನೆಗಳ ಯಾವ ತುಂಡು ನಾಯಕನೂ ಚುಟಿಪಿಟಕ್ ಎನ್ನದೇ ಸುಮ್ಮನಿರುವುದು. ಆ ಮೂಲಕ ಇಂತಹ ಕೊಲೆಗಡುಕರಿಗೆ ಕುಮ್ಮಕ್ಕು ಕೊಡುವುದು.

ಉದಾಹರಣೆಗೆ, ಜುನೈದ್‌ನ ಕೊಲೆಯಾದ ದಿನವೇ ಶ್ರೀನಗರದಲ್ಲಿ ಮೊಹಮ್ಮದ್ ಆಯುಬ್ ಪಂಡಿತ್ ಎಂಬ ಪೊಲೀಸ್ ಅಧಿಕಾರಿ ಮಸೀದಿಯಲ್ಲಿ ಪ್ರಾರ್ಥನೆಗೆ ಸೇರಿದ್ದ ಜನರ ಮಾಹಿತಿ ಸಂಗ್ರಹಿಸುತ್ತಿದ್ದಾನೆಂದು ಭಾವಿಸಿದ ಜನ ಆತನನ್ನು ಅಮಾನುಷವಾಗಿ ಕೊಂದು ಹಾಕಿದರು. ಅದು ವ್ಯಾಪಕ ಖಂಡನೆಗೆ ಗುರಿಯಾಯಿತು. ಪ್ರತ್ಯೇಕತಾವಾದಿಗಳ ನಾಯಕ ಎಂದೇ ಗುರುತಿಸಲ್ಪಡುವ ಮಿರ್‍ವೈಜ್ ಉಮರ್ ಫರೂಕ್ ಕೂಡ ಅದನ್ನು ಖಂಡಿಸಿದರಲ್ಲದೆ, ಇದು ನಮ್ಮ ಧರ್ಮಕ್ಕೆ ವಿರೋಧವಾದ ನಡೆ ಎಂದರು. ಪರೇಶ್ ರಾವಲ್ ತರಹದ ಮೋದಿ ಬೆಂಬಲಿಗರು ಮೊಹಮ್ಮದ್ ಆಯುಬ್ ಪಂಡಿತ್‌ನ ಕೊಲೆಯನ್ನು ಖಂಡಿಸಿದರು ಮಾತ್ರ; ಜುನೈದ್ ಬಗ್ಗೆ ಒಂದು ಮಾತೂ ಆಡಲಿಲ್ಲ.

ಮೋದಿ ಮತ್ತಾತನ ಸಂಗಡಿಗರ ಇಂತಹ ಮೌನದ ಬಗ್ಗೆ ಆಲ್ಟ್‌ನ್ಯೂಸ್ ಎಂಬ ವೆಬ್‌ಸೈಟ್ ನಡೆಸುವ ಪ್ರತೀಕ್ ಸಿನ್ಹ ಅವರು ಇನ್ನೊಂದು ಕುತೂಹಲಕಾರಿ ಅಂಶವನ್ನು ಬಹಿರಂಗಪಡಿಸಿದ್ದಾರೆ. ಅದು ಹೀಗಿದೆ: ಇತ್ತೀಚೆಗೆ ಕೇರಳದಲ್ಲಿ ಜಾನುವಾರು ಮಾರಾಟ ನಿಷೇಧ ಕಾಯಿದೆಯನ್ನು ವಿರೋಧಿಸಿ ನಡೆಸಿದ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಪಕ್ಷದ ಒಬ್ಬಾತ ಸಾರ್ವಜನಿಕವಾಗಿಯೇ ಒಂದು ಹಸು ಕರುವನ್ನು ಕೊಂದು ಹಾಕಿದ. ಅದನ್ನು ಖಂಡಿಸಿ ಬರೋಬ್ಬರಿ ನೂರು ಬಿಜೆಪಿ ನಾಯಕರು ಟ್ವೀಟ್ ಮಾಡಿದ್ದರು. ಆದರೆ ಅದಕ್ಕೂ ಮುನ್ನ ಪೆಹಲು ಖಾನ್ ಅವರನ್ನು ಚೆಡ್ಡಿಗಳು ಕೊಂದಾಗ ಆ ನೂರು ಜನರಲ್ಲಿ ಯಾವೊಬ್ಬನೂ ಒಂದು ಅಕ್ಷರವನ್ನೂ ಟ್ವೀಟ್ ಮಾಡಿರಲಿಲ್ಲ.”

ಈಗ ಮೋದಿ ಅಮೆರಿಕ ಪ್ರವಾಸದಲ್ಲಿರುವುದರಿಂದ ಟ್ವಿಟರ್‌ನಲ್ಲಿ ಹಲವರು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸಿದ್ದಾರೆ. ವಿಸ್ಮಯ್ ಬಸು ಎಂಬುವವರು “ಅಮೆರಿಕದ ಅಧ್ಯಕ್ಷನ ವೈಟ್‌ಹೌಸ್ ಫ್ರಿಡ್ಜ್‌ನಲ್ಲಿ ದನದ ಮಾಂಸ ಇದ್ದರೆ ಮೋದಿ ಏನನ್ನುತ್ತಾರೆ?” ಎಂದು ಪ್ರಶ್ನಿಸಿದ್ದಾರೆ. ಇನ್ನೊಬ್ಬರು “ದನದ ಮಾಂಸ ತಿನ್ನುವ ಟ್ರಂಪ್‌ನನ್ನು ಮೋದಿ ಅಪ್ಪಿಕೊಳ್ಳಬಹುದಾದರೆ ಇಲ್ಲಿ ದನದ ಮಾಂಸ ತಿನ್ನುವವರನ್ನು ಯಾಕೆ ಅವರ ಭಕ್ತರು ಅಪ್ಪಿಕೊಳ್ಳುತ್ತಿಲ್ಲ?” ಎಂದಿದ್ದಾರೆ.

ಅಮೆರಿಕದಲ್ಲಿ ಮೋದಿ “ನನ್ನ ಸರ್ಕಾರದ ವಿರುದ್ಧ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ” ಎಂದು ಕೊಚ್ಚಿಕೊಂಡಿದ್ದಾನೆ. ಅದಕ್ಕೆ ಪ್ರತಿಯಾಗಿ ‘ಐ ಆ್ಯಮ್ ಎ ಟ್ರೋಲ್’ ಎಂಬ ಪುಸ್ತಕದ ಲೇಖಕಿ ಸ್ವಾತಿ ಚತುರ್ವೇದಿ “ಗೋ ಭಯೋತ್ಪಾದಕರು ಮಾಡಿರುವ ಕೊಲೆಗಳು ಕಪ್ಪು ಚುಕ್ಕೆ ಅಲ್ಲವೇ?” ಎಂದಿದ್ದಾರೆ.


ಆದರೇನಂತೆ, ಇದ್ಯಾವುದೂ ಧರ್ಮೋನ್ಮತ್ತರಾದ ಚೆಡ್ಡಿಗಳ ಹೀನ ತಲೆಗೆ ಹೋಗುವುದಿಲ್ಲ, ಆದ್ದರಿಂದ ಬರುವ ದಿನಗಳಲ್ಲೂ ಗೋವಿನ ಹೆಸರಲ್ಲಿ ಇನ್ನಷ್ಟು ಹೆಣಗಳು ಉರುಳುವುದರ ಬಗ್ಗೆ ಯಾರಲ್ಲೂ ಸಂಶಯವಿಲ್ಲ. ಇದು ಯಾವ ಮಟ್ಟಕ್ಕೆ ಹೋಗಲಿದೆ ಎಂದರೆ, ರವಿಕಿರಣ್ ಎಂಬುವವರು ಹೀಗೆ ಟ್ವೀಟ್ ಮಾಡಿದ್ದಾರೆ: “ಬ್ರೇಕಿಂಗ್ ನ್ಯೂಸ್: ಇವತ್ತು ದೇಶದ ಯಾವ ಭಾಗದಿಂದಲೂ ‘ಲಿಂಚಿಂಗ್’ ಪ್ರಕರಣ ವರದಿಯಾಗಿಲ್ಲ.”

ಬರಲಿರುವ ಅಂತಹ ಕರಾಳ ದಿನಗಳನ್ನ ನೆನೆದರೆ ಆತಂಕವಾಗುತ್ತದೆ....



ಪೇಜಾವರರ ಇಫ್ತಾರ್ ಕೂಟ; ಮುತಾಲಿಕ್ ಮಳ್ಳಾಟ



ಉಡುಪಿ ಮಠದ ಇಫ್ತಾರ್ ಕೂಟ



ಇದು ವಿಚಿತ್ರವಾದರೂ ಸತ್ಯ!

ಹಿಂದೂತ್ವ ದರ್ಬಾರಿನ 'ರಾಜರ್ಷಿ' ಪೇಜಾವರ ಮಠಾಧೀಶ ವಿಶ್ವೇಶತೀರ್ಥ ತಮ್ಮ ಶಿಷ್ಯ ಪರಿವಾರ ಪರಮಶತ್ರುಗಳೆಂದೇ ಘೋಷಿಸಿ ಅಟ್ಟಾಡಿಸುತ್ತಿರುವ ಮುಸಲ್ಮರನ್ನು ಕೃಷ್ಣ ಮಠಕ್ಕೇ ಕರೆದು ಕಾಫಿ-ತಿಂಡಿ ಕೊಟ್ಟು ಕಳಿಸಿದ್ದಾರೆ!! ದ್ವೈತ ಸಿದ್ಧಾಂತಿ ಪೇಜಾವರರ ನಡೆ-ನುಡಿಯಲ್ಲಿ ಸದಾ ದ್ವಂದ್ವ-ವಿರೋಧಾಭಾಸವೇ. ಬಾಬರಿ ಮಸೀದಿ ಕೆಡವಿ ರಾಮಮಂದಿರ ಕಟ್ಟುವ 'ಸಂಕಲ್ಪ ಸಂಘ'ದ ಪ್ರೇರಣಾ ಮೂರ್ತಿಯಾದ ಪೇಜಾವರರಿಗೆ ಇದ್ದಕ್ಕಿದ್ದಂತೆ ಸಾಬಿಗಳ ಜತೆ ಕೂತು ಫಲಹಾರ ತಿನ್ನುತ್ತ 'ರಂಜಾನ್ ಮುಬಾರಕ್' ಹೇಳುವ ಹುಕಿ ಬಂದಿದ್ದು ಇಡೀ ದೇಶವನ್ನೇ ದಿಗ್ಮೂಢಗೊಳಿಸಿಬಿಟ್ಟಿದೆ!

ಗೋಮಾಂಸ ತಿನ್ನುವ ಆಹಾರ ಪದ್ಧತಿಯ ದಲಿತ-ಮುಸ್ಲಿಮರ ಹಿಂದೂ ಗೋಗೂಂಡಾಗಳ ಕೊಂದು ಮುಕ್ಕುತ್ತಿರುವ, ದಲಿತ-ದಮನಿತರು ಉಡುಪಿ ಚಲೋ ನಡೆಸಿರುವ, ದಲಿತರು ನಡೆದ ಉಡುಪಿ ಬೀದಿ ಶುದ್ಧೀಕರಿಸುವ ಕರಸೇವೆಯ ಚಕ್ರವರ್ತಿ ಸೂಲಿಬೆಲೆ ಎಂಬ ಸೋಗಲಾಡಿ ಕೃಷ್ಣ ಮಠಕ್ಕೆ ಮೇಲಿಂದ ಮೇಲೆ ಪ್ರದಕ್ಷಿಣೆ ಹಾಕುತ್ತಿರುವುದು, ಪಂಕ್ತಿ ಭೇದ, ಕನಕ ಗೋಪುರ ವಿವಾದ ಮುಂತಾದ ಅಪಸವ್ಯಗಳ ಸಂದಿಗ್ಧ-ಸಂಕಟಕ್ಕೆ ಪೇಜಾವರ ಸ್ವಾಮಿ ಈಡಾಗಿರುವ ಕಾಲಘಟ್ಟವಿದು. ತನ್ನ ಕಳಾವೃದ್ಧಿಗೆ ಸ್ವಾಮೀಜಿ ಸಾಬಿಗಳ ಜತೆ ಕುಂತು, ತಿಂಡಿ-ತೀರ್ಥ ನೀಡಿ ಸ್ನೇಹ-ಸೌಹಾರ್ದದ 'ರಿಸ್ಕ್' ತೆಗೆದುಕೊಂಡರಾ? ಅಥವಾ ಸಾಬರನ್ನು ಬಿಜೆಪಿಯತ್ತ ಸೆಳೆದು ಮತ್ತೆ ಮೋದಿಯನ್ನು ಪ್ರಚಂಡ ಬಹುಮತದಿಂದ ಪ್ರಧಾನಿ ಮಾಡಿ, ನಂತರ ಬಹುಮತದಿಂದ ಸಂವಿಧಾನವನ್ನೇ ಬದಲಿಸಿ ಸಾಬರನ್ನು ಕಾನೂನುಬದ್ಧವಾಗೇ ಓಡಿಸುವ ಸಂಘಿ ಹಿಡನ್ ಅಜೆಂಡಾ ಕುತಂತ್ರವಾ ಇದು? ಇದ್ಯಾವುದೂ ಗೊತ್ತಿಲ್ಲ. ಸದ್ಯಕ್ಕೆ ಅರ್ಥವೂ ಆಗುವುದಿಲ್ಲ.



ಆದರೆ ಹೊರನೋಟಕ್ಕೆ ಕಟ್ಟರ್ ಹಿಂದೂ ಸನ್ಯಾಸಿ ಪೇಜಾವರರು ಮುಸ್ಲಿಮರನ್ನು ಮಠಕ್ಕೆ ಆಹ್ವಾನಿಸಿ ಈದ್ ಶುಭಾಷಯ ಹೇಳಿದಿದ್ದೆಯಲ್ಲ ಇದರಲ್ಲಿ ಯಾವ ಕೊಂಕು, ಕುಹಕ, ಶಂಕೆಗೆ ಆಸ್ಪದವೇ ಇಲ್ಲ. ಭಾರತದ ಉದ್ದಗಲಕ್ಕೆ ಹಿಂದೂ-ಮುಸ್ಲಿಮರ ಮಧ್ಯೆ ಅಪನಂಬಿಕೆ-ಅನುಮಾನ-ಜಿದ್ದು-ಸೇಡು ಸಂಘ ಪರಿವಾರ ಬೆಳೆಸಿರುವ ಈ ವಿಷಮಸ್ಥಿತಿಯಲ್ಲಿ ಪೇಜಾವರ ಸ್ವಾಮೀಜಿ ಸೌಹಾರ್ದತೆ-ಪರಧರ್ಮ ಸಹಿಷ್ಣುತೆ ಸಾಹಸ ಮಾಡಿದ್ದು ಇದೆಯಲ್ಲ, ಅದು ಸ್ತುತ್ಯಾರ್ಹ ಮತ್ತು ಸಂತೋಷದ ಸಂಗತಿ!! ಪೇಜಾವರರ 'ಐತಿಹಾಸಿಕ' ಪ್ರಯತ್ನ ಪ್ರಾಮಾಣಿಕವೇ ಆಗಿದ್ದರೆ ಹಿಂದೂತ್ವ ದಂಧೆ ಮಾಡಿಕೊಂಡಿರುವ ಕೇಸರಿ ಪುಂಡರು-ಗೂಂಡಾಗಳು ನಿರುದ್ಯೋಗಿಗಳಾಗೋದು ಖಂಡಿತ.

ಅತ್ತ ದಿಲ್ಲಿಯಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಆಯೋಜಿಸಿದ್ದ ಇಫ್ತಾರ್ ಕೂಟವನ್ನು ಭಜರಂಗಿ ಮೋದಿ ಮಾಮನ ಸರ್ಕಾರ ಬಹಿಷ್ಕರಿಸಿ ತನ್ನ ದೌರ್ಬಲ್ಯ ಪ್ರದರ್ಶಿಸಿದೆ; ಸಂಪ್ರದಾಯ-ಸಮುದಾಯವನ್ನು ಅವಹೇಳನ ಮಾಡಿದೆ; ಅದೇ ಹೊತ್ತಲ್ಲಿ ಇತ್ತ ಉಡುಪಿಯಲ್ಲಿ ಪೇಜಾವರ ಸ್ವಾಮಿ ಸಾಬರ ಜತೆಗೆ ಬೆರೆತು ರಂಜಾನ್ ಸಂಭ್ರಮ ಆಚರಿಸಿ ಹಿಂದೂತ್ವ ಗ್ಯಾಂಗನ್ನು ತಬ್ಬಿಬ್ಬು ಮಾಡಿದೆ. ಸ್ವಾಮೀಜಿಗೆ ಕಾಲಧರ್ಮ-ದೇಶ ಧರ್ಮ ಮತ್ತು ಧರ್ಮದ ಧರ್ಮ ಅರಿವಾಗಿದೆ ಎಂಬ ಭಾವನೆ ಮನುಷ್ಯತ್ವವಾದಿಗಳಿಗೆ ಬಂದಿದೆ. ಪೇಜಾವರರಲ್ಲಿ ಇಳಿವಯಸ್ಸಿನಲ್ಲಿ ಧರ್ಮ ಪ್ರಬುದ್ಧತೆ ಬಂದಿದೆ ಎಂಬ ಚರ್ಚೆಗಳು ನಡೆಯಲಾರಂಭಿಸಿದೆ.

ಪೇಜಾವರ ಸ್ವಾಮಿ 'ಚೆಕ್‌ಬಂಧಿ' ಯಲ್ಲಿ ಧರ್ಮಮತ್ತದರ ತಂಡ ಕಟ್ಟಿಕೊಂಡು ಅದಕ್ಕೆ ರಾಮಸೇನೆ ಎಂದು ಹೆಸರಿಟ್ಟು ಬಾಯಿಗೆ ಬಂದ ಅಪದ್ಧವೆಲ್ಲ ಬೊಗಳುತ್ತಿರುವ ಪ್ರಮೋದ್ ಮುತಾಲಿಕ್ ಸಿಕ್ಕಿ ಬಿದ್ದಿದ್ದಾನೆ. ಮುತಾಲಿಕ್-ಶೋಭಾ ಕರಂದ್ಲಾಜೆಯಂಥ ಕೂಗುಮಾರಿಗಳ ಟ್ರೇಡ್‌ಕಾರ್ಡೇ ಹಠಾತ್ ಬಿದ್ದು ಹೋದಂತಾಗಿದೆ. ಮುಸ್ಲಿಮರನ್ನು ಗುರಿಯಾಗಿಟ್ಟುಕೊಂಡು ಅಧಿಕಾರ-ಹಣ-ಪ್ರಸಿದ್ಧಿಯ ತಮ್ಮ ಧರ್ಮಕಾರಣಕ್ಕೆ ಪೇಜಾವರ ಸ್ವಾಮಿಯೇ ಮಾರ್ಗದರ್ಶಕ-ಸಂರಕ್ಷಕ ಎಂದು ಭಾವಿಸಿದ್ದ ಒಣ ಬಡಿವಾರದ ಗಿರಾಕಿ ಗಳಿವರೆಲ್ಲ, ಅಂಥ ಗುರುವೇ ಗುರಿ ಕಳಚಿ ಕೆಳಗಿಟ್ಟದ್ದು ಮುತಾಲಿಕ್ ಕಂಪನಿಗೆ ಕಂಗೆಡಿಸಿಬಿಟ್ಟಿದೆ. ಹಿಂದೂ-ಮುಸ್ಲಿಮ್ ಮಧ್ಯೆ ಸಾಮರಸ್ಯ-ಸ್ನೇಹ ಬೆಳೆದರೆ ಮುತಾಲಿಕ್-ಶೋಭಾರ ಮನೆ ಹಾಳು ಭಾಷಣ ಪಾಷಾಣ ಎರಚುವಿಕೆಗೆಲ್ಲಿ ಅವಕಾಶ ಇರುತ್ತದೆ?!

ತಾನು ಸ್ವ-ಧರ್ಮನಿಷ್ಠ ಪರಧರ್ಮ ಸಹಿಷ್ಣು ಎಂದು ಪೇಜಾವರ ಹೇಳಿದ್ದಕ್ಕೆ ತಕ್ಷಣ ಶೋಭಾ ಮತ್ತು ಮುತಾಲಿಕ್ ಮೈ-ಕೈ ಪರಚಿಕೊಂಡಿದ್ದಾರೆ. ಆದರೆ ಸಂಘ ಪರಿವಾರದ ಕಲ್ಲಡ್ಕ ಭಟ್ಟ, ಜಗದೀಶ ಕಾರಂತರಂಥ ಅನೇಕರಿಗೆ ಪೇಜಾವರರು ಕೃಷ್ಣಮಠ ಮತ್ತು ಸಾಬರ ನಡುವೆ ಪರಂಪರಾಗತವಾಗಿ ಅನ್ಯೋನ್ಯ ಸಂಬಂಧವಿದೆ ಎಂದು ಹೇಳಿರುವುದಿನ್ನೂ ಅರಗಿಸಿಕೊಳ್ಳಲಾಗಿಲ್ಲ. ಪರಧರ್ಮ ದ್ವೇಷದಿಂದ ಪ್ರಯೋಜನವಿಲ್ಲ, ನಾನು ಏರ್ಪಡಿಸಿದ್ದ ಫಲಹಾರ ಕೂಟಕ್ಕೆ ಕೋಮು ಕಲರ್ ಯಾಕೆ ಕೊಡ್ತೀರಿ ಎಂದು ಪೇಜಾವರ ಸ್ವಾಮೀಜಿ ಸಂಘ ಪರಿವಾರದ ಹಿಂದೂತ್ವದ ಅಸಲಿಗೇ ಆಘಾತ ಮಾಡಿಬಿಟ್ಟಿದೆ!!

ಪೇಜಾವರರು ಈಗ ಬೋಧಿಸುತ್ತಿರುವ ... ಸಹಿಷ್ಣುತೆ ಹಿಂದೂಗಳೆಲ್ಲ ಅಳವಡಿಸಿಕೊಂಡರ... ಅಮಾಯಕರ ಮನಸು ಕೆಡಿಸಿ ಬೇಳೆ ಬೇಯಿಸಿ ಕೊ... ಪಾಡೇನೆಂಬ ಚಿಂತೆಗೆ ಮುತಾಲಿಕ್ ಬಿದ್ದಿದ್ದಾನೆ... ಆತ ಎಲ್ಲೋ ಇದ್ದವನು ಮಠದ ಇಫ್ತಾರ್ ... ಸುದ್ದಿ ಕೇಳಿದ್ದೇ ಲಗುಬಗೆಯಿಂದ ಉ... ದೌಡಾಯಿಸಿದ್ದಾನೆ. ಪೇಜಾವರರನ್ನು ಮತ್ತೆ ... ವಿದ್ವೇಷದ ಹಿಂದೂತ್ವಕ್ಕೆ ಎಳೆದು ತರಲು ಹವ... ಮಠದ ಬಡಗು ಮಾಳಿಗೆಯಲ್ಲಿ ಪೇಜಾ... ಮುಖಾಮುಖಿಯಾಗಿ ಕುಂತು ಕನಲಿದ್ದಾನೆ. ... ಪ್ರಯೋಜನವೇನಾಗಿಲ್ಲ, ಹೊರಬಂದವನೇ ಸ್ವಾ... ಮಾಡಿದ್ದೇ ಸರಿ ಅಂತಾರೆ; ರಾಜ್ಯಾದ್ಯಂತ ... ಮಾಡುತ್ತೇವೆ ಎಂದು ಅಬ್ಬರಿಸಿ ಬೊಬ್ಬಿರಿದಿದಾ...

ಗೋಕುಲಾಷ್ಟಮಿಗೂ-ಇಮಾಮ್ ಸಾಬಿಗೂ... ಇರಲು ಸಾಧ್ಯವೇ ಇಲ್ಲ ಎಂಬ ಕುತರ್ಕ ಮುತಾ... ಉಡುಪಿ ಕೃಷ್ಣ ಮಠ ಮತ್ತು ಮುಸ್ಲಿಮ್‌ರ ... ದೊಡ್ಡ ಇತಿಹಾಸವೇ ಇದು. ಈ ಸಂಬಂಧ ಅನಾ... ಎಂಬ ಸಾಕ್ಷ್ಯಾಧಾರ ಸಮೇತದ ವಾದ ಪೇಜಾ... ತನ್ನ ಪರ್ಯಾಯ (ಕೃಷ್ಣ ವಿಗ್ರಹದ ಪೂಜಾ ಸರದಿ) ಸ... ಸಮಾರಂಭದಲ್ಲಿ ಮುಸ್ಲಿಮರು ಮುಕ್ತವಾಗಿ ಸಹ... 1904ರಲ್ಲೇ ಹಾಜಿ ಅಬ್ದುಲ್ಲಾ ಎಂಬ ಸಾ... ಗುರುವಿನ ಗುರುವನ್ನು ಮನೆಗೆ ಕರೆದುಕೊಂಡು... ಕಾಣಿಕೆ ಕೊಟ್ಟಿದ್ದಾರೆ. 800 ವರ್ಷಗಳ ... ಮಧ್ವಾಚಾರ್ಯರು ಮುಸ್ಲಿಮರ ಜತೆ ನಿಕಟ...

ಮೈಸೂರು: ಆಹಾರದ ವಿರುದ್ಧ ಚೆಡ್ಡಿಗಳ ಕೇಸರಿ ಕೇ...

ಫ್ಯಾಸಿಸ್ಟ್ ಪ್ರಭುತ್ವ ಅಧಿಕಾರದ ಚುಕ್ಕಾಣಿ ಹಿಡಿದು ಕೂತರೆ ನಾಗರಿಕ ಹಕ್ಕುಗಳ ಹೇಗೆಲ್ಲ ದಮನವಾಗುತ್ತವೆ ಅನ್ನೋದಕ್ಕೆ ಮೋದಿ ಸರ್ಕಾರವೇ ಪ್ರತ್ಯಕ್ಷ ಸಾಕ್ಷಿ. ಮೋದಿ ಅಧಿಕಾರಕ್ಕೇರಿದ ದಿನದಿಂದ ಒಂದಿಲ್ಲೊಂದು ಕೇಸರಿ ಬಂಡವಾಳದ ಆಘಾತದ ಮೂಲಕ ದೇಶದ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಯುತ್ತಲೇ ಇದೆ. ಜನರ ಹಕ್ಕುಗಳನ್ನು ಒಂದೊಂದಾಗಿ ಕಿತ್ತುಕೊಳ್ಳಲಾಗುತ್ತಿದೆ. ಮೈಸೂರಿನಲ್ಲಿ ಇತ್ತೀಚೆಗೆ ಪ್ರಗತಿಪರ ವಲಯದಿಂದ ನಡೆದ 'ಆಹಾರ ಪದ್ಧತಿ ಮತ್ತು ವ್ಯಕ್ತಿ ಸ್ವಾತಂತ್ರ್ಯ- ವಿಚಾರಸಂಕಿರಣ ಮತ್ತು ಸಂವಾದ' ಕಾರ್ಯಕ್ರಮದ ವಿರುದ್ಧ ನಡೆಯುತ್ತಿರುವ ವ್ಯವಸ್ಥಿತ ಪಿತೂರಿಯು ಅಂತದ್ದೇ ಒಂದು ಭಾಗ.

ಮೊನ್ನೆ ಕಲಾಮಂದಿರದ ಆವರಣದಲ್ಲಿ ಚಾರ್ವಾಕ ಸೋಷಿಯಲ್ ಅಂಡ್ ಕಲ್ಚರಲ್ ಟ್ರಸ್ಟ್ ಒಂದು ಕಾರ್ಯಕ್ರಮ ಏರ್ಪಡಿಸಿತ್ತು, ಗೋ-ರಾಜಕಾರಣದ ಮೂಲಕ ಜನರ ಆಹಾರ ಸ್ವಾತಂತ್ರ್ಯವನ್ನೇ ಕಿತ್ತುಕೊಳ್ಳಲು ಮುಂದಾಗಿರುವ ಕೇಂದ್ರ ಸರ್ಕಾರದ ಧೋರಣೆ ವಿರುದ್ಧ ನಡೆದ ಕಾರ್ಯಕ್ರಮ ಅದಾಗಿತ್ತಾದ್ದರಿಂದ ಸಹಜವಾಗಿಯೇ ದನದ ಮಾಂಸ ತಿನ್ನುವ ಮೂಲಕ ಅದನ್ನು ಉದ್ಘಾಟಿಸಲಾಗಿತ್ತು. ಆದರೆ ಅದನ್ನೇ


ಗೋ ಮಾಂಸ ಸೇವನೆ ವಿರುದ್ಧ ಮೈಸೂರು ಕನ್ನಡ ವೇದಿಕೆ ಕಾರ್ಯಕರ್ತರ ಪ್ರತಿಭಟನೆ


ದೊಡ್ಡದು ಮಾಡುತ್ತಿರುವ ಹಿಂದೂತ್ವವಾದಿಗಳು ಈಗ ಪ್ರತಿಭಟನಾ ಸ್ವಾತಂತ್ರ್ಯವನ್ನೂ ದಮನ ಮಾಡಲು ಮುಂದಾಗಿದ್ದಾರೆ.


ಅಷ್ಟಕ್ಕೂ ಅವತ್ತು ನಡೆದ ಸಂವಾದವಾಗಲಿ ಅಥವಾ ಸಾಂಕೇತಿಕ ಉದ್ಘಾಟನೆಯಾಗಲಿ ಈ ನೆಲದ ಕಾನೂನನ್ನು ಧಿಕ್ಕರಿಸುವಂತದ್ದೇನೂ ಆಗಿರಲಿಲ್ಲ. ಇಂಥ ಆಹಾರವನ್ನೇ ತಿನ್ನಬೇಕು ಎಂದು ಹೇಳುವ ಹಕ್ಕು ಯಾರಿಗೂ ಇಲ್ಲ. ಆದರೆ ಬಿಜೆಪಿ ಮತ್ತು ಪುರೋಹಿತಶಾಹಿ ವರ್ಗ ಜನರನ್ನು ಧರ್ಮಾಧಾರಿತ ಚೌಕಟ್ಟಿನಲ್ಲಿ ನಿಯಂತ್ರಣದಲ್ಲಿಟ್ಟುಕೊಳ್ಳಲು ಗೋವಿಗೆ ಭಾವನಾತ್ಮಕ ಸಂಬಂಧ ಬೆಸೆಯುತ್ತಿದೆ. ತನ್ನ ಹಿಡನ್ ಬಂಡವಾಳಶಾಹಿ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕೆಂದೇ ಗೋವು ಮಾರಾಟ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದಿದೆ. ಇದು ರೈತಾಪಿ ... ಮತ್ತಷ್ಟು ಸಂಕಷ್ಟಕ್ಕೆ ತಳ್ಳುವ ಕಾಯ್ದೆ.

ಅಲ್ಲದೇ ಗೋಹತ್ಯೆ ನಿಷೇಧ ಕಾಯಿದೆ ಜಾರಿ... ರೈತರು ದನ ಸಾಕುವುದನ್ನೇ ಬಿಟ್ಟುಬಿಡುತ್ತಾರೆ. ... ಗೋರಕ್ಷಣೆ ಹೇಗೆ ಸಾಧ್ಯ? 40 ಕೋಟಿ... ಜಾನುವಾರುಗಳ ಸಂಖ್ಯೆ ಮುಂದಿನ 20 ವರ್ಷ... ಕೋಟಿಗೆ ಇಳಿಯುತ್ತದೆ. ಆಗ ಕುಡಿಯಲು ... ಸಿಗುವುದಿಲ್ಲ, ಬೀಫ್ ಉದ್ಯಮದಲ್ಲಿ ಬದುಕು ಕ... ಸಣ್ಣಪುಟ್ಟ ಮುಸ್ಲಿಂ ಉದ್ಯಮಿಗಳನ್ನು ವ... ದೊಡ್ಡದೊಡ್ಡ ಬಂಡವಾಳಶಾಹಿಗಳಿಗೆ ಅ... ಮಾಡಿಕೊಡುವುದು ಈ ಕಾಯ್ದೆಯ ಉದ್ದೇ... ಜನವಿರೋಧಿ ಕಾಯ್ದೆಗಳನ್ನು ವಿರೋಧಿ... ಜವಾಬ್ದಾರಿಯುತ ನಾಗರಿಕ ಸಮೂಹದ ಕ... ದಿನ ಚಾರ್ವಾಕ ಸೋಷಿಯಲ್ ಅಂಡ್ ಕಲ್ಚರ... ಮಾಡಿದ್ದು ಕೂಡಾ ಅಂತದ್ದೇ ಒಂದು ಪ್ರಯತ್ನ...

ಆದರೆ ದನದ ಮಾಂಸ ತಿಂದಿದ್ದನ್ನೇ ರಾ... ಗೊಳಿಸಲು ಮುಂದಾಗಿರುವ ಕೇಸರಿ ಪಡೆ ಅನಗತ್ಯ... ಹುಟ್ಟುಹಾಕಲು ಮುಂದಾಗಿರೋದು ದ...


ದನದ ಮಾಂಸ ಸೇವನೆ ಮೂಲಕ ಕಾರ್ಯಕ್ರಮ ಉದ್ಘಾಟನೆ


ಬಿಜೆಪಿ, ಹಿಂದೂ ಸಂಘಟನೆ ಕಾರ್ಯಕರ್ತರು ಗೋಮಾಂಸ ಸೇವಿಸಿ... ಶುದ್ಧೀಕರಣ ಎಂದು ದನದ ಮೂತ್ರ ಎರಚುತ್ತಿರುವುದು



ಶೋಭಾ ಕರಂದ್ಲಾಜೆ

...ಂದಿದ್ದರು. ಮಧ್ವಾಚಾರ್ಯರು ಸಾಬರು ಮಾಡಿದ ಸನ್ಮಾನ-...ಡಿದ ಗೌರವ ತೆರೆದ ಹೃದಯದಿಂದ ಸ್ವೀಕರಿಸಿದ್ದಾರೆ. ...ಲಯದ ರಾಘವೇಂದ್ರ ಸ್ವಾಮಿ ದೇಗುಲಕ್ಕೆ ಜಾಗ ...ಟ್ಟದ್ದೇ ಮುಸ್ಲಿಮ್ ಸುಲ್ತಾನ. ಉತ್ತರಾದಿ ಮಠದ ಸತ್ಯಬೋಧ ...ಮಿಗೂ ಮುಸ್ಲಿಮ್ ದೊರೆಗಳ ಜತೆ ಅನ್ಯೋನ್ಯ ...ವಿತ್ತು.. ಎಂದು ಮುತಾಲಿಕ್ ಮನಸ್ಥಿತಿಯ ಢೋಂಗಿ ...ದೂತ್ವದ ಹುಕಾರರಿಗೆ ಪೇಜಾವರರು ಪಾಠ ಮಾಡಿದ್ದಾರೆ. ...ಥ ತಿಳಿವಳಿಕೆಯ ಪೇಜಾವರರು ಇಷ್ಟು ದಿನ ಬಾಬರಿ ...ಸಿದಿ ಕೆಡವಿದವರಿಗೆ, ಗೋಗೂಂಡಾಗಳಿಗೆ, ಅನೈತಿಕ ...ಲೀಸರಿಗೆಲ್ಲ ಮೂಗುದಾರ ಹಾಕುವ ಯೋಚನೆ ಮಾಡಲಿಲ್ಲ ...ಂಬುದೇ ಅಚ್ಚರಿಯ ತಮಾಷೆ!!

ಕೃಷ್ಣ ಗೋಪಾಲಕ-ಗೋರಕ್ಷಕ; ಸಾಬರು ಗೋಭಕ್ಷರು ...ಂಥವರನ್ನು ದೇಗುಲಕ್ಕೆ ಬರಮಾಡಿಕೊಂಡು ಹಿಂದೂ ...ರ್ಮಕ್ಕೆ ಪೇಜಾವರರು ಅಪಚಾರ ಮಾಡಿದ್ದಾರೆಂದು ...ತಾಲಿಕ್ ಮಳ್ಳು ಮಾತು ಆಡಿದ್ದಾನೆ. ಇದಕ್ಕೆ ...ೇಜಾವರರು ಮಾರ್ಮಿಕ ಉತ್ತರ ಕೊಟ್ಟಿದ್ದಾರೆ. ...ಂದೂಗಳಲ್ಲೂ ಗೋಮಾಂಸ ತಿನ್ನೋರಿದ್ದಾರೆ. ಅವರನ್ನೆಲ್ಲ ...ಂದೂ ಧರ್ಮ ಬಿಟ್ಟುಹೋಗಿ ಅನ್ನಲಾದೀತಾ? ಎಂದು ...ೇಜಾವರರು ಕೇಳಿದ್ದಕ್ಕೆ ಮುತಾಲಿಕ್ ಅಥವಾ ಕಟ್ಟರ್ ...ಡ್ಡಿಗಳಲ್ಲಿ ಉತ್ತರ ಇರಲು ಸಾಧ್ಯವಾ? ಮಠದ ಆವರಣದಲ್ಲಿ ...ಬರಿಗೆ ನಮಾಜು ಮಾಡಲು ಪೇಜಾವರರು ಅವಕಾಶ ...ಟ್ಟಿದ್ದು ಅಕ್ಷಮ್ಯ ಅಪರಾಧ ಎನ್ನುವ ಮುತಾಲಿಕ್ ...ಠದಲ್ಲಿ ಉಪಹಾರ ಕೊಟ್ಟಿದ್ದು ಮತ್ತೂ ದೊಡ್ಡ ತಪ್ಪು ...ಂತಾ ಅಲವತ್ತುಕೊಂಡಿದ್ದಾನೆ. ಸಾಬರು ಎಂದಾದರು ...ಸೀದಿಯಲ್ಲಿ ಯುಗಾದಿ, ಸಂಕ್ರಾಂತಿ, ಗಣೇಶೋತ್ಸವ ...ಮಾಡಿದ್ದಿದೆಯಾ ಅಂತಾನೆ ಎಡವಟ್ಟು ಮುತಾಲಿಕ್.

ಮುಸ್ಲಿಮರು ಅನೇಕ ಕಡೆ ಇವತ್ತಿಗೂ ಚೌತಿಹಬ್ಬ ...ೀಪಾವಳಿ, ರಕ್ಷಾ ಬಂಧನದಲ್ಲಿ ಮನಃಪೂರ್ವಕವಾಗಿ ...ಾಲ್ಗೊಳ್ಳುತ್ತಿದ್ದಾರೆ. ಹಲವೆಡೆ ಜಾತ್ರೆ-ಉತ್ಸವದ ಹೊತ್ತಲ್ಲಿ ...ಥ ಕಟ್ಟಿ ಶೃಂಗರಿಸುವವರೇ ಮುಸ್ಲಿಮರು. ಭಟ್ಕಳದ ರಥೋತ್ಸವ ನಡೆಯುವುದೇ ಮುಸ್ಲಿಮ್ ಕುಟುಂಬ ಒಂದಕ್ಕೆ ವೀಳ್ಯ ಕೊಟ್ಟು ಗೌರವಿಸಿದ ನಂತರ. ಶಿರಸಿಯ ಸ್ವರ್ಣವಲ್ಲಿ ಮಠದ ರಥ ಕಟ್ಟುವುದು ಮುಸ್ಲಿಮರು. ಪಡುಬಿದ್ರಿಯ ಢಕ್ಕಬಲಿ ವಾದ್ಯ ಬಾರಿಸೋದು ಬ್ಯಾರಿಗಳು. ಬಪ್ಪನಾಡು ದೇವಸ್ಥಾನ ಕಟ್ಟಿದ್ದು ಬ್ಯಾರಿ ಸಾಬಿ. ಇಂಥ ಸೌಹಾರ್ದ ಘಟನೆಗಳು ಆಗಾಗ ಸುದ್ದಿಯಾಗುತ್ತಲೇ ಇವೆ. ಆದರೆ ಹಿಂದೂತ್ವದ ಪೊರೆ ಕಣ್ಣಿಗೆ ಬೆಳೆಸಿಕೊಂಡಿರುವ ಮುತಾಲಿಕ್ ಅಂಡ್ ಗ್ಯಾಂಗ್‌ಗೆ ಅದೆಲ್ಲ ಹೇಗೆ ಕಾಣಿಸುತ್ತದೆ? ಸಾಕ್ಷಾತ್ ಪೇಜಾವರರನ್ನೇ ಮುಸ್ಲಿಮರು ಮಸೀದಿ ಉದ್ಘಾಟನೆ, ಭಾಷಣ, ಉಪನ್ಯಾಸಕ್ಕೆ ಕರೆದೊಯ್ದಿದ್ದಿದೆ! ಪೇಜಾವರರನ್ನು ಗೌರವಿಸಿ-ಸನ್ಮಾನಿಸಿ ಕಳಿಸಿದ್ದಿದೆ! ನವಾಯತ ಮುಸ್ಲಿಮರು ಹೆಚ್ಚಿರುವ ಭಟ್ಕಳದಲ್ಲಿ ಸಾಬರು ಪೇಜಾವರರಿಗೆ ದೊಡ್ಡ ಮಟ್ಟದ ಸನ್ಮಾನ ಮಾಡಿದ್ದಾರೆ. ಮಂಗಳೂರು-ಉಡುಪಿ-ಕಾಸರಗೋಡು(ಕೇರಳ)-ಉತ್ತರ ಕರ್ನಾಟಕದ ಹಲವೆಡೆ ಮುಸ್ಲಿಮರು ಪೇಜಾವರ ಕರೆದು ಸತ್ಕರಿಸಿದ್ದಾರೆ. ಇದೆಲ್ಲ ಪೇಜಾವರರೇ ಮುಕ್ತವಾಗಿ ಹೇಳಿಕೊಂಡಿದ್ದಾರೆ.

ತಾನು ಇಫ್ತಾರ್ ಕೂಟ ನಡೆಸಿದ್ದು ಇಂದಿನ ಪ್ರಜಾಪ್ರಭುತ್ವದಲ್ಲಿ ದೊಡ್ಡ ಸಂಗತಿಯೇ ಅಲ್ಲ ಅಂತಾರೆ ಪೇಜಾವರರು. "ಯಾಕಾದರೂ ಮಠದ ಇಫ್ತಾರ್ ಕೂಟದ ಬಗ್ಗೆ ಧರ್ಮಾಂಧತೆಯಿಂದ ವಿಶ್ಲೇಷಣೆ ನಡೆಸಿ ಜನರ ಮನಸ್ಸು ಕೆಡಿಸುತ್ತೀಯಪ್ಪಾ ಮುತಾಲಿಕಾ.... ಪರಧರ್ಮ ಸಹಿಷ್ಣುವಾಗು..." ಎಂದು ಬುದ್ಧಿ ಹೇಳಿದ್ದಾರೆ. ಇದೆಲ್ಲಾ ಕೇಳಿಸಿಕೊಂಡರೆ ಮುತಾಲಿಕ್ ಚಲಾವಣೆ ಕಳೆದುಕೊಳ್ಳುತ್ತಾನೆ. ಹಾಗಾಗಿ ಆತ ಪ್ರತಿಭಟನೆಯ ಪುಂಗಿ ಊದುತ್ತಿದ್ದಾನೆ. ಸಂಘ ಪರಿವಾರದ, ಬಿಜೆಪಿಯ, ಭಜರಂಗದಳದ ಹಲವು ರಕ್ತ ಪಿಪಾಸು ಧರ್ಮಾತ್ಮರು ಪೇಜಾವರರು ತಪ್ಪೇನೂ ಮಾಡಿಲ್ಲ ಅಂತನ್ನುವ ಮಟ್ಟಕ್ಕೆ ಬಂದಿದ್ದಾರೆ. ಪ್ರತಾಪು ಸಿಮ್ಮಿ, ಅನಂತ್ಮಾಣಿ, ನಳಿನ್‌ಕುಮಾರ್ ಕಟೀಲುನಂಥ ಬೆಂಕಿ ನವಾಬರೂ ಪೇಜಾವರರಿಗೆ ಎದುರಾಡಲಾಗದೆ ಬಾಲ ಮುದುರಿಕೊಂಡಿದ್ದಾರೆ.

ಶಂಖದಿಂದ ಬಂದರಷ್ಟೇ ಅಲ್ವಾ ತೀರ್ಥ? ಇಂಥದೊಂದು ಸೌಹಾರ್ದತೆಯ ಪ್ರಯತ್ನ ತುಂಬ ಹಿಂದೆಯೇ ಪೇಜಾವರರಿಂದ ಆಗಬೇಕಿತ್ತು, ಆಗ ಆಹುತಿ, ರಕ್ತಪಾತ, ಹಿಂದೂ ಹುಡುಗಿರ ಮಾನ ಉಳೀತಿತ್ತು. ಈಗಿಟ್ಟಿರುವ ಹೆಜ್ಜೆ ಪೇಜಾವರರು ಹಾಗೆ ಮುಂದಿಡುತ್ತ ಹೋಗಬೇಕಿದೆ. ಹಿಂದೂತ್ವದ ಹೆಸರಲ್ಲಿ ಲೂಟಿ-ಪುಂಡಾಟ-ರಕ್ತದೋಕುಳಿ-ಬಲಿ-ಲೈಂಗಿಕ ಅನಾಚಾರ ಮಾಡುವವರಿಗೆ ಕಡಿವಾಣ ಹಾಕಬೇಕಿದೆ. ಕೃಷ್ಣಮಠದಲ್ಲಿನ ಇಫ್ತಾರ್ ಕೂಟ ಬರೀ ಬೂಟಾಟಿಕೆ ಆಟ; ಸಂಘಪರಿವಾರದ ಹಿಡನ್ ಹಿಂದೂತ್ವದ ಹಿಕಮತ್ತಾಗಿತ್ತೆಂಬ ಅನುಮಾನ-ಅಪವಾದ ಬರದಂತೆ ಎಚ್ಚರ ವಹಿಸಬೇಕು ಸ್ವಾಮೀಜಿ!!

ಆಗ ಮಾತ್ರ ಹಿಂದೂ-ಮುಸ್ಲಿಮ್ ಎರಡೂ ಕಡೆಯವರಿಗೆ ಕ್ಷೇಮ!!

■ ನಹುಷ

ಮಸೀದಿಲಿ ಕೃಷ್ಣನ್ನ ಇಡಕ್ಕೆ ಸಾಧ್ಯವೆ?

ಥತ್ತೇರಿ

▸ ಯಾಹು

ಉಡುಪಿ ಕೃಷ್ಣಮಠಕ್ಕೆ ಮುಸ್ಲಿಮರನ್ನು ಕರೆಸಿ, ಇಫ್ತಾರ್ ಕೂಟ ಏರ್ಪಡಿಸಿ, ನಮಾಜ್ ಮಾಡಲು ಅವಕಾಶ ಮಾಡಿಕೊಟ್ಟು, ನಾಡಿಗೆ ಅಚ್ಚರಿ ನೀಡಿರುವ ಪೇಜಾವರ ಶ್ರೀಗಳನ್ನ ಅಭಿನಂದಿಸಬೇಕಾದದ್ದು ನಮ್ಮ ಧರ್ಮ ಎಂದುಕೊಂಡು ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಅಲ್ಲಾಹೋ ಅಕ್ಬರ್.... ಅಲ್ಲಾಹೋ ಅಕ್ಬರ್...."

"ಹಲೋ, ಹಲೋ, ಯಾರು?"

"ಸ್ವಾಮೀಜಿ, ನಮಸ್ಕಾರ, ನಾನು ಯಾಹು."

"ಯಾಹ್ಯಾ ಅವಲಾ?"

"ಯಾಹು ಸ್ವಾಮೀಜಿ. ಪತ್ರಕರ್ತ. ಅಭಿನಂದನೆಗಳು ಸ್ವಾಮೀಜಿ."

"ಆಯ್ತು."

"ಇದ್ದಕ್ಕಿದ್ದಂತೆ ತಾವು ಅಚ್ಚರಿ ಮೂಡಿಸಿದ್ದೀರಿ. ನಮಗಂತೂ ತುಂಬ ಖುಷಿಯಾಗಿದೆ. ನಮ್ಮ ಬೆಂಬಲ ನಿಮಗೆ."

"ಆದರೆ ಕೆಲವರು ಅಪಾರ್ಥ ಮಾಡಿಕೊಂಡು ನನ್ನ ಕ್ರಮವನ್ನು ಖಂಡಿಸಿದ್ದಾರೆ. ಕೆಲವರು ಹೇಯವಾಗಿ ಮಾತನಾಡಿದ್ದಾರೆ."

"ಆದರೆ ನಮ್ಮವರಾರು ಅಂಗೆ ಮಾತಾಡಿಲ್ಲ ಸ್ವಾಮಿ. ನಿಮ್ಮಲ್ಲೇ ಇರೊ ಮುತಾಲಿಕ್ ಆ ತರಹ ಮಾತಾಡಿದ್ದಾನೆ. ಅವ್ನೂ ಒಂದು ತರ ಮುಸ್ಲಿಂ ಇದ್ದಂಗೆ."

"ಹೌದೌದು. ಆದರೆ ನಾವು ಈ ಸಂದರ್ಭದಲ್ಲಿ ಅಂತಹವರ ಮಾತಿಗೆ ಕಿವಿಗೊಡಬಾರದು."

"ನೀವು ಯಾವ ಕಾಲ್ದಲ್ಲೂ ಕಿವಿಗೊಟ್ಟವರಲ್ಲ, ಈಗಲೂ ಕಿವಿಗೊಡಬೇಡಿ. ಆದರೂ ನಿಮ್ಮ ನಡೆ ಅನುಮಾನಕ್ಕೆಡೆ ಮಾಡಿದೆ."

"ಯಂತಕ್ಕೆ?"

"ಯಂತಕ್ಕೆ ಅಂದ್ರೆ, ನಮ್ಮ ಪ್ರಜ್ಞಾವಂತ ಸಮಾಜ ಯಾವತ್ತೂ ನಿಮ್ಮ ನಡವಳಿಕೆ, ಮಾತಿನಲ್ಲಿ ಒಂದು ಹುನ್ನಾರವನ್ನ ಗುರುತಿಸಿ, ಅದಕ್ಕೆ ಸರಿಯಾದ ಉತ್ತರ ಕಂಡುಕೊಂಡೇ ಬಂದವ್ರುರೆ ಸ್ವಾಮಿ. ಆದ್ರಿಂದ ಈಗಲೂ ನಿಮ್ಮ ಇಫ್ತಾರ್ ಕೂಟದಲ್ಲಿ ಪ್ರಾಮಾಣಿಕತೆ ಕೊರತೆ ಕಂಡುಬಂದಿದೆ."

"ಅದೆ ಯಂತಕ್ಕೆ ಅಂತ ನಾನು ಕೇಳಿದ್ದು?"

"ಈಗ ಒಬ್ಬ ಬೇಟೆಗಾರ ಇರತನೆ. ಅವನತ್ರ ಹಲವಾರು ತರದ ಆಯುಧಗಳು, ಬಲೆಗಳು, ಗೋಂದುಗಳಿರತವೆ. ಅವೆಲ್ಲವ್ರೂ ಕೂಡ ಮಿಕಗಳನ್ನ ಬಲೆಗೆ ಕೆಡವ್ರೊ ಸಂಚಿನಿಂದ ಕೂಡಿರತವೆ. ಹಾಗಾಗಿ ಮಿಕಗಳ ಅನುಮಾನ, ಅಪಸ್ವರ ಸಹಜವಾದದ್ದೆ."

"ಅರ್ಥವಾಗಲಿಲ್ಲ."

"ತಾವು ವಿಶ್ವಹಿಂದು, ಅದರ ಉಪಶಾಖೆಗಳಾದ ರಾಮಸೇನೆ, ಭಜರಂಗ, ಬಿಜೆಪಿ, ಆರ್‌ಎಸ್‌ಎಸ್... ಇಂತಹ ಸಂಘಟನೆಗಳ ಹಿತೈಷಿ ಮತ್ತು ಪೋಷಕರು. ನಿಮ್ಮ ನೆಚ್ಚಿನ ಪಾರ್ಟಿ ಬಿಜೆಪಿ. ನೆಚ್ಚಿನ ಪ್ರಧಾನಿ ಮೋದಿ. ನೆಚ್ಚಿನ ಕಾರ್ಯಕ್ರಮಗಳು ಹಿಂದೂ ಸಂಘಟನೆ. ಇಷ್ಟು ಕಬಂಧಬಾಹುಗಳ ಯತಿಗಳು ಶ್ರೀಕೃಷ್ಣ ಮಠಕ್ಕೆ ಮುಸ್ಲಿಮರನ್ನು ಕರೆದು, ಒಂದಡಿ ಅಂತರದಲ್ಲಿ ಒಣಹಣ್ಣುಗಳನ್ನು ಎಸೆದದ್ದು ನೋಡಿದ ಕೆಲವರಿಗೆ ಅನುಮಾನ ಬಂದು ಟೀಕೆ ಮಾಡಿದಾರೆ. ಟೀಕೆ ಸರಿಯೋ, ನಿಮ್ಮ ನಡವಳಿಕೆ ಸರಿಯೋ ಅನ್ನೋ ಗೊಂದಲದಲ್ಲಿದ್ದಿನಿ ಸ್ವಾಮಿ."

"ಇಲ್ಲಿ ಗೊಂದಲಕ್ಕೆ ಅವಕಾಶವಿಲ್ಲ. ನಾವು ಪ್ರಾಮಾಣಿಕವಾಗಿ ಮುಸ್ಲಿಮರನ್ನ ಕರೆದು, ಇಫ್ತಾರ್ ಕೂಟ ಏರ್ಪಡಿಸಿ, ಅವರನ್ನು ಅವರ ಧಾರ್ಮಿಕ ಮನೋಭಾವವನ್ನು ಗೌರವಿಸಿ ಕಳಿಸಿದ್ದೇವೆ."

"ನಿಮ್ಮ ಮುಸ್ಲಿಂ ಪ್ರೀತಿ ಹೀಗೇ ಇರಲಿ, ನಿಮ್ಮ ರಿಂಗ್‌ಟೋನಲ್ಲಿ ಕೂಡ ನಮಾಜ್ ಬರ್ತಿದೆ ಸ್ವಾಮಿ."

"ಹೌದಾ?"

"ನಾನೇ ಕೇಳಿಸಿಕೊಂಡೆ. 'ಅಲ್ಲಾಹೊ ಅಕ್ಬರ್' ಅನ್ನೋ ದನಿ, ಮಸೀದಿಯಿಂದ ಕೇಳಿದಕಿಂತ ರಿಂಗ್‌ಟೋನೆ ಚಂದ."

"ಯಾರೋ ಮುಸ್ಲಿಂ ಕಿಡಿಗೇಡಿ ಹುಡುಗರು ಅಳವಡಿಸಿದ್ದಾರೆ."

"ಮುತಾಲಿಕ್ ಕಡೆಯವರು ಅಳವಡಿಸಿರಬಹುದಲ್ವ?"

"ಅದನ್ನ ಹೇಳಲಿಕ್ಕೆ ಬರುವುದಿಲ್ಲ, ಅವರ ಕಡೆಯವರು ನನ್ನ ಬಗ್ಗೆ ಸಿಟ್ಟಾಗಿದ್ದಾರೆ."

"ಸಿಟ್ಟಸ್ಟೆಯಲ್ಲ ಸ್ವಾಮೀಜಿ, ಸಂಪೂರ್ಣ ತಲೆಕೆಟ್ಟೋಗಿದೆ. ನೀವು ಇಫ್ತಾರ್ ಕೂಟ ಏರ್ಪಡಿಸಿದ್ದಕ್ಕೆ ಪ್ರತಿಯಾಗಿ ಮುಸ್ಲಿಮರು ಮಸೀದಿಗಳಲ್ಲಿ ಗಣಪತಿ ಮತ್ತು ಕೃಷ್ಣನನ್ನ ತಂದು ಕೂರಿಸಿ ಪೂಜೆ ಮಾಡ್ಲಿ ಅಂದಿದಾನೆ ಮುತಾಲಿಕ್."

"ಮುಸ್ಲಿಮರು ವಿಗ್ರಹಾರಾಧನೆ ಮಾಡುವುದಿಲ್ಲವಲ್ಲ."

"ಮಾಡದಿರ್ಲಿ ಸ್ವಾಮೀಜಿ, ಕೃಷ್ಣನ ಪುರಾಣ ಕೇಳಿದ್ರೆ ಸಾಬರು ನಗ್ತರೆ."

"ನಗುವುದೆಂತಕ್ಕೆ?"

"ನಾನೆ ಕೇಳಿದ್ದಿನಿ ಸ್ವಾಮಿ. ಒಬ್ಬ ಸಾಬಿ 'ಅಲ್ಲ ಶಾರ್, ನಿಮ್ದು ಕಿಷ್ಣ ಸಣ್ಣ ಹುಡುಗ ಆಗಿದ್ದಾಗ ಮನೆಗೆ ನುಗ್ಗಿ ಬೆಣ್ಣೆ, ಮೊಸರು, ಮಜ್ಜಿಗೆಗೆ ಎಲ್ಲ ಕಳ್ತನ ಮಾಡಿಕಂಡಿ ಹೋಗ್ತಿತ್ತಂತೆ. ಮನೆಗೆ ಬೀಗ ಹಾಕಿದ್ರೆ ಹಂಚು ತಗದು ಇಳಿದಿ ಬೆಣ್ಣೆಗೆ ಮುಸುರಿಗೆ ತಿಂದಿ ಹೋಗ್ತಿತ್ತಂತೆ. ಪಾಪ ಬಡುವ್ರು ಬೆಣ್ಣೆ ಮೊಸರು ಮಾರಿ ಜೀವನ ಮಾಡ್ತೋರ್ದು ಕತೆ ಏನು ಶಾರ್. ಈಗ ಆಗಿದ್ರೆ ವದ್ದಿ ಲಾಕಪ್‌ಗೆ ಹಾಕ್ತಿದ್ರು. ಆ ಹುಡ್ಗ ಇಂತ ಕೆಲಸನ ಶಾರ್ ಮಾಡದು' ಅಂದ ಸ್ವಾಮೀಜಿ."

"ಕೃಷ್ಣ ಲೀಲೆಗಳನ್ನ ಹಗುರವಾಗಿ ಮಾತನಾಡಬಾರದು."

"ಇನ್ನೊಂದು ವಿಷಯ ಹೇಳಿದ ಸ್ವಾಮಿ. 'ನೋಡಿ ಶಾರ್, ನಿಮ್ದು ಕಿಷ್ಣ ಹೆಣ್ಣು ಮಕ್ಕಳು ಸ್ನಾನ ಮಾಡ್ತಾಯಿರೊ ಜಾಗಕ್ಕೆ ಹೋಗಿ, ಅವ್ರುದ್ದು ಎಲ್ಲಾ ಶೀರೆ, ಲಂಗ, ಜಾಕೀಟ್‌ಗೆ ಕದ್ದುಕೊಂಡು ಹೋಗಿ ಮರದ ಮೇಲೆ ಕುಂತಿತ್ತಂತೆ. ಪಾಪ ಆ ಹೆಣ್ಣು ಮಕ್ಕಳು ಬಾಯಿಗೆ ಬಡಕಂಡಿ, ಬಟ್ಟೆ ಕೊಡಪ್ಪ ನಿನ್ಗೆ ಅದೇನು ಬೇಕೊ ನಾವು ಕೊಡ್ತಿವಿ ಅಂದ್ರೆ, ಈ ಘಡವ ಏನನ್ನಬೇಕು ಶಾರ್? ನೀರಿಂದ ಈಚ್ಗೆ ಬನ್ನಿ ಎಲ್ಲಾರು ಕೈ ಮೇಲೆತ್ತಿ ಅಂತಂತೆ. ಹಿಂಗ ಶಾರ್ ಮಾಡದು. ಕಿಷ್ಣ ನಮ್ಮವ್ರುನೆ ಆಗಿದ್ರೆ ಕಂಬಕ್ಕೆ ಕಟ್ಟಿ ಚಮ್ಡ ಸುಲಿತಿದ್ದೊ ಶಾರ್' ಅಂದ ಸ್ವಾಮೀಜಿ."

"ನೋಡಿ ನಮ್ಮ ದೈವದ ಬಗ್ಗೆ ಮತ್ತೊಬ್ಬರು ಆಡಿಕೊಂಡಾಗ ನಾವು ಅವರನ್ನ ತಿದ್ದಬೇಕು. ಕೃಷ್ಣ ಚಿಕ್ಕ ಹುಡುಗನಾಗಿದ್ದಾಗ ಮಾಡಿದ ಲೀಲೆಗಳನ್ನ ಆಡಿಕೊಳ್ಳಬಾರದು."

"ನಾನು ಇದೇಳಿದ್ದು ನಿಮ್ಮ ಮುತಾಲಿಕ್ಗೆ ಸ್ವಾಮಿ. ಕೃಷ್ಣನ ಕತೆ ಕೇಳಿ ಅದ್ಯಾವುದೊ ಪೋಲಿ ಮುಂಡೆದು ಅಂತ ತಿಳಕಂಡಿರೊ ಸಾಬರಿಗೆ, ಅವನ ವಿಗ್ರಹ ತಗಂಡೋಗಿ ಮಸೀದಿಲಿಟ್ಟು ಪೂಜೆ ಮಾಡಿ ಅಂತನಲ್ಲಾ ಸ್ವಾಮೀ. ಅಂತವನು ಏನೇ ಅಂದ್ರು ತಲೆಕೆಡಿಸಿಕೊಬೇಡಿ. ಮುತಾಲಿಕ್ ಬಗ್ಗೆ ಸಾಬರು ಯಂಗವ್ರುರೊ ಅಂಗೆ ನೀವು ಇದ್ದುಬಿಡಿ."

"ನಾನು ಯಾರ ಮಾತಿಗೂ ತಲೆ ಕೆಡಿಸಿಕೊಳ್ಳುವುದಿಲ್ಲ, ನನಗೆ ಸರಿ ಕಂಡದ್ದನ್ನ ಮಾಡ್ತ ಹೋಗ್ತೆನೆ."


"ಸ್ವಾಮೀಜಿ, ನನ್ನ ಇನ್ನೊಂದು ಬೇಡಿಕೆ?"


"ಅದೇನು ಹೇಳಿ."

"ತಾವು ಹಿಂದೆ ಹರಿಜನರ ಕೇರಿಗೆ ಹೋಗಿದ್ರಿ. ಅದೂ ಕೂಡ ಮೆಚ್ಚೊ ಕೆಲಸನೆ. ಈ ಮುಸ್ಲಿಮರಿಗಿಂತ್ಲೂ ಅಸ್ಪೃಶ್ಯತೆಗೆ ತುತ್ತಾಗಿರೊ ಹರಿಜನರ ಸಮಸ್ಯೆ ಭೀಕರವಾದದ್ದು, ಅದ್ರಿಂದ ಅವರನ್ನೆಲ್ಲಾ ಕೃಷ್ಣಮಠಕ್ಕೆ ಕರೆದು, ಅವರ ಜೊತೆ ನೀವೂ ಕುಂತಗಂಡು ಊಟ ಮಾಡಿ. ಕಡೆಗೆ ಕ್ಷಮೆ ಕೇಳಿ, ಅಂದ್ರೆ ಇಷ್ಟು ಶತಮಾನ ನಡೆದದ್ದು ಇನ್ನಮುಂದೆ ನಡೆಯಕ್ಕೆ ನಾನು ಬಿಡಲ್ಲ ಅಂತ ಹೇಳಿ ಕಳಿಸಬಹುದಲ್ಲ, ಸ್ವಾಮೀಜಿ."

"............"

"ಸ್ವಾಮಿ, ಹಲೋ ಹಲೋ, ಹಲೋ? ಥೂತ್ತೇರಿ!" ■





ಗೋ ಮಾಂಸ ಸೇವನೆ ವಿರುದ್ಧ ಬಿಜೆಪಿ ಪ್ರತಿಭಟನೆ

...ಂಭದಲ್ಲಿ ಮೈಸೂರು ಕನ್ನಡ ವೇದಿಕೆ ಶುರು ಮಾಡಿದ ...ದ್ದೊಂದು ಚುಂಗನ್ನು ಹಿಡಿದ ಬಿಜೆಪಿ ಯುವಮೋರ್ಚಾ ...ಂದೂಗಳು ಪೂಜಿಸುವ ಗೋವಿನ ಮಾಂಸವನ್ನು ...ಾಮಂದಿರದಲ್ಲಿ ತಿಂದದ್ದು ಮಹಾಪರಾಧ ಎಂಬ ಸ್ವಯಂ ...ರ್ಪು ನೀಡಿ ಭಾನ್ಗಡಿ ಶುರು ಹಚ್ಚಿಕೊಂಡಿದೆ. ಅಲ್ಲದೇ ...ಾಮಂದಿರ ಮನೆಯಂಗಳವನ್ನು ಶುದ್ಧಿ ಮಾಡುತ್ತೇವೆ ...ತ ಗೋಮೂತ್ರ ಎರಚುವ ಮೂಲಕ ದಲಿತ ಮತ್ತು ...ಸ್ಲಿಂ ಸಮುದಾಯಗಳನ್ನು ಅವಮಾನಿಸಿದ್ದಾರೆ.

...ಪೂರ್ವಾಪರ ಯೋಚನೆ ಇಲ್ಲದ ಡಿಸಿ

ಇತ್ತ ಕೇಸರಿ ಮುಂಡರ ಅರಚಾಟಕ್ಕೆ ಬೆದರಿದಂತಿರುವ ...ಿ ಸಾಹೇಬರು ವಿವೇಚನೆಯನ್ನು ಬದಿಗಿಟ್ಟು ವರ್ತಿಸು...ೋದು ಬೇಸರದ ಸಂಗತಿ. ಸರ್ಕಾರಿ ಕಟ್ಟಡಗಳಲ್ಲಿ ...ೀಮಾಂಸ ಸೇವನೆ ನಿಷೇಧಿಸಿದ್ದರೂ, ...ವನ್ನು ಉಲ್ಲಂಘಿಸಲಾಗಿದೆ, ಬರೀ ...ಾರಸಂಕಿರಣ ಅಂತ ಹೇಳಿ 'ಆಹಾರ ...ವನೆ'ಗೆ ಅವಕಾಶ ಕಲ್ಪಿಸಿದ ಚಾರ್ವಾಕ ...ೋಷಿಯಲ್ ಅಂಡ್ ಕಲ್ಚರಲ್ ಟ್ರಸ್ಟನ್ನು ...ಪ್ಪುಪಟ್ಟಿಗೆ ಸೇರಿಸಲು ಮತ್ತು ...ಯೋಜಕರು ಇಟ್ಟಿದ್ದ ಭದ್ರತಾ ...ಠೇವಣಿಯನ್ನು ಮುಟ್ಟುಗೋಲು ...ಕೊಳ್ಳಲು ಜಿಲ್ಲಾಧಿಕಾರಿ ಡಿ.ರಂದೀಪ್ ಆದೇಶ ಚೆಲ್ಲಿದ್ದಾರೆ.

ಜಿಲ್ಲಾಧಿಕಾರಿಯ ಈ ಆದೇಶದ ಹಿಂದೆ ಸಂಸದ ಪ್ರತಾಪ ಸಿಮ್ಮನ ಪ್ರವರವಿದೆ. ಗೋ ಮಾಂಸ ಸೇವನೆಗೆ ಸರ್ಕಾರಿ ಕಟ್ಟಡದಲ್ಲಿ ಹೇಗೆ ಅವಕಾಶ ಕೊಟ್ಟಿರಿ? ಎಂದು ಆತ ಖುದ್ದು ಡೀಸಿಯನ್ನು ತರಾಟೆಗೆ ತೆಗೆದುಕೊಂಡಿದ್ದರಿಂದ ಒತ್ತಡಕ್ಕೆ ಮಣಿದು ಡೀಸಿ ಇಂಥಾ ನಿರ್ಧಾರಕ್ಕೆ ಬಂದಂತಿದೆ. ಇದು ಪ್ರತಾಪ್ ಸಿಮ್ಮನಂತಹ ಕೇಸರಿವಾಲಾಗಳ ಹೊಸ ವರಸೆಯೇನಲ್ಲ, ಸಮಾಜದಲ್ಲಿ ದ್ವೇಷ ಭಾವನೆ ಹುಟ್ಟುಹಾಕುವ ಇಂಥಾ ಅವಕಾಶಕ್ಕಾಗೆ ಅವರೆಲ್ಲ ಕಾದು ಕುಳಿತಿರುತ್ತಾರೆ. ಆದರೆ ಡೀಸಿಗೆ ಇವರ ಹಕೀಕತ್ತು ಅರ್ಥವಾಗಬೇಕಿತ್ತು.


ಯಾಕೆಂದರೆ ಇದಕ್ಕೂ ಮುನ್ನ ಕಲಾಮಂದಿರ ಆವರಣದಲ್ಲಿ ಮಾಂಸಾಹಾರ ಸೇವನೆಗೆ ಅವಕಾಶ ಮಾಡಿಕೊಡಲಾಗಿತ್ತು, ಮಾಂಸಾಹಾರದ ಭೋಜನವೂ ಇರುತ್ತಿತ್ತು, ಆದರೆ ಕಾಲಕ್ರಮೇಣ ಆವರಣದಲ್ಲಿ ಊಟ ಮಾಡುವುದರಿಂದ ಗಲೀಜಾಗುತ್ತದೆ ಎಂಬ ಕಾರಣಕ್ಕೆ, ಕಲಾಮಂದಿರದಿಂದ ಹೊರಭಾಗದಲ್ಲಿ ಊಟಕ್ಕೆ ವ್ಯವಸ್ಥೆ ಮಾಡಿಕೊಡಲಾಗಿತ್ತು, ನಂತರ ಈ ಬಾಯಿ ಮಾತಿನ ನಿಯಮ ನಿಂತು ಮತ್ತೆ



ರಂದೀಪ್

⏭ 06

ಮಂಡ್ಯ: ಕಸಾಪ ಅಧ್ಯಕ್ಷ ಎತ್ತುವಳಿ ರವಿಯ 'ಸ್ವಾಮಿ' ನಿ



ಸಾದೊಳಲು ಸ್ವಾಮಿ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗಾದಿಯ ಮೇಲೆ ಬಡ್ಡಿ ದಂಧೆಯ ಚಾಮಲಾಪುರ ರವಿಕುಮಾರ್ ಕುಂತ ಮೇಲೆ ಕಸಾಪ ಅಕ್ಷರಶಃ ವ್ಯಾಪಾರಿ ಕೇಂದ್ರವಾಗಿ ಬಿಟ್ಟಿದೆ. ಕಸಾಪ ಅಧ್ಯಕ್ಷನಾಗಿ ಕನ್ನಡ ನಾಡು-ನುಡಿ ಕಟ್ಟುವ ಕಾಯಕದಲ್ಲಿ ತೊಡಗಬೇಕಿದ್ದ ರವಿಕುಮಾರ ತನ್ನ ವಸೂಲಿ ಗ್ಯಾಂಗ್ ಮುಂದಿಟ್ಟುಕೊಂಡು ಜಿಲ್ಲೆ ತಾಲ್ಲೂಕು, ಹೋಬಳಿ, ನಗರ ಸಮ್ಮೇಳನದ ಹೆಸರಿನಲ್ಲಿ ಕಾಸು ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದಾನೆ. ರವಿ ಅಂಡ್ ಟೀಂ ವ್ಯಕ್ತಿ ಪೂಜೆಯ ವಿಜೃಂಭಣೆಯಲ್ಲಿ ಅಕ್ರಮವಾಗಿ ದುಡ್ಡು ಮಾಡಿದ ಕ್ರಿಮಿಗಳನ್ನೆಲ್ಲ ಕಸಾಪ ಅಂಗಳಕ್ಕೆ ಕರೆತಂದು ಕಸಾಪಗಿದ್ದ ಅಲ್ಪ-ಸ್ವಲ್ಪ ಮಾನವನ್ನು ಹರಾಜು ಹಾಕಿದೆ. ಕಳೆದ ಜೂನ್ 25ರಂದು ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ 3ನೇ ನಗರ ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ರವಿಕುಮಾರ್ ಮತ್ತವನ ಬಹುಪರಾಕ್ ಶಿಷ್ಯರಾದ ಶಿವರಾಮು, ಕೃಷ್ಣೇಗೌಡ, ನವೀನ್, ರಮೇಶ್ ಮೊದಲಾದವರು ಮಾಡಿದ 'ಸ್ವಾಮಿ' ನಿಷ್ಠೆಯನ್ನು ಕಂಡ ಜಿಲ್ಲೆಯ ಹಿರಿಯ ಸಾಹಿತಿಗಳು, ಕನ್ನಡ ಸಾಹಿತ್ಯಾಸಕ್ತರು ಆತಂಕಗೊಂಡಿದ್ದಾರೆ. ಧನದಾಹಿ ರವಿಕುಮಾರನ ವಸೂಲಿ ಗ್ಯಾಂಗ್‌ನ ಕನ್ನಡ ಪ್ರೇಮ ಕಂಡು ಎದೆಎದೆ ಬಡಿದುಕೊಂಡಿದ್ದಾರೆ.

ಕಲಬೆರಕೆ ರಸಗೊಬ್ಬರ ಮಾರಿ ದುಡ್ಡು ಮಾಡಿರುವ ಆರೋಪ ಹೊತ್ತಿರುವ, ಹಾಲಿ ರಿಯಲ್ ಎಸ್ಟೇಟ್ ದಂಧೆಯಲ್ಲಿ ತೊಡಗಿರುವ ಸಾದೊಳಲು ಸ್ವಾಮಿ ಎಂಬ ಯಃಕಶ್ಚಿತ್ ಪುಢಾರಿಯೊಬ್ಬನನ್ನು 3ನೇ ನಗರ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷನಾಗಿ ಮಾಡಿಕೊಂಡು ವಿಜೃಂಭಿಸಿದ ರವಿಕುಮಾರ ಅಂಡ್ ಗ್ಯಾಂಗ್‌ನ ಕೆಲಸ ಹೇಸಿಗೆ ಹುಟ್ಟಿಸಿದೆ. ರಿಯಲ್ ಎಸ್ಟೇಟ್‌ಕುಳ ಸ್ವಾಮಿಯ ಹೇಸಿಗೆ ತಿಂದ ರವಿಕುಮಾರ ಕನ್ನಡ ಸಾಹಿತ್ಯ ಸಮ್ಮೇಳನದ ಹೆಸರಲ್ಲಿ 'ಸ್ವಾಮಿ' ನಿಷ್ಠೆ ಪ್ರದರ್ಶಿಸಿ ಕನ್ನಡ ಸಾಹಿತ್ಯಾಸಕ್ತರ ಬಾಯಲ್ಲಿ ಛೀ... ಥೂ.. ಎಂದು ಉಗಿಸಿಕೊಳ್ಳುತ್ತಿದ್ದಾನೆ. ಈ ಹಿಂದೆ ಫೆಬ್ರವರಿಯಲ್ಲಿ ಜಿಲ್ಲಾ ಸಾಹಿತ್ಯ ಸಮ್ಮೇಳನದ ಹೆಸರಲ್ಲಿ ಎತ್ತುವಳಿ ಮಾಡಿದ ರವಿಕುಮಾರ್ ಅಂಡ್ ಗ್ಯಾಂಗ್ ಭರ್ಜರಿಯಾಗಿ ರೊಕ್ಕ ಜೇಬಿಗಿಳಿಸಿತ್ತು, ಕನ್ನಡ ಸಾಹಿತ್ಯ ಸಮ್ಮೇಳನದ ಖರ್ಚುವೆಚ್ಚದ ವಿವರವನ್ನು ಸಾರ್ವಜನಿಕರಿಗೆ ನೀಡುವ ಮೂಲಕ ಪಾರದರ್ಶಕತೆ ಮೆರೆಯುವ ಸೌಜನ್ಯವೂ ಇಲ್ಲದ ರವಿಕುಮಾರ ಈಗ ಅಂತದ್ದೇ ಮತ್ತೊಂದು ಎತ್ತುವಳಿ ಸಮ್ಮೇಳನ ನಡೆಸಿ ಬಾಯಿ ಒರೆಸಿಕೊಂಡಿದ್ದಾನೆ.

10-12 ವರ್ಷಗಳ ಹಿಂದೆ ಏನೇನೂ ಅಲ್ಲದ ಸಾದೊಳಲು ಸ್ವಾಮಿ ಅಲಿಯಾಸ್ ಗೊಬ್ಬರ ಸ್ವಾಮಿ ಇಂದು ನೂರಾರು ಕೋಟಿಗೆ ತೂಗುತ್ತಾನೆ. ಸಾದೊಳಲು ಎಸ್.ಪಿ.ಸ್ವಾಮಿ ಮಾಡಿರುವ ಆಸ್ತಿ-ಪಾಸ್ತಿಯ ಹಿಂದೆ ನಿಗೂಢ ವ್ಯವಹಾರವಿದೆ ಎಂಬುದಾಗಿ ಮದ್ದೂರು ತಾಲ್ಲೂಕಿನ ಯಾರನ್ನು ಮಾತನಾಡಿಸಿದರೂ ಹೇಳುತ್ತಾರೆ. ಇಂತಹ ಗೋಲ್‌ಮಾಲ್ ಸ್ವಾಮಿಯನ್ನು ಕರೆತಂದು ಆತನಿಂದ ಲಕ್ಷಾಂತರ ರೂ. ಬಿಚ್ಚಿಸಿರುವ ಎತ್ತುವಳಿ ರವಿ ಕಸಾಪ ಸಮ್ಮೇಳನದಲ್ಲಿ ವಿಜೃಂಭಿಸಿ ತನ್ನ ಪಾಲಿನ 'ಸ್ವಾಮಿ ಪ್ರಸಾದ' ನುಂಗಿದ್ದಾನೆಂದು ಆತನ ಜೊತೆಯಿರುವ ಬಹುಪರಾಕ್ ಶಿಷ್ಯರೇ ಅಸಮಾಧಾನದಿಂದ ಹೇಳುತ್ತಾರೆ. ಮಂಡ್ಯ ಕ್ಷೇತ್ರದಿಂದ ಎಂಎಲ್‌ಎ ಆಗುವ ದುರಾಸೆಗೆ ಬಿದ್ದಿರುವ ಸ್ವಾಮಿಯನ್ನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಉತ್ಸವಮೂರ್ತಿಯಾಗಿ ಬಿಂಬಿಸಿದ ರವಿ ಅಂಡ್ ಗ್ಯಾಂಗ್ ಸಾಹಿತ್ಯಾಭಿಮಾನಿಗಳು ಹಾಗೂ ಕನ್ನಡಭಿಮಾನಿಗಳಲ್ಲಿ ಅಸಹ್ಯ ಮೂಡಿಸಿದೆ.


ಇಂದು ಕಸಾಪ ಚುನಾವಣೆಯಲ್ಲಿ ಗೆಲ್ಲಲು ಹತ್ತಾರು ಲಕ್ಷಗಳೇ ಬೇಕು. ಕಸಾಪ ಚುನಾವಣೆ ಲಕ್ಷಾಂತರ ರೂ.ಗಳ ಬಾಬ್ತಾಗಿ ಮಾರ್ಪಾಡಾಗಿರುವುದರಿಂದ ನಿಜವಾದ ಸಾಹಿತಿಗಳು ಕಸಾಪ ಮೆಟ್ಟಲು ಹತ್ತುವುದು ದುಸ್ಸಾಧ್ಯ. ಹೀಗಾಗಿ ಖಾಸಗಿ ಶಿಕ್ಷಣ ದಂಧೆಕೋರರು, ಲೇವಾದೇವಿಗಾರರು ಸುಲಭವಾಗಿ ಕಸಾಪ ಅಧ್ಯಕ್ಷ ಗಾದಿಯ ಮೇಲೆ ಕೂತು ಸಾಹಿತ್ಯ ಲೋಕವನ್ನೇ ಅಲ್ಲೋಲಕಲ್ಲೋಲ ಮಾಡಿದ್ದಾರೆ. ಯಾವುದೇ ಗುರುತರ ಸಾಹಿತ್ಯದಲ್ಲಿ ತೊಡಗದ ಬಡ್ಡಿ ದಂಧೆಯಲ್ಲಿ ದುಡಿದ ರೊಕ್ಕವನ್ನು ಹರಿಸಿ 2016ರ ಕಸಾಪ ಚುನಾವಣೆಯಲ್ಲಿ ಅತ್ಯಧಿಕ ಬಹುಮತದಿಂದ ಗೆದ್ದ ರವಿಕುಮಾರ ಈಗಾಗಲೇ ಚುನಾವಣಾ ಖರ್ಚನ್ನು ಬಡ್ಡಿ ಸಮೇತ ಎತ್ತಿದ್ದರೂ ಸಮಾಧಾನವಾಗಿಲ್ಲ, ಜನ ಬಾಯಿಗೆ ಬಂದಂತೆ ಬೈದರೂ, ಮಾಧ್ಯಮಗಳೂ ಉಗಿದರೂ ಮುಖ ಒರೆಸಿಕೊಂಡು ಸಮ್ಮೇಳನದ ಮೇಲೆ ಸಮ್ಮೇಳನ ಮಾಡಿ ಭರ್ಜರಿಯಾಗೇ ವಸೂಲಿ ಮಾಡುತ್ತಿದ್ದಾನೆ.

ಸ್ವಾಮಿಯ ನಿಗೂಢ ದಂಧೆ?

ಮೂಲತಃ ಮದ್ದೂರು ತಾಲ್ಲೂಕಿನ ಸಾದೊಳಲು ಗ್ರಾಮದ ಎಸ್.ಪಿ.ಸ್ವಾಮಿ ರಸಗೊಬ್ಬರ ಮಾರಾಟ, ಟ್ರಾನ್ಸ್‌ಪೋರ್ಟ್ ವ್ಯವಹಾರ, ಗುತ್ತಿಗೆ, ರಿಯಲ್ ಎಸ್ಟೇಟ್ ದಂಧೆ ಸೇರಿದಂತೆ ಹಲವು ವ್ಯವಹಾರಗಳನ್ನು ಮಾಡಿ ನೂರಾರು ಕೋಟಿ ದುಡ್ಡು ಮಾಡಿದ್ದಾನೆ. ಕಳೆದ ಜಿ.ಪಂ. ಚುನಾವಣೆಯಲ್ಲಿ ಸ್ವಾಮಿಯ ಹೆಂಡತಿ ನಾಗರತ್ನ ಸ್ವಾಮಿ ಚುನಾವಣಾಧಿಕಾರಿ ಮುಂದೆ ತನ್ನ ಆಸ್ತಿ ಘೋಷಿಸಿಕೊಂಡಾಗಲೇ ಆತನ ಆಸ್ತಿಯ ಆಳ ಅಗಲ ಬಯಲಿಗೆ ಬಂದದ್ದು. ಅಲ್ಲಿಯವರೆಗೂ ಈತ ಕೋಟಿಗಟ್ಟಲೆ ಆಸ್ತಿ ಮಾಡಿದ್ದಾನೆಂದು ಮದ್ದೂರಿನ ಜನಕ್ಕಿರಲಿ, ಆತನ ಸ್ವಂತ ಊರು ಸಾದೊಳಲಿನ ಜನರಿಗೇ ಗೊತ್ತಿರಲಿಲ್ಲ.

ಅದೇನು ನಿಗೂಢ ವ್ಯವಹಾರ ಮಾಡಿದನೋ ಯಾರಿಗೂ ಗೊತ್ತಿಲ್ಲ, ಆದ್ರೆ ಮದ್ದೂರು ತಾಲ್ಲೂಕಿನ ಯಾರನ್ನೇ ಕೇಳಿದ್ರೂ ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಸೋಮೇಶ್ವರ ಫರ್ಟಿಲೈಸರ್ಸ್ ಎಂಬ ರಸಗೊಬ್ಬರ ಕಂಪನಿ ತೆರೆದು ಕಲಬೆರಕೆ ಮಾಡಿ ಹಣ ಮಾಡಿದ್ದಾನೆ ಎಂದೇ ಎಲ್ಲರೂ ಆರೋಪಿಸುತ್ತಾರೆ. ರಸಗೊಬ್ಬರ ಮಾರಾಟದಲ್ಲಿ ದುಡಿದ ದುಡ್ಡನ್ನು ಟ್ರಾನ್ಸ್‌ಪೋರ್ಟ್, ಗುತ್ತಿಗೆ ದಂಧೆಯಲ್ಲಿ ತೊಡಗಿಸಿ ಮತ್ತಷ್ಟು ಕೋಟಿಗಳಿಸಿದ ಸ್ವಾಮಿ ನಂತರ ಬೆಂಗಳೂರು ಮೈಸೂರಿನಲ್ಲಿ ರಿಯಲ್ ಎಸ್ಟೇಟ್ ದಂಧೆ ಮೇಲೆ ಹಾಕಿ ನೂರಾರು ಕೋಟಿ ಸಂಪಾದಿಸಿದ್ದಾನೆ. ದುಡ್ಡು ಮಾಡಿದ ಕಾರಣಕ್ಕೆ ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣನ ಬಲಗೈ ಭಂಟನಾಗಿ ಬಡ್ತಿ ಪಡೆದ ಸ್ವಾಮಿಗೊಬ್ಬ ಕೃಷ್ಣೇಗೌಡ ಎಂಬ ಅಣ್ಣನಿದ್ದಾನೆ. 2006ರಲ್ಲಿ ಆತ ಕಾಂಗ್ರೆಸ್ ಪಕ್ಷದಿಂದ ಗೆದ್ದು ಮಂಡ್ಯ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದ. ಮದ್ದೂರಿನ ಕೊಲ್ಲಿ ಸರ್ಕಲ್‌ನಲ್ಲಿ ಈತನ ಒಡೆತನದ ಸೋಮೇಶ್ವರ ಸಮುದಾಯ ಭವನವಿದೆ. ಆತ ಜಿ.ಪಂ. ಸದಸ್ಯನಾಗಿದ್ದ ಅವಧಿಯಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲು ಹೊರಟಿತ್ತು, ಅದೇ ಸಮಯದಲ್ಲಿ ನಾಗಮಂಗಲ ಶಾಸಕ ಚಲುವರಾಯಸ್ವಾಮಿ ಎಬಿಪಿಜೆಡಿಯಿಂದ ಗೆದ್ದಿದ್ದ ಸುಧಾ ಚಂದ್ರಶೇಖರ್‌ರನ್ನು ಜೆಡಿಎಸ್‌ಗೆ ಸೆಳೆದು ಆಕೆಯನ್ನು ಅಧ್ಯಕ್ಷರನ್ನಾಗಿ ಮಾಡಲು ಮುಂದಾಗಿದ್ದರು. ಆಗ ಬೆಂಗಳೂರಲ್ಲಿ ಒಂದು ಸೈಟ್, ಸೋಮೇಶ್ವರ ಸಮುದಾಯ ಭವನ ನಿರ್ಮಿಸಲು ಮಾಡಿದ್ದ ಕೆಎಸ್‌ಎಫ್‌ಸಿ ಸಾಲಮನ್ನಾ ಮಾಡಿಸುವ ಚೆಲುವರಾಯಸ್ವಾಮಿಯ ಡೀಲ್‌ಗೆ ಒಪ್ಪಿದ ಕೃಷ್ಣೇಗೌಡ ಅಧ್ಯಕ್ಷ ಚುನಾವಣೆಯ ದಿನ ಬರದೆ ತಲೆತಪ್ಪಿಸಿಕೊಂಡುಬಿಟ್ಟ. ಹಾಗಾಗಿ ಕಾಂಗ್ರೆಸ್ ಅಭ್ಯರ್ಥಿ ಸೋತು ಸುಧಾ ಚಂದ್ರಶೇಖರ್ ಜಿ.ಪಂ. ಅಧ್ಯಕ್ಷರಾಗಿ ಆಯ್ಕೆಯಾದರು. ಅಂತವನ ತಮ್ಮ ಈ ಎಸ್.ಪಿ.ಸ್ವಾಮಿ.

ಜೆಡಿಎಸ್ ಸಂಸದ ಸಿ.ಎಸ್.ಪುಟ್ಟರಾಜು, ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಕೆ.ಟಿ.ಹನುಮಂತು



'ಸ್ವಾಮಿ' ನಿಷ್ಠ ರವಿಕುಮಾರ

ಮೊದಲಾದ ದೊಡ್ಡದೊಡ್ಡ ರಾಜಕೀಯ ಘಟನಾನುಘ
ಜೊತೆ ರಿಯಲ್ ಎಸ್ಟೇಟ್ ದಂಧೆ ನಡೆಸುವ ಸ
ಅಲ್ಲಿ ದುಡಿದಿರುವ ಹಡಬೆ ದುಡ್ಡಿನ ರಕ್ಷಣೆಗೆ ರಾಜ
ಅಧಿಕಾರ ಬೇಕೇಬೇಕು. ಅದರ ಮೊದಲ ಭಾ
ಕಳೆದ 2016ರ ಜಿ.ಪಂ. ಚುನಾವಣೆಯಲ್ಲಿ ತನ್ನ ದ
ನಾಗರತ್ನ ಸ್ವಾಮಿಯನ್ನು ಚಾಮನಹಳ್ಳಿ ಜಿ.ಪಂ. ಕ್ಷೇತ್ರ
ನಿಲ್ಲಿಸಿ ಕೋಟ್ಯಾಂತರ ಖರ್ಚು ಮಾಡಿಸಿ ಗೆಲ್ಲಿಸಿಕೊ
ನಂತರ ಜಿ.ಪಂ. ಅಧ್ಯಕ್ಷ ಗಾದಿಯಲ್ಲಿ ಹೆಂಡತಿ
ಕೂರಿಸಲು ಹೊರಟ ಸ್ವಾಮಿಗೆ ಡಿ.ಸಿ.ತ
ಕೃಪಾಕಟಾಕ್ಷವಿತ್ತು, ಆದಕ್ಕಾಗಿ ತಮ್ಮ ಬೀಗರಾದ ದೇವ
ಹಾಗೂ ಕುಮಾರಸ್ವಾಮಿ ಬಳಿ ಮಾತನಾಡಿ
ಡೀಲ್ ಕೂಡಾ ಕುದುರಿಸಿದ್ದರು. ತನ್ನ ಮಡದಿ
ಅಧ್ಯಕ್ಷೆಯಾಗಿಸುವುದಕ್ಕಾಗಿ ಕೋಟ್ಯಾಂತರ ಹಣ
ಸಾಮಾನ್ಯ ಮಹಿಳೆ ಮೀಸಲಾತಿ ಮಾಡಿಸಿಕೊ
ಬಂದಿದ್ದಾಗಿ ಸ್ವತಃ ಸ್ವಾಮಿಯೇ ಟಾಂಟಾಂ ಹೊ
ಜೆಡಿಎಸ್ ಜಿ.ಪಂ. ಸದಸ್ಯರಿಗೆ ತಲೆಗಿಷ್ಟು ರೊಕ್ಕವೂ
ಆಗಿಹೋಗಿತ್ತು. ಚುನಾವಣೆಯ ದಿನದಂದು
ಪ್ರವಾಸಿಮಂದಿರದಲ್ಲಿ ಜೆಡಿಎಸ್‌ನ ಎಲ್ಲಾ ಜಿ.ಪಂ. ಸದ
ಹಾಜರಾಗಿದ್ದರು. ಜೆಡಿಎಸ್ ನಾಯಕರಾದ ಸ
ಸಿ.ಎಸ್.ಪುಟ್ಟರಾಜು, ನಾಗಮಂಗಲ ಶಾಸಕ ಚಲುವ
ಸ್ವಾಮಿ; ಶ್ರೀರಂಗಪಟ್ಟಣ ಶಾಸಕ ರಮೇಶ್
ಬಂಡಿಸಿದ್ದೇಗೌಡ, ಮದ್ದೂರು ಶಾಸಕ ಡಿ.ಸಿ.ತ
ಕೆ.ಆರ್.ಪೇಟೆ ಶಾಸಕ ನಾರಾಯಣಗೌಡ, ಮಾಜಿ
ಎಂ.ಶ್ರೀನಿವಾಸ್ ಸೇರಿದಂತೆ ಹಲವು ನಾಯಕರ
ಸಭೆಯಲ್ಲಿದ್ದರು. ಸಭೆಯಲ್ಲಿ ನಾಗರತ್ನ ಸ್ವಾಮಿ
ಸ್ಥಾನಕ್ಕೆ ನಾಮಪತ್ರ ಸಲ್ಲಿಸಲು ದೇವೇಗೌಡ-ಕುಮಾರ


05 ◀◀ ಆಹಾರದ ವಿರುದ್ಧ ಚೆಡ್ಡಿಗಳ ಕೇಸರಿ ಕೇಕೆ!

ಕಲಾಮಂದಿರ, ಮನೆಯಂಗಳದ ಆವರಣದಲ್ಲಿ ಭೋಜನ ಸೇವನೆ ನಡೆದಿತ್ತು, ಅದರಂತೆ ಚಾರ್ವಾಕ ಸಂಸ್ಥೆಯೂ ಅದನ್ನೆ ಮಾಡಿದೆ. ಚಾರ್ವಾಕ ಸಂಸ್ಥೆ ಮಾಂಸ ಸೇವನೆ ಮಾಡಿದ್ದು ತಪ್ಪು ಎಂದು ಹೇಳಿರುವ ಡಿಸಿ ಆ ಸಂಘಟನೆಯನ್ನು ಕಪ್ಪು ಪಟ್ಟಿಗೆ ಸೇರಿಸುವುದಾದರೆ ಈ ಮುಂಚೆ ಅಲ್ಲಿ ಕಾರ್ಯಕ್ರಮ ಮಾಡಿದ ಬೇರೆ ಭೋಜನ ಸೇವಿಸಿದ ಎಲ್ಲ ಸಂಘಟನೆಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕಾಗುತ್ತದೆ. ಯಾಕೆಂದರೆ ಆಹಾರ ಎಂದಮೇಲೆ ಮಾಂಸಾಹಾರ ಸಸ್ಯಾಹಾರ ಎಲ್ಲವೂ ಒಂದೆ ಅಲ್ಲವೆ?

ಸರ್ಕಾರಿ ಕಟ್ಟಡಗಳಲ್ಲಿ ಮಾಂಸಾಹಾರ ನಿಷಿದ್ಧ ಎನ್ನುವುದಾದರೆ ಸರ್ಕಾರಿ ಹಾಸ್ಟೆಲ್, ಪಾರ್ಲಿಮೆಂಟ್, ಅಸೆಂಬ್ಲಿಗಳಲ್ಲಿ ಇನ್ನೂ ಮುಂತಾದ ಸರ್ಕಾರಿ ಕಟ್ಟಡಗಳಲ್ಲಿ ಮಾಂಸದೂಟದ ವ್ಯವಸ್ಥೆ ಇದೆ. ಅದೆಲ್ಲವನ್ನೂ ಈ ಡಿಸಿ ಕಪ್ಪು ಪಟ್ಟಿಗೆ ಸೇರಿಸುತ್ತಾರೆಯೆ. ಯಾಕೆಂದರೆ ಮಾಂಸ ಅಂದರೆ ಎಲ್ಲವೂ ಒಂದೇ. ಮೀನು, ಕುರಿ, ಕೋಳಿ ಎಲ್ಲವೂ ಒಂದೇ. ಯಾವುದೂ ಮೇಲಲ್ಲ, ಯಾವ ಮಾಂಸವೂ ಕೀಳಲ್ಲ, ಸಂವಿಧಾನದಲ್ಲಿ ಎಲ್ಲೂ ದನದ ಮಾಂಸ ತಿನ್ನಬಾರದು ಎಂದು ಹೇಳಲಾಗಿಲ್ಲ. ಹಾಗಾಗಿ ಒಬ್ಬ ಡಿಸಿ ದ್ವೇಷ ರಾಜಕಾರಣದ ಸಂಸದ ಮಾತಿಗೆ ಮಣಿದು ಈ ರೀತಿ ನಿರ್ಧಾರ ಮಾಡಿರುವುದು ಎಷ್ಟು ಸರಿ. ಅದೂ ಅಲ್ಲದೆ ಜನಸಾಮಾನ್ಯರಿಗೆ ಬೇಡವಾದ ಯೋಗ ಆಯೋಜನೆ, ಚಾಮುಂಡಿಬೆಟ್ಟದಲ್ಲಿ ಹೋಮ ಆಯೋಜನೆ ಮುಂತಾದವುಗಳ ಏರ್ಪಡಿಸುವಲ್ಲಿ ಆಸಕ್ತಿ ವಹಿಸುವ ಡಿಸಿಗೆ ಜನಸಾಮಾನ್ಯರಿಗೆ ಬೇಕಿರುವ ಕಾರ್ಯಕ್ರಮ ರೂಪಿಸುವಲ್ಲಿ ಹೆಚ್ಚು ಆಸಕ್ತಿ ಇಲ್ಲ, ಮುಖ್ಯಮಂತ್ರಿಗಳ ತವರುಜಿಲ್ಲೆಯಲ್ಲೇ ಇಂಥಾ ಒಬ್ಬ ಡಿಸಿ ಇರುವುದು ದುರಂತವೇ ಸರಿ!

ಗೋಮೂತ್ರಕ್ಕೆ ತಿರುಗೇಟು

ಕಲಾಮಂದಿರದಲ್ಲಿ ಗೋಮೂತ್ರ ಪ್ರೋಕ್ಷಣೆ ಮಾಡಿರುವ ನಗರ ಬಿಜೆಪಿ ಯುವ ಮೋರ್ಚಾದ ವಿರುದ್ಧ ಮೊಕದ್ದಮೆ ದಾಖಲು ಮಾಡಲು ಪ್ರೊ.ಮಹೇಶ್ ಚಂದ್ರಗುರು ಮುಂದಾಗಿದ್ದಾರೆ. ಅವರ ವಾದದಲ್ಲೂ ಅರ್ಥವಿದೆ. ಕಲಾಮಂದಿರ ನಾಟಕ, ಚರ್ಚೆ, ಸಂವಾದಗಳು ನಡೆಯುವ ಸಾರ್ವಜನಿಕ ಸ್ಥಳ. ಇದು ಖಾಸಗಿಯವರ ಸ್ವತ್ತಲ್ಲ, ಎಲ್ಲರ ಜಾಗ. ಬಹುರೂಪಿ ನಾಟಕೋತ್ಸವ, ಅಂತಾ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮಗಳಲ್ಲಿ ಇಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರಗಳನ್ನು ಏರ್ಪಡಿಸಲಾಗಿತ್ತು. ಅಂತದ್ದರಲ್ಲಿ ಸಂವಿಧಾನಬದ್ಧವಾಗಿ ವಾಕ್ ಸ್ವಾತಂತ್ರ್ಯ ಮತ್ತು ಆಹಾರ ಹಕ್ಕು ಇರುವ ಒಬ್ಬ ಪ್ರಾಧ್ಯಾಪಕನಾಗಿ, ಪ್ರಜ್ಞಾವಂತ ನಾಗರಿಕನಾಗಿ ಕಾರ್ಯಕ್ರಮದಲ್ಲಿ ಮಾತನಾಡಿ ಗೋಮಾಂಸ ಸೇವಿಸಿದ ಮಹೇಶ್ ಚಂದ್ರಗುರು ವಿರುದ್ಧ ಚೆಡ್ಡಿ ಪಡೆ ಮುಗಿಬೀಳುವುದರಲ್ಲಿ ಅರ್ಥವೇ ಇಲ್ಲ.



ಇನ್ನು ಗೋಮಾಂಸ ಸೇವನೆಗೆ ಸಂಬಂಧಿಸಿದಂತೆ ಪ್ರತಾಪಸಿಂಹನ ಹೇಳಿಕೆ ಖಂಡಿಸಿರುವ ದಲಿತ ವಿದ್ಯಾರ್ಥಿ ಒಕ್ಕೂಟ ಮಾನಸ ಗಂಗೋತ್ರಿಯಲ್ಲಿ ಪ್ರತಾಪಸಿಂಹ ಹಾಗೂ ಬಿಜೆಪಿ ಮುಖಂಡರ ವಿರುದ್ಧ ಘೋ
ಕೂಗಿ ಆಕ್ರೋಶ ವ್ಯಕ್ತಪಡಿಸಿದ
ಪ್ರತಾಪಸಿಂಹ ಗೋಮಾಂಸ
ಬದಲು ನಾಯಿ, ನರಿ ತಿನ್ನಿ
ಹೇಳಿರುವುದು ಖಂಡನೀಯ. ಮತ
ಆಹಾರ ಪದ್ಧತಿ ವಿರೋಧಿಸಲು ಯ
ಹಕ್ಕಿಲ್ಲ, ಈ ಹಿನ್ನೆಲೆಯಲ್ಲಿ ಪ್ರತಾ
ಹಾಗೂ ಮನೆಯಂಗಳ ಆವರ
ಗೋಮೂತ್ರ ಸಿಂಪಡಿಸಿದ
ಕಾರ್ಯಕರ್ತರ ವಿರುದ್ಧ
ಕೈಗೊಳ್ಳಬೇಕು ಎಂದೂ ಒತ್ತಾಯಿಸಿದ್ದಾರೆ.
ಸಾಮಾನ್ಯರಲ್ಲಿ ಸಾಮಾನ್ಯವಾಗಿ ನಡೆದ ಕಾರ್ಯಕ್ರಮ ತ
ಬೆಳೆದು ಮೈಸೂರಿನಲ್ಲಿ ಹಿಂದೂ ಅಜೆಂಡ
ಬಿಡುವಂತೆ ಮಾಡಿದೆ. ಪ್ರಜ್ಞಾವಂತರು ನಮ್ಮ
ನಾವಿರಲು ಬಿಡಿ ನಿಮ್ಮ ಅಜೆಂಡ ನಮಗೆ ಬೇಕಿಲ್ಲ
ಹೇಳುವ ಮೂಲಕ ಆ ಬೇರನ್ನು ಕೀಳಬೇಕಿದೆ. ■



ಪ್ರತಾಪ ಸಿಂಹನ ಹೇಳಿಕೆ ವಿರುದ್ಧ ದಲಿತ ವಿದ್ಯಾರ್ಥಿ ಒಕ್ಕೂಟ ಪ್ರತಿಭಟನೆ



ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್.ಚನ್ನಪ್ಪ ಅವರೊಂದಿಗೆ ಗಲಾಟೆ ಮಾಡುತ್ತಿರುವ ಹಿಂದೂ ಸಂಘ

...ರೆಂದು. ಶಾಸಕ ಡಿ.ಸಿ.ತಮ್ಮಣ್ಣ ಹೇಳುತ್ತಿದ್ದಂತೆ ...ದ ಚಲುವರಾಯಸ್ವಾಮಿ, ರಮೇಶ್‌ಬಾಬು ...ದ್ವೇಗೌಡ ಮೊದಲ ಬಾರಿಗೆ ಗೆದ್ದಿರುವ ನಾಗರತ್ನ ...ಯನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದರೆ, ಪಕ್ಷದ ...ಗೆ ಡ್ಯಾಮೇಜ್ ಆಗುತ್ತೆ. ಹಿರಿತನ ಪರಿಗಣಿಸಿ ...ಸ್ಥಾನ ನೀಡಿದರೆ ಪಕ್ಷದ ಮಾನವೂ ಉಳಿಯುತ್ತದೆ ...ಭಿನ್ನರಾಗ ಎತ್ತಿದ್ದರು. ಹಿರಿತನದ ಅರ್ಹತೆಯಿರುವ ...ಪೇಟೆಯ ಪ್ರೇಮಕುಮಾರಿಗೆ ಅಧ್ಯಕ್ಷ ಸ್ಥಾನ ...ಹೋದಲ್ಲಿ ಬಂಡಾಯ ಏಳಬೇಕಾಗುತ್ತೆ ಎಂಬ ...ಯನ್ನೂ ರವಾನಿಸಿದ್ದರು. ಮಂಡ್ಯ ಜೆಡಿಎಸ್‌ನಲ್ಲಿ ...ಯ ನಾಯಕನಂತೆ ಮೆರೆಯುತ್ತಿದ್ದ ಡಿ.ಸಿ.ತಮ್ಮಣ್ಣನ ...ಟು ಅಧ್ಯಕ್ಷೆಯಾದರೆ ಆತನ ಕೊಬ್ಬು ಮತ್ತಷ್ಟು ... ಎಂಬ ಲೆಕ್ಕಾಚಾರವೇ ಚೆಲುವರಾಯಸ್ವಾಮಿ ...ಲು ಕಾರಣವಾಗಿತ್ತು.

...ಟ್ಟುತ್ತಿಗಾಗಲೇ ದೇವೇಗೌಡ ಹಾಗೂ ಕುಮಾರಸ್ವಾಮಿ ...ಚಲುವರಾಯಸ್ವಾಮಿಯ ಸಂಬಂಧ ಹಳಸಿತ್ತು. ತಮ್ಮಣ್ಣ ...ಗ್ಯ ಸಾಧಿಸಲು ಮುಂದಾಗುತ್ತಿದ್ದಂತೆ ಎಚ್ಚೆತ್ತ ...ಯಸ್ವಾಮಿ ಆದಾಗಲೇ ನಾಗಮಂಗಲದ ಐದು ಮಂದಿ ... ಶ್ರೀರಂಗಪಟ್ಟಣದಿಂದ ಆರಿಸಿಬಂದಿದ್ದ ಮೂವರು ...ದಸ್ಯರನ್ನು ಮುಂದಿಟ್ಟುಕೊಂಡು ಶಾಸಕ ನರೇಂದ್ರಸ್ವಾಮಿ ...ಮಾತನಾಡಿ ಕಾಂಗ್ರೆಸ್ ಅಭ್ಯರ್ಥಿ ಯನ್ನು ಬೆಂಬಲಿಸುವ ...ಸದ ಪುಟ್ಟರಾಜು ಮೂಗಿಗೆ ಬಡಿದಿತ್ತು. ಕೂಡಲೇ ...ಣ್ಣಗೆ ಫೋನ್ ಮಾಡಿದ ಪುಟ್ಟರಾಜು ನಾವೇನಾದರೂ ... ಸ್ವಾಮಿಯನ್ನು ಅಧ್ಯಕ್ಷ ಸ್ಥಾನಕ್ಕೆ ತಂದರೆ ...ಯಸ್ವಾಮಿ ಹಾಗೂ ರಮೇಶ್‌ಬಾಬು ಬೆಂಬಲಿಗರು ...ಗೆ ಕೈಕೊಟ್ಟು ಕಾಂಗ್ರೆಸ್ ಅಭ್ಯರ್ಥಿಗೆ ಜೈ ಅನ್ನುವುದು ...ಹಾಗೇನಾದರೂ ಆದ್ರೆ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷದ ...ಹರಾಜಾಗುವುದು ಖಚಿತ ಎಂದು ವಿವರಿಸಿದರು. ... ಪಕ್ಷದ ಮಾನ ಹರಾಜಾಗುವ ಬದಲು ಜೆಡಿಎಸ್‌ನಿಂದ ...ಮಕುಮಾರಿ ಹಿರಿತನದ ಲಾಭ ಪಡೆದು ಮಂಡ್ಯ ...ಅಧ್ಯಕ್ಷೆಯಾಗಿ ಆಯ್ಕೆಯಾದರು. ಇತ್ತ ಅಧ್ಯಕ್ಷ ಸ್ಥಾನಕ್ಕೆ ... ಸಲ್ಲಿಸಿದ್ದರೂ, ಅಂತಿಮ ಗಳಿಗೆಯಲ್ಲಿ ನಾಗರತ್ನರನ್ನು ...ಡಲು ಬಿಡದ ಚಲುವರಾಯಸ್ವಾಮಿ, ರಮೇಶ್‌ಬಾಬು, ...ಪುಟ್ಟರಾಜು ವಿರುದ್ಧ ಶಾಸಕ ಡಿ.ಸಿ.ತಮ್ಮಣ್ಣ ಹಾಗೂ ...ಬೆಂಬಲಿಗರು ಬೀದಿಯಲ್ಲೇ ಬಾಯಿಗೆ ಬಂದಂತೆ ...ಟ್ಟು ತೀರಿಸಿಕೊಂಡರು.

'ಸ್ವಾಮಿ ನಿಷ್ಠೆ'

...ವಾಗ ಹೆಂಡತಿ ನಾಗರತ್ನ ಸ್ವಾಮಿಗೆ ಜಿ.ಪಂ. ...ಸ್ಥಾನ ಕೈ ತಪ್ಪಿತೋ ಆಗಿನಿಂದಲೇ ಜಿಲ್ಲಾ ...ಣದಲ್ಲಿ ಬೆಳೆಯುವ ಗುರಿ ಸ್ವಾಮಿಗೆ ಬಂತು. ...ಮಡಿದಿರುವ ಹಣವನ್ನು ಖರ್ಚು ಮಾಡಿದರೆ ... ಅಧ್ಯಕ್ಷ ಸ್ಥಾನವೇನು? ಶಾಸಕನಾಗಿಯೇ ...ಬಹುದು ಎಂದು ಅದ್ಯಾವ ದೊಣ್ಣೆ ನಾಯಕ ...ಬಿಯೂದಿದನೋ ಗೊತ್ತಿಲ್ಲ. ಈತನೂ ಎಂಎಲ್‌ಎ ...ಹಗಲುಗನಸು ಕಾಣತೊಡಗಿದ. ಮದ್ದೂರಿನಲ್ಲಿ ...ಜಕೀಯ ಗುರು ಶಾಸಕ ಡಿ.ಸಿ.ತಮ್ಮಣ್ಣನಿಗಲ್ಲದೆ ...ಬೇರಾರಿಗೂ ಜೆಡಿಸ್ ಟಿಕೆಟ್ ಸಿಗುವುದು ಕನಸಿನ ... ಹಾಗಾಗಿ ಪಕ್ಕದ ಮಂಡ್ಯ ಕ್ಷೇತ್ರಕ್ಕೆ ಜಂಪ್ ...ಸಿ. ಮಂಡ್ಯ ಕ್ಷೇತ್ರಕ್ಕೆ ಅನಾಮಿಕನಾಗಿದ್ದ ಸ್ವಾಮಿಯನ್ನು ...ಸಲು ವೇದಿಕೆಯಾದದ್ದೇ 3ನೇ ನಗರ ಸಾಹಿತ್ಯ ...ನ. ಸ್ವಾಮಿಯ ಪಾದವನ್ನು ಕಣ್ಣಿಗೊತ್ತಿಕೊಂಡ ...ಅಧ್ಯಕ್ಷ ಎತ್ತುವಳಿ ರವಿಕುಮಾರ ತನ್ನ ಗ್ಯಾಂಗ್ ...ದು ಸ್ವಾಮಿಯನ್ನು ಸ್ವಾಗತ ಸಮಿತಿ ಅಧ್ಯಕ್ಷನನ್ನಾಗಿ ...ನಗರದ ತುಂಬೆಲ್ಲಾ ಫ್ಲೆಕ್ಸ್, ಬ್ಯಾನರ್ ಹಾಕಿ ...ದ. ನಗರದ ಗಲ್ಲಿಗಲ್ಲಿಗಳಲ್ಲೂ ಸ್ವಾಮಿಯ ಆಳೆತ್ತರದ ... ತುಂಬಿಹೋಗಿ ಮಂಡ್ಯದ ಜನ ಯಾವನ್ರೀ ...ಸ್ವಾಮಿ ಎಂದು ಕೇಳುವಂತಾಯಿತು. ಅದಕ್ಕೆ ...ರೆ ಇವ್ರು ಮದ್ದೂರಿನ ಸಾದೊಳಲು ಸ್ವಾಮಿ ...ಹಿತ್ಯ ಸೇವೆ ಮಾಡ್ತೀನಿ ಅಂತ ಕೈ ತುಂಬಾ ...ಕೊಟ್ರು, ಹಾಗಾಗಿ ಕರ್‍ಕೊಂಡು ಬಂದೆ ಎಂದು ...ತೆ ಹಲ್ಲು ಕಿರಿಯುತ್ತಾನೆ. ಸಮ್ಮೇಳನಾಧ್ಯಕ್ಷೆ ...ಣಿಗಿಂತ, ಮದ್ದೂರಿನಿಂದ ಕರೆತಂದು ಸ್ವಾಗತ ...ಅಧ್ಯಕ್ಷನಾಗಿ ಮಾಡಿರುವ ಸ್ವಾಮಿಗೇಕೆ ಇಷ್ಟೊಂದು ...ಬ್ಯಾನರ್ ಹಾಕಿ ಪ್ರಚಾರ ಕೊಟ್ಟಿದ್ದೀರಿ. ಜಿಲ್ಲಾ ...ಕೆಲ್ಲರು ಸಾಹಿತ್ಯ ಲೋಕಕ್ಕೆ ಅವರ ಕೊಡುಗೆಯೇನು ...ಉತ್ತರಿಸಲಾಗದ ರವಿಕುಮಾರ್ ಗಂಟಲಿನಲ್ಲಿ ... ಪ್ರಸಾದ ತುಂಬಿಕೊಂಡಿರುವುದಂತೂ ಸತ್ಯ.

... ಸಮ್ಮೇಳನದ ಬಗ್ಗೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ...ಅಧ್ಯಕ್ಷ ರವಿಕುಮಾರ ಸಮ್ಮೇಳನಾಧ್ಯಕ್ಷೆ ...ಣಿಗಿಂತ, ಸ್ವಾಗತ ಸಮಿತಿ ಅಧ್ಯಕ್ಷ ತುಕಾಲಿ ...ಗುಣಗಾನ ಮಾಡಲು ಆರಂಭಿಸಿದ. ನೀನೇನೂ ...ಸಮ್ಮೇಳನದ ವಿವರಣೆ ಕೊಡಲು ಬಂದಿದ್ದೀಯೋ ... ಹೊಗಳಲು ಬಂದಿದ್ದೀಯೋ ಎಂದು ...ರು ಯದ್ವಾತದ್ವಾ ಜಾಡಿಸಿಬಿಟ್ಟರು. ಆಗ ...ಗೋಷ್ಠಿಯಲ್ಲಿದ್ದ ಸ್ವಾಮಿ ಹಾಗೂ ಆತನ ಬಾಲಿ ...ರವಿಕುಮಾರನ ಮುಖ ಪತ್ರಕರ್ತರ ಪ್ರಶ್ನೆಗೆ ...ಉತ್ತರಿಸಲಾಗದೆ ಇಂಗು ತಿಂದ ಮಂಗನಂತಾಗಿತ್ತು.



ಪತ್ರಕರ್ತರು ಸಿಟ್ಟಿಗೇಳುತ್ತಿದ್ದಂತೆಯೇ ಅವರನ್ನು ಸಮಾಧಾನ ಪಡಿಸಲು ಮುಂದಾದ ರವಿಕುಮಾರ ಅಂದು ಸಂಜೆಯೇ ಪತ್ರಕರ್ತರಿಗೆಲ್ಲ ಫೋನ್ ಮಾಡಿ ಸ್ಪೋರ್ಟ್ಸ್‌ಕ್ಲಬ್‌ನಲ್ಲಿ ಸ್ವಾಮಿಯವರು ಒಂದು ಸಣ್ಣ ಪಾರ್ಟಿ ಇಟ್ಟುಕೊಂಡಿದ್ದಾರೆ ಬನ್ನಿ ಎಂದು ಆಹ್ವಾನವಿತ್ತ. ರವಿಕುಮಾರ ಮತ್ತು ಸ್ವಾಮಿ ಕರೆದಿದ್ದ ಪಾರ್ಟಿಗೆ ಬೆರಳೆಣಿಕೆಯ ಪತ್ರಕರ್ತರಷ್ಟೇ ಹೋದರು. ಆದರೆ ಸ್ವಾಮಿ ಕೊಟ್ಟ ಪಾರ್ಟಿಯಲ್ಲಿ ಮಂಡ್ಯದ ಕೆಲ ಪುಡಿ ಪುಢಾರಿಗಳು, ಎತ್ತುವಳಿ ರವಿಯ ಹಿಂಬಾಲಕರು ಕುಡಿದು ತಿಂದು ತೇಗಿದರು. ಇವರಿಗೆಲ್ಲ ಕುಡಿಸಿ ತಿನ್ನಿಸಿದ ಸ್ವಾಮಿ ಮತ್ತು ರವಿಕುಮಾರ ಅದ್ಯಾವ ಕನ್ನಡ ನಾಡು-ನುಡಿಯ ಉದ್ಧಾರ ಮಾಡಿದರೋ ಅವರೇ ಬೊಗಳಬೇಕು.

ಇನ್ನು ಮಂಡ್ಯದ ಕಲಾಮಂದಿರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಹಲವು ಅಧ್ವಾನಗಳೇ ನಡೆದುಹೋಯಿತು. ಕಸಾಪದಿಂದ ಹಾಕಿಸಿದ್ದ ಫ್ಲೆಕ್ಸ್‌ಗಳಲ್ಲೂ ಜೆಡಿಎಸ್‌ನ ಸ್ವಾಮಿ ಸೇರಿದಂತೆ ವಿವಿಧ ಜೆಡಿಎಸ್ ಮುಖಂಡರ ಭಾವಚಿತ್ರಗಳೇ ತುಂಬಿದ್ದು, ಸಮ್ಮೇಳನ ಸಂಪೂರ್ಣ ಜೆಡಿಎಸ್ ಮಯವಾಗಿತ್ತು. ಸಮ್ಮೇಳನಕ್ಕೂ ಮೊದಲು ನಡೆದ ಮೆರವಣಿಗೆಯಲ್ಲಿ ಜನರೇ ಇರಲಿಲ್ಲ. ಕೆಲವೊಂದು ಜಾನಪದ ಕಲೆಗಳ ತಂಡಗಳಷ್ಟೇ ಭಾಗವಹಿಸಿದ್ದವು. ಹಿರಿಯ ಸಾಹಿತಿಗಳು, ಸಾಹಿತ್ಯ ಪ್ರೇಮಿಗಳು, ಸಂಘಟನೆಗಳ ಮುಖಂಡರು ಸಾರ್ವಜನಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮಾಡಿದ ಯಾವ ಸಮ್ಮೇಳನಗಳೂ ಸಫಲವಾದ ಉದಾಹರಣೆಯೇ ಮಂಡ್ಯ ಜಿಲ್ಲೆಯಲ್ಲಿಲ್ಲ. ಹೀಗಿರುವಾಗ ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಜೆಡಿಎಸ್ ಪುಢಾರಿ ಕಂ ಉದ್ಯಮಿಯೊಬ್ಬನನ್ನು ವಿಜೃಂಭಿಸುವ ಈ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವುದೇ ಅವಮಾನ ಎಂದು ತಿಳಿದ ಸಾಹಿತ್ಯ ಪ್ರೇಮಿಗಳ್ಯಾರೂ ಸಮ್ಮೇಳನದ ಅಂಗಳಕ್ಕೆ ಕಾಲಿಡಲೇ ಇಲ್ಲ. ಸ್ವತಃ ಸ್ವಾಮಿಗೆ ವಾಕರಿಕೆ ಬರುವಷ್ಟು ಅವನ ಗುಣಗಾನ ಮಾಡುವ ರವಿಕುಮಾರ ಹಾಗೂ ಆತನ ಶಿಷ್ಯ ಶಿವರಾಮನ ಮುಖ ನೋಡಿ ಯಾರು ತಾನೇ ಸಮ್ಮೇಳನಕ್ಕೆ ಬರುತ್ತಾರೆ. ಕಲಾಮಂದಿರದಲ್ಲಿದ್ದ 600 ಚಿಲ್ಲರೆ ಕುರ್ಚಿಗಳೂ ತುಂಬಲಿಲ್ಲ ಎಂದರೆ ಎಷ್ಟು ನೀರಸವಾಗಿತ್ತು ಸಾಹಿತ್ಯ ಸಮ್ಮೇಳನ ಎಂಬುದು ತಿಳಿಯುತ್ತದೆ. ಇನ್ನು ರವಿಕುಮಾರ ಇದುವರೆಗೂ ಮಾಜಿ ಶಾಸಕ ಎಂ.ಶ್ರೀನಿವಾಸ್ ಅಳಿಯ ಜಿ.ಪಂ. ಸದಸ್ಯ ಎಚ್.ಎಂ.ಯೋಗೇಶ್‌ರನ್ನು ಓಲೈಸುತ್ತಿದ್ದ. ಆತನನ್ನು ಕಸಾಪ ಕೋಶಾಧ್ಯಕ್ಷನನ್ನಾಗಿ ಮಾಡಿಕೊಂಡಿದ್ದ. ಈಗ ರವಿಕುಮಾರ ಅವನಿಗಿಂತಲೂ ಹೆಚ್ಚು ದುಡ್ಡಿನ ಕುಳವಾದ ಸಾದೊಳಲು ಸ್ವಾಮಿಗೆ ತನ್ನ ನಿಷ್ಠೆಯನ್ನು ಮಾರಿಕೊಂಡಿದ್ದಾನೆ. ಕಸಾಪ ಕೋಶಾಧ್ಯಕ್ಷ ಯೋಗೇಶ್ ತನ್ನ ಮಾವ ಮಾಜಿ ಶಾಸಕ ಎಂ.ಶ್ರೀನಿವಾಸ್‌ಗೆ ಮುಂದಿನ ಬಾರಿಯೂ ಜೆಡಿಎಸ್ ಟಿಕೆಟ್ ಸಿಗಲಿ ಎಂದು ಬಂಡವಾಳ ಹಿಡಿದುಕೊಂಡು ಕಾಯುತ್ತಿದ್ದಾನೆ. ಅಲ್ಲಿಗೆ ಅನಾರೋಗ್ಯದ ಕಾರಣವೊಡ್ಡಿ ಮಾವ ಶ್ರೀನಿವಾಸ್‌ಗೆ ಟಿಕೆಟ್ ತಪ್ಪಿಸಿದರೆ ನನಗೆ ಎಂಎಲ್‌ಎ ಸ್ಥಾನಕ್ಕೆ ಜೆಡಿಎಸ್ ಟಿಕೆಟ್ ಕೊಡಲಿ ಎಂದು ಹೇಳುತ್ತಿರುವ ಯೋಗೇಶ್ ಮಂಡ್ಯ ಕ್ಷೇತ್ರಕ್ಕೆ ಸ್ವಾಮಿಯನ್ನು ಪ್ರತಿಷ್ಠಾಪಿಸುವ ಸಮ್ಮೇಳನಕ್ಕೆ ಹೇಗೆ ಬರುತ್ತಾನೆ ಅಲ್ಲವೇ? ಆದರೆ ರವಿಕುಮಾರ ಯೋಗೇಶ್ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ. ಅವನಿಗೆ ಬೇಕಾದ್ದು ಸ್ವಾಮಿ ಪ್ರಸಾದ. ಅದು ಸಿಕ್ಕ ಮೇಲೆ ಯೋಗೇಶ್‌ನನ್ನು ಕಟ್ಟಿಕೊಂಡು ನನಗೇನಾಗಬೇಕು ಎಂಬ ಧಿಮಾಕು ರವಿಯ ಸಾಹಿತ್ಯ ಸಮ್ಮೇಳನ ಅಟ್ಟರ್ ಫ್ಲಾಪ್ ಆಗಿಹೋಯ್ತು.

ನೀರಸ ಸಮ್ಮೇಳನ

ದುಡ್ಡು ಕೊಟ್ಟವರಿಗೆ ಮಣೆ ಹಾಕುವ ಚಾಯಮಾನದ ರವಿಕುಮಾರ ನಡೆಸಿದ ಸಮ್ಮೇಳನ ಬಹಳ ನೀರಸವಾಗಿತ್ತು. ಸ್ವಾಗತ ಸಮಿತಿ ಅಧ್ಯಕ್ಷ ಸ್ವಾಮಿಗೆ ನೀಡಿದ ವಿಜೃಂಭಣೆ ಮುಂದೆ ಸಮ್ಮೇಳನಾಧ್ಯಕ್ಷೆ ಸುಮಾರಾಣಿಗೆ ನೀಡಿದ ಗೌರವ ಬಹಳ ಕಡಿಮೆಯಾಗಿತ್ತು. ವ್ಯಕ್ತಿಯನ್ನು ವಿಜೃಂಭಿಸುವ ಸಮ್ಮೇಳನಕ್ಕೆ ಸಾಹಿತಿಗಳು, ಸಾಹಿತ್ಯಾಸಕ್ತರು, ಕನ್ನಡ ಪ್ರೇಮಿಗಳು ಬರದೆ ಇದ್ದರಿಂದ ಕಲಾಮಂದಿರದ ಕುರ್ಚಿಗಳು ಖಾಲಿ ಹೊಡೆಯುತ್ತಿತ್ತು. ಉದ್ಘಾಟನಾ ಸಮಾರಂಭ ಮುಗಿದ ನಂತರ ಜನರಿಗಿಂತ ಖಾಲಿ ಕುರ್ಚಿಗಳೇ ಕಾಣುತ್ತಿತ್ತು. ಕನ್ನಡ ಸಾಹಿತ್ಯ ಪರಿಷತ್ ಸಂಸ್ಥಾಪಕ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನ ಕಲಾಮಂದಿರದಲ್ಲಿ ಅವರ ಭಾವಚಿತ್ರಕ್ಕೆ ಹೂವಿನ ಹಾರ ಹಾಕುವುದನ್ನು ಕಸಾಪ ರವಿ ಆತನ ಬಹುಪರಾಕ್ ಶಿಷ್ಯರು ಮರೆತು ಅವಮಾನ ಮಾಡಿದರು. ಸಮ್ಮೇಳನಾಧ್ಯಕ್ಷರ ಭಾಷಣವನ್ನು ಅತ್ಯಂತ ಸಣ್ಣದಾಗಿ ಮುದ್ರಿಸಿದ್ದರಿಂದ ಓದಲೂ ಕಷ್ಟವಾಗಿತ್ತು. ಲಕ್ಷಾಂತರ ರೂ. ಖರ್ಚು ಮಾಡಿ ಸ್ವಾಮಿಯ ಕಟೌಟ್‌ಗಳನ್ನು ನಗರದ ಹಾದಿಬೀದಿಯಲ್ಲಿ ಹಾಕಿಸಿದ ರವಿಕುಮಾರನಿಗೆ ಸಮ್ಮೇಳನಾಧ್ಯಕ್ಷರ ಭಾಷಣದ ಕಿರುಹೊತ್ತಿಗೆಯನ್ನು ಮುದ್ರಿಸಲು ಹಣವಿರಲಿಲ್ಲವೇ? ಎಂದು ಸಮ್ಮೇಳನಕ್ಕೆ ಬಂದವರು ಪ್ರಶ್ನಿಸುತ್ತಿದ್ದುದು ಕಂಡುಬಂತು. ಇನ್ನು ಸಮ್ಮೇಳನದ ಉದ್ಘಾಟನಾ ಸಮಾರಂಭದ ಸಾನಿಧ್ಯವನ್ನು ಆದಿ ಚುಂಚನಗಿರಿ ಶಾಖಾ ಮಠದ ಪುರುಷೋತ್ತಮಾನಂದ ಸ್ವಾಮೀಜಿ ವಹಿಸಬೇಕಿತ್ತು. ಉದ್ಘಾಟನೆಯನ್ನು ಚಿತ್ರನಟಿ ತಾರಾ ಅನುರಾಧ ಮಾಡಬೇಕಿತ್ತು. ಇನ್ನು ಸಮಾರೋಪ ಭಾಷಣವನ್ನು ಮೈಸೂರು ಎಸ್ಪಿ ರವಿ ಡಿ ಚನ್ನಣ್ಣನವರ್ ಮಾಡಬೇಕಿತ್ತು. ಆದರೆ ಇವರ್‍ಯಾರು ಜೆಡಿಎಸ್‌ನ ಪುಢಾರಿ ಸ್ವಾಮಿ ವಿಜೃಂಭಣೆಯ ಸಮ್ಮೇಳನದತ್ತ ತಲೆ ಹಾಕಲಿಲ್ಲ. ಉದ್ಘಾಟನೆಯನ್ನು ಜೆಡಿಎಸ್ ಸಂಸದ ಪುಟ್ಟರಾಜು ಮಾಡಿದರೆ, ಸಮಾರೋಪ ಭಾಷಣವನ್ನು ಸ್ವಾಮಿಯ ರಾಜಕೀಯ ಗುರು ಶಾಸಕ ಡಿ.ಸಿ.ತಮ್ಮಣ್ಣ ಮಾಡಿಹೋದರು.

ನಗರಸಭೆಯ ಎಲ್ಲಾ 35 ಮಂದಿ ಸದಸ್ಯರನ್ನು ಸಾಧಕರ ಸಾಲಿಗೆ ಸೇರಿಸಿ ಅವರಿಗೆ ಸನ್ಮಾನ ಮಾಡಿದ ರವಿಕುಮಾರ್ ಅಂಡ್ ಗ್ಯಾಂಗ್ ಅವರಿಂದ ಎಷ್ಟು ವಸೂಲಿ ಮಾಡಿದೆಯೋ ಗೊತ್ತಿಲ್ಲ. ತನ್ನ ವಾರ್ಡಿನ ಸದಸ್ಯರಿಗೆ ಅದು ಮಾಡಿಸ್ತೀನಿ, ಇದು ಮಾಡಿಸ್ತೀನಿ ಅಂತ ಮುಂಡಾಯಿಸಿ 500-1000 ರೂ. ಮಾಡಿಕೊಳ್ಳುವ ಕೆಲವು ಕುತಂತ್ರಿ ನಗರಸಭೆ ಸದಸ್ಯರಲ್ಲಿ ಅದೇನು ಸಾಧನೆ ಕಂಡನೋ ರವಿಕುಮಾರ ಗೊತ್ತಿಲ್ಲ, ಅಂತಹವರನ್ನು ಸಾಧಕರ ಸಾಲಿನಲ್ಲಿ ಸೇರಿಸಿ ಸನ್ಮಾನಿಸಿದ. ಇನ್ನು ಸಮ್ಮೇಳನದ ಆಹ್ವಾನ ಪತ್ರಿಕೆಯಲ್ಲಿ ಮರಿ-ಹಿರಿ, ಪುಡಿ-ಪುಕ್ಕ ರಾಜಕಾರಣಿಗಳ ಹೆಸರೇ ಕಂಗೊಳಿಸುತ್ತಿತ್ತು. ಬಡ್ಡಿದಂಧೆಯ ರವಿಕುಮಾರ ಜಿಲ್ಲಾ ಕಸಾಪ ಅಧ್ಯಕ್ಷನಾಗಿ ಕೂತ ಮೇಲೆ ಸಂಪೂರ್ಣವಾಗಿ ವ್ಯಾಪಾರೀ ಕೇಂದ್ರವಾಗಿ ಮಾರ್ಪಟ್ಟಿದೆ.

ಅಕ್ರಮವಾಗಿ ದುಡ್ಡು ಮಾಡಿದ ಮುಖಗಳಿಗೆ ಮಣೆ ಹಾಕುವ ರವಿಕುಮಾರನನ್ನು ಕರೆದು ಕ್ಯಾಕರಿಸಿ ಉಗಿದು ಬುದ್ಧಿ ಹೇಳುವ ಕೆಲಸವನ್ನು ಹಿರಿಯ ಸಾಹಿತಿಗಳು ಮಾಡುತ್ತಿಲ್ಲ. ಹಿಂದಿನ ಅಧ್ಯಕ್ಷರುಗಳಾದ ಹೆಚ್.ವಿ.ಜಯರಾಂ, ಕೆ.ಟಿ.ಚಂದು, ಎಂ.ಧರಣೇಂದ್ರಯ್ಯ, ರಾಜು, ಜಿ.ಟಿ.ವೀರಪ್ಪ ತೈಲೂರು ವೆಂಕಟಕೃಷ್ಣ ಡಿ.ಪಿ.ಸ್ವಾಮಿಯಂತಹ ಹಿರಿಯರು ಎತ್ತುವಳಿ ರವಿಕುಮಾರ ಹಾಗೂ ಆತನ ಬಹುಪರಾಕ್ ಶಿಷ್ಯರ ಅಕ್ರಮ ಚಟುವಟಿಕೆಗಳನ್ನು ಪ್ರಶ್ನಿಸದಿದ್ದರೆ ಜಿಲ್ಲಾ ಕಸಾಪವನ್ನು ಮೂರು ಕಾಸಿಗೆ ಹರಾಜು ಹಾಕುವುದರಲ್ಲಿ ಯಾವುದೇ ಅನುಮಾನವಿಲ್ಲ. ಕನ್ನಡ ಭಾಷೆ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಬೇಕಾದ ಕಸಾಪ ಅಧ್ಯಕ್ಷ ರವಿಕುಮಾರ ಶ್ರೀಮಂತ ವ್ಯಕ್ತಿಗಳ ಜಪ ಮಾಡುತ್ತಿರುವುದು ಯಾವ ರೀತಿಯ ಸಾಹಿತ್ಯಿಕ ಕೆಲಸ. ಇದರಿಂದ ಕನ್ನಡ ಭಾಷೆ ನಾಡು-ನುಡಿ- ಜನರ ಅಭಿವೃದ್ಧಿಯಾಗಲು ಸಾಧ್ಯವೇ? ಎಂದು ಹಿರಿಯ ಸಾಹಿತಿಗಳು, ಸಾಹಿತ್ಯಾಸಕ್ತರು ಕನ್ನಡಿಗರೆಲ್ಲ ರವಿಕುಮಾರ ಮತ್ತು ಆತನ ಬಕೆಟ್ ಗ್ಯಾಂಗ್‌ನ ಶಿಷ್ಯರ ಕತ್ತು ಪಟ್ಟಿ ಹಿಡಿದು ಪ್ರಶ್ನಿಸಬೇಕಿದೆ.

■ ವರದಿಗಾರ

ನವಿಲು ಮೈಥುನ



ದಟ್ಟಡವಿಯಲಿ ನಾಟ್ಯವನಾಡುವಾತನ ಬಳಿ ಸುಳಿದರೆ
ಗರ್ವದಿ ಮಯೂರನೆರಗಿ ಬಂದು ಮೊಟ್ಟೆಯಿಡುವೆಡೆ
ಜನನಾಂಗವನಿಟ್ಟು
ಜುಟ್ಟಿಗೆಲ್ಲಾ ಜಟ್ಟಿಯಂತೆ ಕೊಕ್ಕಿನಲಿ ಮೆಟ್ಟಿ ಮೆಟ್ಟಿ
ಅಣುಗಳ ವೀರ್ಯಾಣುಗಳ ರಪ್ಪನೆ ಸ್ಖಲಿಸಿ
ಅವನತ್ತ, ನಾನಿತ್ತ, ಮೇವುಣಿಕೆಗೆ ಯಥಾವತ್ತಾದೆವು
ಎಲ್ಲವೂ ಕ್ಷಣಿಕ

ಕಾಮಚೋದಕ ದಹನವಾಯಿತೆಮ್ಮ ಕ್ರಿಯೆಗೆ ಭೋಗಕೆ
ಸಂಭೋಗಕೆ
ಗರ್ವ ಬಂತು ತಹಬಂದಿಗೆ, ತತ್ತಿ ಬಿಡುಗಡೆಯ
ಚೋದಕದೇರು, ಅದರ ತೇರು
ಪಿಟ್ಯೂಟರಿಯಿಂದ ಬಂದರಷ್ಟೇ ದ್ವಿಚೋಧಕಗಳು,
ಗರ್ವಜನಕ, ಫಲಜನಕ

ಹಕ್ಕಿಯೋನಿಯಲಿ ಹತ್ತಾರು ದಿನಗಟ್ಟಲೆ ಬೆಚ್ಚಗೆ
ಅಡಗಿದ ವೀರ್ಯಾಣುಗಳು
ನಿಸರ್ಗದ ಬೆರಗೋ ಬೆರಗದು, ಅಟ್ಟವನೇರುತ
ಸಾಲುಸಾಲಾಗಿ
ತತ್ತಿಯನು ಫಲಿಸಲು ಮುತ್ತುತ್ತವೆ ಭ್ರೂಣವಾಗಿಸಲು
ರಾಷ್ಟ್ರಪಕ್ಷಿಯ ಬರುದಿಗೆ

ಚೋಧಕಗಳೆರಡು ಮೊಟ್ಟೆಗೆ ಬಿಳಿಯನು ಸೇರಿಸಿ
ಚಿಟ್ಟವನಾಗಿಸಿ
ಮೊಟ್ಟೆಯ ಮಯ್ಯಿಗೆ ಸುಣ್ಣವ ಲೇಪಿಸಿ ಗಟ್ಟಿಯಾಗಿಸಿ
ನಿರಂತರ ಚಕ್ರದಲಿಡಬೇಕು ದಿನಕೊಂದು ಮೊಟ್ಟೆ
ಹತ್ತಾರು ದಿನ
ನಮ್ಮ ಪೀಳಿಗೆಗೆ ನಮ್ಮ ಸಂತತಿಗೆ ರಾಷ್ಟ್ರಪಕ್ಷಿಯ
ಬರುದಿಗೆ

ಕಣ್ಣೀರಿನ ಉಪ್ಪಿಗೆ ನಾನೆಂದೂ ಬಸಿರಾದವಳಲ್ಲ

ಇಟ್ಟ ಮೊಟ್ಟೆಗೆ ಕಾವು ಕೊಟ್ಟಮೇಲೆ
ಬಾಣಂತಿಯಂತೆಯೇ ಸಲುಹಿದೆನು ಎಳೆಯ ಮರಿಗಳ
ಆಹಾರದ ತಾಣಗಳ ತೋರಿಸಿ, ಹೆಕ್ಕಿಹೆಕ್ಕಿ ತಿನ್ನಿಸಿ
ರೆಕ್ಕೆಪುಕ್ಕ ಬಂದು ಹಾರಿಹೋಗುವಂತೆ ನವಿಲುಗರಿಗೆ
ರಾಷ್ಟ್ರಪಕ್ಷಿಯ ಬರುದಿಗೆ

ಮೈಥುನವೆಂಬುದು ಮಹಾಕ್ರಿಯೆ ಮಾನವರಲ್ಲಿರುವಂತೆ
ಮದನಾರಿಗೆ ಮಧುವಣಿಗನಂತೆ ನವಿಲು ಮೈಥುನ
ಮಯೂರನೆಂದೂ ಬ್ರಹ್ಮಚಾರಿಯಲ್ಲ
ಕಣ್ಣೀರಿಗೆ, ಕಣ್ಣೀರಿನ ಉಪ್ಪಿಗೆ ಬಸಿರೆಂದೂ ಬರುವುದಿಲ್ಲ

(ಕಾವ್ಯ ರಚನೆಗೆ ವೈಜ್ಞಾನಿಕ ಜ್ಞಾನವನ್ನು ಬಳಸಿಕೊಳ್ಳಲಾಗಿದೆ)

■ ಪ್ರೊ. ಎಂ. ನಾರಾಯಣಸ್ವಾಮಿ

ಉಡುಪಿ

ಚೆಡ್ಡಿ ಬಿಡಾರದಲ್ಲಿ ಟಿಕೆಟ್ ತಂತ್ರ-ತರಲೆ!!

ಅದೊಂದು ಕಾಲವಿತ್ತು, ಉಡುಪಿ ಎಂದರೆ ಸಾಕು ಶಿಕ್ಷಣ, ಬ್ಯಾಂಕಿಂಗ್ ಮತ್ತು ಹುರಿದ ಮೀನಿನ ಘಮಲು ಮೂಗಿಗೆ ಅಡರುತ್ತಿತ್ತು; ಈಗದಕ್ಕೆ ಸಂಘಿ ಸೈತಾನರು ಧರ್ಮೋನ್ಮಾದದ ಛೀಭಸ್ತ ಚಹರೆ ಕೊಟ್ಟಿದ್ದಾರೆ. ಹಿಂದೂತ್ವದ ಅನೈತಿಕ ಪೊಲೀಸರು ಗೋಪ್ರಾಣ-ಹಿಂದೂ ಹೆಣ್ಣಿನ ಮಾನದ ನೆಪದಿಂದ ಎಲ್ಲಿ ಯಾವಾಗ ಬೆಂಕಿ ಹುಟ್ಟುತ್ತಾರೋ.... ಯಾರ ಜೀವ ತಿಂದು ತೇಗುತ್ತಾರೋ ಎಂದು ಹೇಳಲಾಗದಂಥ ಆತಂಕ-ಅರಾಜಕತೆ.

ಇಂತಿಪ್ಪ ಉಡುಪಿ ಕೇಸರಿ ಪರಿವಾರದ 'ರಾಜರ್ಷಿ' ಪೇಜಾವರ ಮಠಾಧಿಪತಿಯ ಹೆಡ್‌ಕ್ವಾಟ್ರರ್ಸ್. ಬಿಜೆಪಿಯ ಚುನಾವಣಾ ತಂತ್ರಗಾರಿಕೆ-ಟಿಕೆಟ್ ಹಂಚಿಕೆ ಹಿಕಮತ್ತಿನಲ್ಲಿ ರಾತ್ರೋರಾತ್ರಿ ದೊಡ್ಡ 'ಪವಾಡ'ವೇ ಮಾಡಬಲ್ಲರು. ಆರಾಮ್ ಕುರ್ಚಿಯಲ್ಲಿ ಕುಳಿತೇ ಬಿಜೆಪಿ ಅಭ್ಯರ್ಥಿ ಆಯ್ಕೆ ಆಟ ನಿಭಾಯಿಸುತ್ತಿದ್ದ ಡಾ. ವಿ.ಎಸ್. ಆಚಾರ್ಯರ ನಿರ್ಗಮನದ ನಂತರ ಪೇಜಾವರರ ಪಾಲಿಟಿಕಲ್ ಮಹತ್ವ ಸ್ಥಳೀಯ ಚೆಡ್ಡಿ ವಲಯದಲ್ಲಿ ಹೆಚ್ಚಾಗಿದೆ. ಬರೋಬ್ಬರಿ ಒಂದು ವರ್ಷ ಮೊದಲೇ ಅಸೆಂಬ್ಲಿ ಎಲೆಕ್ಷನ್ ಭೂತ ಆವಾಹನೆ ಮಾಡಿಕೊಂಡಿರುವ ಬಿಜೆಪಿಯ ಎಮ್ಮೆಲ್ಲೆ ಚಟದಾರರು ಚೆಡ್ಡಿ ಡಾನ್ ಕಲ್ಲಡ್ಕ ಭಟ್ಟನ ಪಾದಕ್ಕೆ ಡೈ ಹೊಡೆದು ಭಯ-ಭಕ್ತಿಯಲ್ಲೇ ಪೇಜಾವರರ ಸನ್ನಿಧಿಯಲ್ಲಿ ನಡುಬಗ್ಗಿಸಿ ದಿನಗಟ್ಟಲೆ ನಿಲ್ಲುತ್ತಿದ್ದಾರೆ...

ಎದುರಾಗಿರುವ ವಿಧಾನಸಭಾ ಚುನಾವಣೆಯನ್ನು ಉಡುಪಿ ಬಿಜೆಪಿಯ ರಿಂಗ್ ಮಾಸ್ಟರ್‌ಗಳು ನಿರ್ಣಾಯಕ ಯುದ್ಧವೆಂದೇ ಭಾವಿಸಿದ್ದಾರೆ. ಕಳೆದ ಬಾರಿ ಆಗಿದ್ದ ಅನಿರೀಕ್ಷಿತ ಮುಖಭಂಗದ ಸೋಲನ್ನು ಇವತ್ತಿಗೂ ಸಂಘಿಗಳಿಗೆ ಅರಗಿಸಿಕೊಳ್ಳಲಾಗಿಲ್ಲ. ಬಿಜೆಪಿ ಶಾಸಕರು ಮಾಡಿದ್ದ ಅವ್ಯವಹಾರ-ಅವಾಂತರ-ಅನೈತಿಕತೆ ಒಂದೆಡೆಯಾದರೆ ಆರ್‌ಎಸ್‌ಎಸ್-ಭಜರಂಗದಳದ ರೌಡಿಗಳು ಗೋ ಸಾಗಾಟಗಾರರನ್ನು ಹಿಂಸಿಸಿದ್ದು, ಹಿಂದೂ ಹೆಣ್ಣುಗಳನ್ನೇ ಗೋಳು ಹೊಯ್ದು ಕೊಂಡಿದ್ದೆಲ್ಲ ತಿರುಗುಬಾಣವಾಗಿತ್ತು. ಚೆಡ್ಡಿ ಚಾಂಡಾಲರ ಪುಂಡಾಟದಿಂದ ಬೇಸತ್ತು ಹೋಗಿದ್ದ ಉಡುಪಿ ಜಿಲ್ಲೆಯ ಜನರು ತಕ್ಕ ಪಾಠ ಕಲಿಸಿದ್ದರು.

ಹಾಗಂತ ಉಡುಪಿಯ ಬಿಜೆಪಿ ಭಜರಂಗಿ ಪಡೆ ಬುದ್ಧಿಯೇನೂ ಕಲಿತಿಲ್ಲ, ಗೋ ಗೂಂಡಾಗಿರಿ ಮಿತಿಮೀರಿದೆ; ಹಿಂದೂ ಹೆಂಗುಸರ ಹಿಂದೆ ಬಿದ್ದು ಬೇಹುಗಾರಿಕೆ ನಡೆಸುವ ಚಾಳಿಗೆ ಬಿರುಸು ಬಂದಿದೆ. ಕ್ರಿಶ್ಚಿಯನ್-ಮುಸ್ಲಿಮರ ಮೂದಲಿಸುವ ಮಸಲತ್ತು ಮಸೆಯುತ್ತಲೇ ಇದ್ದಾರೆ. ಮನುಷ್ಯತ್ವ-ಧನಾತ್ಮಕ ರಾಜಕಾರಣದ ಗಂಧಗಾಳಿಯೇ ಇಲ್ಲದ ಬಿಜೆಪಿ ಬಳಗ ವಿದ್ವೇಷವನ್ನು ಅಸ್ತ್ರ ಮಾಡಿಕೊಂಡು ಪಟ್ಟಕ್ಕೇರಲು ಸಂಚು ಹೂಡಿದೆ.

ಉಡುಪಿ ಬಿಜೆಪಿ ಗ್ಯಾಂಗಿನಲ್ಲಿ ಇರುವಷ್ಟು ಯುದ್ಧೋನ್ಮಾದ ಬೇರ್‍ಯಾವ ಪಕ್ಷದಲ್ಲೂ ಇಲ್ಲ. ದಿಲ್ಲಿಯಿಂದಲೇ ಮೋದಿ ಮಾಮ ಮಂಕುಬೂದಿ ಎರಚುತ್ತಿರುವ ಭ್ರಮೆ, ಕಾಂಗ್ರೆಸ್‌ಗೆ ಆಡಳಿತ ವಿರೋಧಿ ಅಲೆ ಅಪ್ಪಳಿಸುವ ಲೆಕ್ಕಾಚಾರದಿಂದ ಸಂಘಿ ಸಂತಾನ ತಮಗೆ ಗೆಲುವು ಗ್ಯಾರಂಟಿ ಎಂದೇ ನಂಬಿಕೊಂಡಿದೆ. ಹೀಗಾಗಿ ಜಿಲ್ಲೆಯ ಐದೂ ಅಸೆಂಬ್ಲಿ ಕ್ಷೇತ್ರದ ಬಿಜೆಪಿಯಲ್ಲಿ ದಿನದಿನವೂ ಉಮೇದುವಾರರು ಉದ್ಭವಿಸುತ್ತಲೇ ಇದ್ದಾರೆ. ಕರಾವಳಿ ಬಿಜೆಪಿಯ 'ಟಿಕೆಟ್ ಕಮಿಟಿ ಕಿಂಗ್' ಕಲ್ಲಡ್ಕ ಭಟ್ಟ ಆಭ್ಯರ್ಥಿತನ ಬಯಕೆಯ ಪುಢಾರಿಗಳ ಆರ್ಥಿಕ ತಾಕತ್ತು ತೂಗಿ ನೋಡುತ್ತಿದ್ದಾರೆ. ಎಲೆಕ್ಷನ್ ಖರ್ಚು ಭರ್ಜರಿಯಾಗಿ ಮಾಡೋದಷ್ಟೇ ಅಲ್ಲ, ತಾನು ಕೇಳಿದಷ್ಟು 'ಕಾಣಿಕೆ' ಕೊಡಬಲ್ಲ ಕುಬೇರನ ತಲಾಷ್‌ಗೆ ಭಟ್ಟ ಬಿದ್ದಿದ್ದಾನೆ. ಪೇಜಾವರ ಸ್ವಾಮಿಗೋ ತನ್ನ ಸನಾತನ ಸಂಸ್ಕಾರಕ್ಕೆ ವಿಧೇಯನಾದ ಶಿಷ್ಯೋತ್ತಮ ಯಾರೆಂಬ ಲೆಕ್ಕಾಚಾರ. ಕೊಗುಮಾರಿ ಸಂಸದೆ ಸೋಭಕ್ಕ, ಕೇಂದ್ರ ಮಂತ್ರಿ ಹಲ್ಕುಕಿ ಸದಾಗೌಡರಂಥವರೂ ತಮ್ಮ ಚೇಲಾಗಳಿಗೆ ಚಾನ್ಸ್ ಕೊಡಿಸುವ ಚಮತ್ಕಾರ ಆರಂಭಿಸಿದ್ದಾರೆ.

ಕಾಂಗ್ರೆಸಿಗೆ ಹೈಕಮಾಂಡ್ ಮಾಂಡಲೀಕ ಆಸ್ಕರ್ ಫರ್ನಾಂಡಿಸ್‌ರೇ ಸರ್ವಶಕ್ತ -ಪ್ರಶ್ನಾತೀತ ಟಿಕೆಟ್‌ದಾತ! ಕಳೆದ ಬಾರಿ ಗೆದ್ದಿರುವ ಮಂತ್ರಿ ಪ್ರಮೋದ್ ಮಧ್ವರಾಜ್, ಮಾಜಿ ಮಂತ್ರಿ ವಿನಯಕುಮಾರ್ ಸೊರಕೆ ಮತ್ತು ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಗೋಪಾಲ ಪೂಜಾರಿ ಬಾಸ್ ಆಸ್ಕರ್‌ಗೆ ನಿಷ್ಠರಾಗೇ ಇದ್ದಾರೆ. ದಿಲ್ಲಿ ಲೆವೆಲ್‌ನಲ್ಲೇ ತನಗೆ ಫಿಟ್ಟಿಂಗ್ ಇಟ್ಟು ನೆಮ್ಮದಿ ಕೆಡಿಸಿದ್ದ ಜಯಪ್ರಕಾಶ್ ಹೆಗ್ಡೆ ಕಾಂಗ್ರೆಸ್‌ನಿಂದ ಓಡಿಹೋಗುವಂತೆ ಮಾಡಿರುವ ಆಸ್ಕರ್‌ಗೆ ಕಳೆದ ಬಾರಿ ಸೋತ ಕಾರ್ಕಳ ಮತ್ತು ಕುಂದಾಪುರ ಕ್ಷೇತ್ರದಲ್ಲಿ ಗಟ್ಟಿಗರ ಹುಡುಕೋದೇ ತಲೆ ನೋವಾಗಿದೆ. ಕಾಂಗ್ರೆಸ್‌ನಲ್ಲಿ ಟಿಕೆಟ್‌ಗೆ ಹುರುಸು ಇದ್ದರೆ ಅದು ಒಂಚೂರು ಕಾರ್ಕಳದಲ್ಲಷ್ಟೇ. ಹಾಲಿ ಕಾಂಗ್ರೆಸ್ ಶಾಸಕರು ತಾವೇ ಕ್ಯಾಂಡಿಡೇಟೆಂದು ಖಾತ್ರಿ ಮಾಡಿಕೊಂಡು ತಯಾರಿ ನಡೆಸುತ್ತಿದ್ದಾರೆ. ಟಿಕೆಟ್ ಹಪಾಹಪಿ, ಕಾಲೆಳೆದಾಟದ ಖತರ್‌ನಾಕ್ ಕಸರತ್ತು ಬಿಜೆಪಿಯಲ್ಲೇ ಜೋರು.

ಮೊಯ್ಲಿ ಮಸಲತ್ತು


ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿಯ ದತ್ತ ಪೀಠ ಪಾಲಿಟಿಕ್ಸ್‌ನ ಉಪ-ಉತ್ಪತ್ತಿ ಕಾರ್ಕಳದ ಭಜರಂಗಿ ಶಾಸಕ ಸುನಿಲ್ ಕುಮಾರ್. ಬಾಬಾಬುಡನ್‌ಗಿರಿ 'ಕರ್ಮ'ಕ್ಷೇತ್ರ ಮಾಡಿಕೊಂಡು ಭಜರಂಗಿ ಭೂಪನಾಗಿ ಮೈದಳೆದಿದ್ದ ಸುನಿಲ್ ಹಠಾತ್ ತಾನು ಬಿಲ್ಲವರ ಕುಲ ಕಂಠೀರವ ಎನ್ನುತ್ತ ಕಾರ್ಕಳದಲ್ಲಿ ಬಿಜೆಪಿ ಕ್ಯಾಂಡಿಡೇಟಾಗುವ ತನಕ ಮುಖೇಡಿಯೇ ಆಗಿದ್ದ. ಆದರೂ ಕಾರ್ಕಳದಲ್ಲಿ ಬಹುಸಂಖ್ಯಾತರಾದ ಬಿಲ್ಲವರ ನಡುವೆ ಜಾತಿ ಕಾರ್ಡ್ ತುಂಬ ವ್ಯವಸ್ಥಿತವಾಗಿ ಬಳಸಿದ ಸುನಿಲ್ ಅಚಾನಕ್ ಗೆದ್ದೂ ಬಿಟ್ಟಿದ್ದ. ಆದರೆ ಸರಳ-ಸಜ್ಜನ-ಜನಪರ ಚಿಂತನೆಯ ಗೋಪಾಲ ಭಂಡಾರಿಯನ್ನು ವಿನಾಕಾರಣ ಸೋಲಿಸಿದ್ದು ಕಾರ್ಕಳದ ಮಂದಿಗೆ ಬೇಸರ ಮೂಡಿಸಿತ್ತು. ಹಾಗಾಗಿ ಮುಂದಿನ ಚುನಾವಣೆಯಲ್ಲಿ ಜಾತಿ ಬಲ ಇಲ್ಲದ ಅತೀಸಣ್ಣ ಸಮುದಾಯದ 'ಕ್ಷೌರಿಕ' ಜಾತಿಯ ಗೋಪಾಲ ಭಂಡಾರಿಯನ್ನು ಜನ ಗೆಲ್ಲಿಸಿಕೊಂಡಿದ್ದರು.
















2013ರ ಚುನಾವಣೆಯಲ್ಲೂ ಸುನಿಲ್ ಗೆಲ್ಲುವ ಅವಕಾಶವೇ ಇರಲಿಲ್ಲ, ಆದರೆ ಕೊನೇ ದಿನದ ರಾತ್ರಿ ಕತ್ತಲ ಕರಾಮತ್ತು ಬಿಜೆಪಿ-ಭಜರಂಗಿ ಗ್ಯಾಂಗ್ ನಡೆಸಿತ್ತು. ಬಿಲ್ಲವರ ಮುಂಬೈ ಸಂಘಟನೆಯಿಂದ ಹಣ ತರಿಸಿಕೊಂಡಿದ್ದ ಸುನಿಲ್ ಅದನ್ನು ದಲಿತರ ಕೇರಿ-ಕೇರಿಗಳಲ್ಲಿ ಹಂಚಿ ಗೆದ್ದನೆಂದು ಈಗಲೂ ಬಿಜೆಪಿಗಳೇ ವ್ಯಾಖ್ಯಾನಿಸುತ್ತಾರೆ. ಕೊನೆಗೂ ಸಣ್ಣ ಅಂತರದಲ್ಲಿ ಗೆದ್ದ ಈ ಭಜರಂಗಿ ಮೊದಲ ಬಾರಿ ಶಾಸಕನಾಗಿ ಮಾಡಿದ ಅವ್ಯವಹಾರ-ಅವಾಂತರ-ಅಧರ್ಮ ಈಗಲೂ ಮತ್ತಷ್ಟು ಬಿರುಸಿಂದ ನಡೆಸಿದ್ದಾನೆ. ಸುನಿಲ್‌ನ ಮತಾಂಧ ಕ್ಯಾಲಿಬರ್‌ಗೆ ಬಿಜೆಪಿ ಆತನಿಗೆ ಅಸೆಂಬ್ಲಿನಲ್ಲಿ ಬಿಜೆಪಿಯ ಮುಖ್ಯ ಸಚೇತಕಗಿರಿ ಇನಾಮಾಗಿ ನೀಡಿದೆ. ಮತ್ತೆ ಗೆದ್ದರೆ ಯುಡ್ಡಿ ಗೌರ್ನಮೆಂಟ್‌ಲ್ಲಿ ಮಂತ್ರಿಯಾಗೋದು ಗ್ಯಾರಂಟಿ ಎಂದೇ ಆತ ಹಗಲುಗನಸು ಕಾಣುತ್ತಿದ್ದಾನೆ.

ಬಿಜೆಪಿಯಲ್ಲಿ ಅರೆಬ್ರಾಹ್ಮಣ ಸುನಿಲ್‌ನ ಟಿಕೆಟ್ ಕಸಿವ ತಾಕತ್ತಿನವರಿಲ್ಲ. ಈತನ ತಂದೆ ಬ್ರಾಹ್ಮಣ. ತಾಯಿ ಬಿಲ್ಲವ. ಸುನಿಲ್ ಬುದ್ಧಿ ಪಕ್ಕಾ ಜನಿವಾರ ಸಂಕುಲದ್ದು. ಇದು ನಿಧಾನಕ್ಕೆ ಬಿಲ್ಲವರಿಗೆ ಅರ್ಥವಾಗುತ್ತಿದೆ. ಕ್ಷೇತ್ರದ ಬಂಟರು ಈತನ ಜಾತಿಯತೆಗೆ ಹೇಸಿಹೋಗಿದ್ದಾರೆ. ನಿರ್ಣಾಯಕರಾದ ಕೊಂಕಣಿಗರ ಕಣ್ಣು ಕೆಂಪಾಗಿದೆ. ಇದು ಸುನಿಲ್‌ಗೆ ಗಂಡಾಂತರಕಾರಿ. ಕಾಂಗ್ರೆಸ್‌ನ ಮಾಜಿ ಶಾಸಕ ಗೋಪಾಲ ಭಂಡಾರಿ ಜನರ ನಡುವೆ ಓಡಾಡಿಕೊಂಡಿದ್ದಾರೆ. ಸುನಿಲ್‌ಗಿಂತಲೂ ಭಂಡಾರಿ ಬೆಟರ್ ಎಂಬ ಭಾವನೆಯಿದೆ. ಆದರೆ ಆತನ ಕೈಲಿ ಕಾಸಿಲ್ಲ; ಗೆಲ್ಲೋದು ಕಷ್ಟ ಎಂಬುದು ಚಿಕ್ಕಬಳ್ಳಾಪುರದ ಸಂಸದನೂ ಕಾರ್ಕಳದ ಮೂಲ ನಿವಾಸಿಯೂ ಆದ ಮಾಜಿ ಸಿಎಂ ವೀರಪ್ಪ ಮೊಯ್ಲಿ ಬಳಗದ ವಾದ. ಇದರರ್ಥ, ಹಣವಿರುವ ತನ್ನ ಮಗ ಹರ್ಷ ಮೊಯ್ಲಿಯೇ ಸಮರ್ಥ ಅಭ್ಯರ್ಥಿ ಎಂಬುದು.

ಈ ಹರ್ಷನಿಗೆ ಕಾರ್ಕಳದ ಉದ್ದಗಲವೇ ಗೊತ್ತಿಲ್ಲ, ಜನರ ನಾಡಿಮಿಡಿತ ಗೊತ್ತಿಲ್ಲ. ಅಪ್ಪನ ನಾಮಬಲದಿಂದ ಹಾರಾಡುವ ಹರ್ಷ ಕಳೆದ ಲೋಕಸಭೆ ಚುನಾವಣೆ ವೇಳೆ ಮಂಗಳೂರಲ್ಲಿ ಕಾಂಗ್ರೆಸ್ ಹುರಿಯಾಳಾಗಲು ಕಟಿಪಿಟಿ ನಡೆಸಿದ್ದ. ಆದರೆ ಅಪ್ಪನ ಆಟ ನಡೆಯಲಿಲ್ಲ; ರಾಹುಲ್ ಗಾಂಧಿಗೆ ಹತ್ತಿರದಲ್ಲಿದ್ದರೂ ಟಿಕೆಟ್ ಮಾತ್ರ ಸಿಗಲಿಲ್ಲ. ಈಗ ಕಾರ್ಕಳದ ಎಮ್ಮೆಲ್ಲೆ ಮಾಡಲು ಹೊರಟಿದ್ದಾರೆ ಮೊಯ್ಲಿ. ನಾಲ್ಕು ದಶಕ ಕಾರ್ಕಳದಲ್ಲಿ ರಾಜಕಾರಣ ಮಾಡಿದ ಮೊಯ್ಲಿ ಅದೇ ತನ್ನ ಮಗನಿಗೆ ವರವೆಂದು ಭಾವಿಸಿದ್ದಾರೆ. ಆದರೆ ಗೋಪಾಲ ಭಂಡಾರಿಯೇ ಕಾಂಗ್ರೆಸ್ ಪಾಲಿಗೆ ಬಲಿಷ್ಠ ಅಭ್ಯರ್ಥಿ. ಆಸ್ಕರ್‌ಗೂ ಭಂಡಾರಿಯೇ ಅಚ್ಚುಮೆಚ್ಚು.

ಯುವ ಕಾಂಗ್ರೆಸ್‌ನ ಮುನಿಯಾಲು ಉದಯಶೆಟ್ಟಿ ಟಿಕೆಟ್‌ಗೆ ಪ್ರಯತ್ನ ನಡೆಸಿದ್ದಾರೆ. ಒಂದಿಷ್ಟು ಕ್ಷೇತ್ರದಲ್ಲಿ ಓಡಾಡಿ ಸಂಘಟನೆಯೂ ಮಾಡಿದ್ದಾರೆ. ಬಿಲ್ಲವರಷ್ಟೇ ಇರುವ ಬಂಟರ ಹುಡುಗ ಈತ. ಹಣವಂತ ಕಂಟ್ರಾಕ್ಟರ್. ಫಿಶ್‌ಮಿಲ್ ಉದ್ಯಮಿ. ತಾನು ಭಂಡಾರಿಗಿಂತಲೂ ಗಟ್ಟಿಗ; ಜಾತಿ ಸಮೀಕರಣದಲ್ಲಿ ಬಿಲ್ಲವರ ಸುನಿಲ್‌ಕುಮಾರ್‌ನ ಮಟ್ಟಹಾಕಬಲ್ಲ ಧೀರ ತಾನೆಂಬುದು ಉದಯಶೆಟ್ಟಿ ವಾದ. ಮೊಯ್ಲಿ ಒಂದು ಕಡೆಯಿಂದ ಉದಯ ಶೆಟ್ಟಿಗೆ ಕುಮ್ಮಕ್ಕು ಕೊಡುತ್ತ ಮತ್ತೊಂದೆಡೆಯಿಂದ ಮಗನ ಎಲೆಕ್ಷನ್‌ಗೆ ತಯಾರು ಮಾಡುತ್ತಿದ್ದಾರೆ. ಕೊನೆ ಕ್ಷಣದಲ್ಲಿ ಬಂಟರ ಉದಯನ್‌ನನ್ನು ತನ್ನ ಪರ ಒಲಿಸಿಕೊಳ್ಳುವ ಯೋಚನೆ ಮೊಯ್ಲಿಯದು. ಟಿಕೆಟ್ ಹಂಚಿಕೆಯಲ್ಲಿ ಎಚ್ಚರ ವಹಿಸಿದರೆ ಕಾಂಗ್ರೆಸ್‌ಗೆ ಕಾರ್ಕಳದಲ್ಲಿ ಗೆಲುವು ಕಷ್ಟವೇನಲ್ಲ. ಭಜರಂಗಿ ಸುನಿಲ್ ಸಹವಾಸ ಕಾರ್ಕಳದ ಜನರಿಗೆ ಸಾಕಾಗಿದೆ!

ಬಿಲ್ಲವ ಬಂಟ ಮೇಲಾಟ

ಕಾಪು ಕ್ಷೇತ್ರದಲ್ಲಿ ಕಳೆದ ಬಾರಿ ಕಾಂಗ್ರೆಸ್ ಗೆಲ್ಲಲು ಮಾಜಿ ಮಂತ್ರಿ ವಸಂತ ಸಾಲಿಯಾನ್‌ಗೆ ಟಿಕೆಟ್ ಕೊಡದ ವಿನಯಕುಮಾರ್ ಸೊರಕೆಗೆ ಅಖಾಡಕ್ಕೆ ಇಳಿಸಿದ್ದೇ ಕಾರಣ. ಕೊನೇಕ್ಷಣದಲ್ಲಿ ಅಭ್ಯರ್ಥಿಯಾದ ಸೊರಕೆ ಕ್ಷೇತ್ರದ ಬಹುಸಂಖ್ಯಾತ ಸ್ವ-ಜಾತಿ ಬಿಲ್ಲವ, ಕ್ರಿಶ್ಚಿಯನ್-ಮುಸ್ಲಿಮ್ ಮತ ಬಾಚಿದ್ದರು. ಕೊಸರಾಡಿ ಸಣ್ಣ ಅಂತರದಲ್ಲಿ ದಡ ಸೇರಿದ್ದರು. ಈಡಿಗರ ಕೋಟಾದಲ್ಲಿ ಕ್ಯಾಬಿನೆಟ್ ದರ್ಜೆ ಮಂತ್ರಿಯೂ ಆದರು. ಸಚಿವಗಿರಿ ಸ್ವ-ಜಾತಿ ಬಂಧು ಕಾಗೋಡು ತಿಮ್ಮಪ್ಪರಿಗೆ ಬಿಟ್ಟುಕೊಡಬೇಕಾಗಿಯೂ ಬಂತು, ಪಾಪ.

ಸೊರಕೆ ಮಂತ್ರಿಯಾಗಿ ಉಡುಪಿ ಜಿಲ್ಲೆಯಲ್ಲಿ ಛಾಪು ಮೂಡಿಸಲಾಗದಿದ್ದರೂ ಸ್ವ-ಕ್ಷೇತ್ರ ಕಾಪು ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಕೋಟಿ-ಕೋಟಿ ಅನುದಾನ ತಂದಿದ್ದಾರೆ. ಹಳ್ಳಿಗಳತ್ತ ಗಮನ ಹರಿಸಿದ್ದಾರೆ. ಜನರ ಸಮಸ್ಯೆಗೆ ಸ್ಪಂದಿಸಿದ್ದಾರೆ. ಹೀಗಾಗಿ ಕ್ಷೇತ್ರದಲ್ಲಿ ಸೊರಕೆ ಬೇರು ಆಳಕ್ಕೆ ಇಳಿದಿದೆ. ಇಷ್ಟಾದರೂ ಒಂಚೂರು ಜಾತಿವಾದಿ ಕಪ್ಪು ಚುಕ್ಕೆಯೂ ಆತನಿಗೆ ತಗಲಾಕಿಕೊಂಡಿದೆ.. ಮತ್ತೆ ಅಖಾಡಕ್ಕೆ ಇಳಿಯೋದು ಗ್ಯಾರಂಟಿ. ಮಣಿಸಲು ತಾವೇ ಸಮರ್ಥನೆಂದು ಬಿಜೆಪಿ ... ಬಿಂಬಿಸಿಕೊಳ್ಳುತ್ತಿದ್ದಾನೆ. ಗುರ್ಮೆ ಸುರೇಶ್ ಶೆಟ್ಟಿ ... ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂ... ಈ ಗಣಿ-ಹೊಟೇಲು ಉದ್ಯಮಿ ಕಾಪುನಲ್ಲಿ ... ಮಾಡಿದ್ದ. ಆದರೆ ಸೊರಕೆಗೆ ಕಾಂಗ್ರೆಸ್ ಟಿಕೆಟ್ ... ಬಿಜೆಪಿಗೆ ನೆಗೆದುಬಿಟ್ಟ.

ಕಬ್ಬಿಣದ ಅದಿರು ದಂಧೆಯಲ್ಲಿ ಗುರ್ಮೆ ಶೆಟ್ಟಿ ಕೂಡಿಟ್ಟ ಕೊಪ್ಪರಿಗೆ ಗಟ್ಟಲೆ ಕಾಸಿನ ... ಕಲ್ಲಡ್ಕ ಭಟ್ಟನಿಗೆ ಗೊತ್ತು. ಹೀಗಾಗಿ ಆತ 'ನೀನೇ ... ಅಭ್ಯರ್ಥಿ....' ಎಂದು ಹುರಿದುಂಬಿಸಿ ಕಳಿಸಿದ್ದಾನೆ. ಭರ್ಜರಿಯಾಗೇ ಎಲೆಕ್ಷನ್ ತಯಾರಿ ನಡೆಸಿದ್ದಾನೆ ... ದೇವರ ಹುಂಡಿಗೆ ಕಾಣಿಕೆ ಹಾಕಿ ಒಲಿಸಿಕೊ... ಈತ ಕ್ಷೇತ್ರದ ಬಹುಸಂಖ್ಯಾತ ಬಂಟರ ಜಾತಿ... ಉಡುಪಿ ಜಿಲ್ಲೆಯ ಬಂಟ v/s ಬಿಲ್ಲವ ಹೋ... ದೊಡ್ಡ ಪರಂಪರೆಯೇ ಇದೆ. ಅಕಸ್ಮಾತ್ ಬಿಜೆಪಿಯಿಂದ ಸ್ಪರ್ಧಿಸಿದರೆ ಸೊರಕೆ ಸೆಣಸಾಟ ಹೆಚ್ಚು... ಬಂಟ-ಬಿಲ್ಲವ ಕದನ ಕುತೂಹಲಕ್ಕೆ ಕಾಪು ಅಣಿಯಾಗುತ್ತಿದೆ.

ಆದರೆ ಎರಡು ಬಾರಿ ಶಾಸಕನಾದ ಮೀ... ಸಂಕುಲ (ಮೊಗವೀರ)ದ ಲಾಲಾಜಿ ಮೆಂಡನ್ ಆಸೆ ... ಕಳೆದ ಬಾರಿ ಸೋತ ನಂತರ ಬಿಜೆಪಿಯಲ್ಲೇ ... ಮೂಲೆಗುಂಪಾಗಿದ್ದಾನೆ. ಕಸುವ್ನೂ ಮೊದಲಿ... ಶಾಸಕನಾಗಿ ಹೆಸರು ಕೆಡಿಸಿಕೊಂಡಿದ್ದ ಲಾಲಾಜಿ ... ದೊರೆಗಳ ಪಾದಪೂಜೆಯಲ್ಲೇ ಧನ್ಯತೆ ಕಂಡಿದ್ದ. ಗ... ಹೋಲಿಸಿದರೆ ಮೆಂಡನ್ ಹಣಕಾಸಿನಲ್ಲಿ ದುರ್ಬಲ. ಆತ ಡಾನ್ ಸಾಹೇಬರಿಗೂ ಬೇಡಾಗಿದ್ದಾನೆ. ಪೇಜಾವರ ಸ್ವಾಮಿಯ ನಂಬಿಗಸ್ಥ ಬಂಟ ಈ ... ಮೆಂಡನ್. ಪೇಜಾವರರು ಏನಾದರೂ ಮಾಡಿ ... ಭಟ್ಟರನ್ನು ತನ್ನತ್ತ ಒಲಿಸುತ್ತಾರೆಂದು ನಂಬಿದ್ದಾನೆ ಮೆ... ಆದರಿದು ಕಷ್ಟ-ಕಷ್ಟ!

ಪ್ರಮೋದ್‌ಗೆ ಎದುರಾಳಿ ಯಾ...

ಹಿಂದಿನ ಚುನಾವಣೆಯಲ್ಲಿ ದೊಡ್ಡ ಅಂತರದ... ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಈಗ ... ಉಸ್ತುವಾರಿ ಮಂತ್ರಿ. ಮೀನುಗಾರ ಸಮುದಾ... ಪ್ರಮೋದ್ ತಾಯಿ ಮನೋರಮಾ ಮಧ್ವರಾಜ್ ... ಸಂಸದೆಯಾಗಿದ್ದಾರೆ. ಮನಮೋಹನ್ ಸಿಂಗ್ ಸ... ಪರ ವಿಶ್ವಾಸ ಮತ ಯಾಚನೆ ಸಂದರ್ಭದಲ್ಲಿ ... ಹಾಕಿದ್ದಕ್ಕೆ ಕೊಟ್ಟ ಮಾತಿನಂತೆ ಆಸ್ಕರ್ ಆಕೆಯ ... ಮಂತ್ರಿ ಮಾಡಿಸಿದ್ದಾರೆ ಎಂಬ ತರ್ಕವೂ ಇದೆ. ... ಇರಲಿ, ಪ್ರಮೋದ್ ಉತ್ಸಾಹದಿಂದ ಕೆಲಸ ಮಾಡು... ಬಿಜೆಪಿ ಕೊಳ್ಳಿ ದೆವ್ವಗಳ ಮಟ್ಟ ಹಾಕುವ ಇಚ್ಛಾ... ಕೊರತೆಯ ಪ್ರಮೋದ್ ಅಭಿವೃದ್ಧಿಗೆ ತುಡಿಯುತ್ತಾರೆ ... ಖರೆ.

ಕಾಂಗ್ರೆಸ್ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದು... ಸ್ಪಂದಿಸಿದರೆ ಮತ್ತೆ ಪ್ರಮೋದ್ ಗೆಲ್ಲಲು ಅಡ್ಡಿಗಾ... ಬಿಜೆಪಿ ಟಿಕೆಟ್‌ಗೆ ಮಂತ್ರಿ ಪ್ರಮೋದ್‌ರ ಕ್ಲಾಸ್... ರಘುಪತಿ ಭಟ್ಟ ಶತಾಯಗತಾಯ ಹೋರಾಟ ನಡೆ... ಸೇಂಟ್‌ಮೇರೀಸ್ ದ್ವೀಪದಲ್ಲಿ ರೇವ್‌ಪಾರ್ಟಿ, ಅವ... ಎಲ್ಲೆಲ್ಲೋ ರಾಸಲೀಲೆ, ಹೆಂಡತಿ ಸಾವಿಗೆ ಹ... ಮುಂತಾದ ಕೊಳಕು ಕಾಂಡದಿಂದ ಹೆಸರು ಕೆಡಿಸಿಕೊ... ರಘುಪತಿ ಭಟ್ಟನಿಗೆ ಬಿಜೆಪಿ ಟಿಕೆಟ್ ಅಂದು ಕೊ... ಕಲ್ಲಡ್ಕನಿಗೆ ಮನಸ್ಸಿರಲಿಲ್ಲ, ಅದೇ ಹೊತ್ತಿಗೆ ರ... ಜನಿವಾರ ಹಾಕಿಕೊಂಡೇ ಉರುಳಾಟದಲ್ಲಿ ತೊಡಗಿ... ಸಿಡಿ ಆಸ್ಫೋಟಿಸಿತ್ತು. ಭಟ್ಟನಿಗೆ ಟಿಕೆಟ್ ಸಿಗಲಿಲ್ಲ...

ಶಾರದಾ ಇಂಟರ್‌ನ್ಯಾಷನಲ್ ಹೊಟೇಲಿನ... ಸುಧಾಕರ ಶೆಟ್ಟಿ ಬೇಡ ಬೇಡ ಅಂದರೂ ಬಲವಂ... ಬಿಜೆಪಿ ಸ್ಪರ್ಧೆಗೆ ಇಳಿಸಿತ್ತು. ಗೆಲ್ಲುವ ಛಾನ್ಸ್ ಇದಾ... ಶೂದ್ರನಿಗೆ ಬಿಜೆಪಿ ಬ್ರಾಹ್ಮಣ ಬಾಸ್‌ಗಳು ವಂಚಿ... ಸೋಲೋದು ಗ್ಯಾರಂಟಿ ಅಂದಾಗ ಅವಕಾಶ ಕೊ... ಈಗಲೂ ರಘುಪತಿ ಎಂದರೆ ಕಲ್ಲಡ್ಕ ಡಾನ್‌ಗೆ ತಾ... ತಿರಸ್ಕಾರವೇ. ಪೇಜಾವರ ಸ್ವಾಮಿಗೆ ಈ ಸ್ವ-ಜಾತಿ ... ಬ್ರಾಹ್ಮಣನೆಂದರೆ ಮೋಹ ಜಾಸ್ತಿ. ಈಗ ಜಿಲ್ಲಾ ಬಿಜೆ... ಭಟ್ಟನ ಮತ್ತೊಂದು ರಾಸಲೀಲೆ ಸಿಡಿ ಬರಲಿದೆ ... ಚರ್ಚೆ ನಡೆದಿದೆ. ಕಂಟ್ರಿ ಬಾರ್ ಅಂಡ್ ಹೋ... ಎಂಬ ತಾರಾ ಹೊಟೇಲ್ ಪಾಲುದಾರಿಕೆಯಲ್ಲಿ ... ಭಟ್ಟನಿಗೆ ಅದೇ ಮುಳುವಾಗಿದೆ. ಹೊಟೇಲಲ್ಲಿ... ದಿಂಡುರುಳು ಸೇವೆ ಮಾಡಿದ್ದು ಸಿಡಿಯಾಗಿದೆಯ...

ಉಡುಪಿಯ ಕುಪ್ರಸಿದ್ಧ ಬೆತ್ತಲೆ ಛಾನ್ಗಡಿಯ ರ... ಯಶ್‌ಪಾಲ್ ಸುವರ್ಣನಿಗೆ ಅಭ್ಯರ್ಥಿ ಮಾಡಿದರೆ ಹ... ಯೋಚನೆ ಕಲ್ಲಡ್ಕ ಕಿಂಗ್ ಮಾಡುತ್ತಿದ್ದಾನೆ. ಪಕ್ಕದ... ಕ್ಷೇತ್ರದಲ್ಲಿ ಮೀನುಗಾರ ಜಾತಿಯ ಲಾಲಾಜಿ ಮೆಂ... ಟಿಕೆಟ್ ತಪ್ಪಿಸಿ ಅದೇ ಸಮುದಾಯದ (ಮೊಗ... ಯಶ್‌ಪಾಲ್ ಸುವರ್ಣನಿಗೆ ಚಾನ್ಸ್ ಕೊಟ್ಟರೆ ಮೊಗ...

ನಿಗೆ ಆಪ್ತವೆ ಇರದೆಂಬುದು ಕಲ್ಲಡ್ಕನ ಲೆಕ್ಕಾಚಾರ. ಕಾಲದಲ್ಲಿ ಬಿಸ್ಕ್ಯಾಂಡಿ ಸೈಕಲ್‌ನಲ್ಲಿ ಮಾರುತ್ತಿದ್ದ ಪಾಲ್‌ನ ದೆಸೆ ಬ್ಯಾರಿಗಳಿಬ್ಬರ ಚಿತ್ತಲೆ ಮಾಡಿದ ಖುಲಾಯಿಸಿದೆ. ಬಿಜೆಪಿ-ಸಂಘ ಪರಿವಾರದಲ್ಲಿ ಸ್ಥಾನಮಾನ ಹೆಚ್ಚಿದೆ. ಲ್ಯಾಂಡ್‌ಲಿಂಕ್ಸ್ ದಂಧೆಯಿಂದ ಪಾಲ್ ಭರ್ಜರಿ ಹಣವೂ ಮಾಡಿದ್ದಾನೆ. ವಿ.ಎಸ್. ರ್ಯರ ಮಂತ್ರಿಗಿರಿ ಪರ್ವ ಯಶ್‌ಪಾಲ್‌ನ ಸುಗ್ಗಿ ವಾಗಿತ್ತು.

ಯಶ್‌ಪಾಲ್‌ನ ಕಂಡರೆ ರಘುಪತಿಗೆ ಆಗದು. ಏನೇ ಆತನಿಗೆ ಟಿಕೆಟ್ ಸಿಗಲು ಬಿಡಬಾರದೆಂಬ ಹಠಕ್ಕೆ ಪತಿ ಭಟ್ಟ ಬಿದ್ದಿದ್ದಾನೆ. ಗುರ್ಮೆ ಸುರೇಶ್ ಶೆಟ್ಟಿ ಯಶ್‌ಪಾಲ್ ಸುವರ್ಣ ಒಂದಾಗಿದ್ದಾರೆ. ಹಾಗಾಗಿ ಪತಿ ಭಟ್ಟ ತಂತ್ರ ಬದಲಿಸಿ ಜಯಪ್ರಕಾಶ್ ಹೆಗ್ಡೆ ನ ಮುನಿಸು ಮರೆತಿದ್ದಾನೆ. ಅಕಸ್ಮಾತ್ ತನಗೆ ಟಿಕೆಟ್ ತಾದರೆ ಅದು ಜಯಪ್ರಕಾಶ್ ಹೆಗ್ಡೆಗಾದರೂ ದಕ್ಕಲಿ. ಗಂತ ಯಶ್‌ಪಾಲ್ ಸುವರ್ಣ ಎಮ್ಮೆಲ್ಲೆ ಬಾರದೆಂದು ರಘುಪತಿ ಭಟ್ಟ ತನ್ನ ಆಪ್ತರ ಬಳಿ ತ್ತಿದ್ದಾನಂತೆ. ಈ ಮೇಲಾಟದಲ್ಲಿ ತನಗೆ ಟಿಕೆಟ್ ನೆ ಒಲಿದು ಬರಲಿದೆ ಎಂಬ ಭಾವನೆ ಸಂಸದೆ ನ ಶಿಷ್ಯ- ಜಿಲ್ಲಾ ಬಿಜೆಪಿ ಅಧ್ಯಕ್ಷ ಉದಯ್‌ಕುಮಾರ್ ಯದು.

ಕಾಂಗ್ರೆಸ್‌ನತ್ತ ಹಾಲಾಡಿ!!


ಸತತ ನಾಲ್ಕು ಬಾರಿ ಗೆದ್ದಿರುವ ಹಾಲಾಡಿ ಶ್ರೀನಿವಾಸ್ ಈಗ ಒಂಥರಾ ಎಡೆಬಿಡಂಗಿ ಅಂತಾಗಿದ್ದಾರೆ. ಮೂರು ಬಿಜೆಪಿ ಚಿಹ್ನೆಯಲ್ಲಿ ಗೆದ್ದಿದ್ದ ಹಾಲಾಡಿ ಕಳೆದ ಬಾರಿ ಡಾನ್‌ಗೇ ಸೆಡ್ಡು ಹೊಡೆದು ಪಕ್ಷೇತರನಾಗಿ ಗೆದ್ದು ದ್ದರು. ಈಗ ತಾನು ಬಿಜೆಪಿಗನೋ, ಪಕ್ಷೇತರನೋ, ಗ್ರೆಸಿಗನೋ ಎಂಬ ಕನ್‌ಫ್ಯೂಸ್‌ಗೆ ಹಾಲಾಡಿ ರುವುದೇ ಕುಂದಾಪುರದ ದೊಡ್ಡ ತಮಾಷೆ ಂತಾಗಿದೆ. ಕಲ್ಲಡ್ಕ ಭಟ್ಟ ಹಾಲಾಡಿ ಹೆಸರೆತ್ತಿದರೆ ಗು ಮುರಿಯುತ್ತಾನೆ. ಹಾಲಾಡಿಯೋ ಆತನಿಗೆ ಡೊಗ್ಗು ಮು ಹಾಕದ ಸ್ವಾಭಿಮಾನಿ. ಹಾಗಂತ ಬಿಜೆಪಿ ಮೋಹ ಗಿನ್ನೂ ಬಿಟ್ಟಿಲ್ಲ. ಆದರೆ ಸ್ಥಳೀಯ ಬಿಜೆಪಿಯಲ್ಲಿ ಾಡಿ ವಿರೋಧಿಸುವ ದೊಡ್ಡ ತಂಡವೇ ತಯಾರಾಗಿದೆ.

ಹಾಲಾಡಿ ಹೊರಗಿದ್ದುಕೊಂಡೇ ಬಿಜೆಪಿಯ ಒಳ ಾರದಲ್ಲಿ ಕೈಯ್ಯಾಡಿಸೋದು ನಿಷ್ಠಾವಂತ ಚಡ್ಡಿಗಳಿಗೆ ವುದಿಲ್ಲ. ಸಂಸದೆ ಸೋಭಕ್ಕನ ಆಪ್ತ ವಲಯದಲ್ಲಿರುವ ಾಡಿ ಬಿಜೆಪಿಯಲ್ಲಿ ಕರಾಮತ್ತು ಮಾಡುತ್ತಿದ್ದಾರೆ. ಈ ದಲ್ಲಿ ಹಾಲಾಡಿಗೆ ರಾಜಕಾರಣವೇ ಸಾಕು ಅನ್ನಿಸುತ್ತದೆ ಮ್ಮೆ. ಆತ ತಾನಿನ್ನು ಎಲೆಕ್ಷನ್ ನಿಲ್ಲೋದಿಲ್ಲ ನೂ ಹೇಳಿದ್ದಿದೆ. ಬಿಟ್ಟೆನೆಂದರೂ ಬಿಡದ ಶಾಸಕತ್ವದ ಹದಲ್ಲಿ ಹೈರಾಣಾಗಿದ್ದಾರೆ ಹಾಲಾಡಿ. ಬಿಜೆಪಿಯಲ್ಲಿ ಾಡಿ ಅತಂತ್ರನಾಗಿರೋದು ಎಐಸಿಸಿ ಪ್ರಧಾನ



ಸುನಿಲ್ ಕುಮಾರ್


ಗುರ್ಮೆ ಸುರೇಶ್ ಶೆಟ್ಟಿ




ರಘುಪತಿ ಭಟ್ಟ


ಹಾಲಾಡಿ ಶ್ರೀನಿವಾಸ್ ಶೆಟ್ಟಿ



ಕಾರ್ಯದರ್ಶಿ ಆಸ್ಕರ್ ಫರ್ನಾಂಡಿಸ್, ಮಂತ್ರಿ ಡಿಕೆಶಿ ಅರ್ಥ ಮಾಡಿಕೊಂಡು ಗಾಳ ಎಳೆದಿದ್ದಾರೆ. ಒಂದು ಹಂತದಲ್ಲಿ ಈ ಗಾಳ ಹಾಲಾಡಿ ಗಂಟಲಲ್ಲಿ ಸಿಕ್ಕಿಹಾಕಿಕೊಂಡಿದ್ದೂ ಇದೆ. ಕಾಂಗ್ರೆಸ್‌ನತ್ತ ಹೋಗುವ ಯೋಚನೆ ಆತ ಮಾಡುತ್ತಿದ್ದಾರೆಂದು ಬಿಜೆಪಿಗರೇ ಗುಸುಗುಸು ಗುಡುತ್ತಿದ್ದಾರೆ.

ಬಿಜೆಪಿ ಬೇಡವಾಗಿದೆ ಹಾಲಾಡಿಗೆ; ಆಸ್ಕರ್‌ಗೆ ಹಾಲಾಡಿ ಬೇಕಾಗಿದ್ದಾರೆ. ತನ್ನನ್ನು ತೆಗಳುತ್ತ ಕಾಂಗ್ರೆಸ್ ಬಿಟ್ಹೋಗಿರುವ ಬಂಟರ ಸಮುದಾಯದ ಜಯಪ್ರಕಾಶ್ ಹೆಗ್ಡೆಗೆ ಹಣಿಯಲು ಆಸ್ಕರ್ ಹಾಲಾಡಿ ಅಸ್ತ್ರಪ್ರಯೋಗಕ್ಕೆ ರೆಡಿಯಾಗಿದ್ದಾರೆ. ಡಿಕೆಶಿ ಒಂದೆರಡು ಬಾರಿ ಹಾಲಾಡಿ ಜತೆ ಮಾತುಕತೆ ನಡೆಸಿದ್ದಾರೆ. ಆಸ್ಕರ್ ಶಿಷ್ಯ ಎಮ್ಮೆಲ್ಸಿ ಪ್ರತಾಪ್‌ಚಂದ್ರ ಶೆಟ್ಟಿ ಗುರುವಿನ ನಿರ್ದೇಶನದಂತೆ ಹಾಲಾಡಿ ಜತೆಗಿನ ಪರಂಪರಾಗತ ಸೇಡು ಮರೆತು ಮಾತಾಡತೊಡಗಿದ್ದಾರೆ. ಇದೆಲ್ಲ ಹಾಲಾಡಿ ಕಾಂಗ್ರೆಸ್ ಸೇರಲು ಸಿದ್ಧತೆ ನಡೆಸಿರುವ ಮುನ್ಸೂಚನೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಜೆಪಿ ಜಂಟಾಟ!


ರಾಜಕೀಯದಲ್ಲಿ ಲಾಗಾಯ್ತಿನಿಂದ ಪಾಲಿಸಿಕೊಂಡು ಬಂದ ತತ್ವ-ಸಿದ್ಧಾಂತಕ್ಕೆಲ್ಲ ಎಳ್ಳುನೀರು ಬಿಟ್ಟು ಅಧಿಕಾರದಾಸೆಗೆ ಬಿದ್ದು ಬಿಜೆಪಿ ಪಾಲಾದ ಕೂರ್ಗಿ ಜಯಪ್ರಕಾಶ್ ಹೆಗ್ಡೆ ಬೈಂದೂರು ಕ್ಷೇತ್ರದ ಟಿಕೆಟ್‌ಗೆ ತಿಪ್ಪರಲಾಗ ಹಾಕುತ್ತಿದ್ದಾರೆ! ಟಿಕೆಟ್ ಸಿಗುವುದು ಒತ್ತಟ್ಟಿಗಿರಲಿ, ಸ್ಥಳೀಯ ಸಂಘಪರಿವಾರದಲ್ಲಿ ಆತನಿಗೆ ತಕ್ಕ ಗೌರವ-ಮಾನ-ಮರ್ಯಾದೆಯೂ ಸಿಗುತ್ತಿಲ್ಲ. ಬೈಂದೂರಿನ ಬಿಜೆಪಿ ಆತನನ್ನು ಇನ್ನೂ ಸ್ವೀಕರಿಸಿಯೇ ಇಲ್ಲ. ದೊಡ್ಡದೊಂದು ತಂಡ ಜೆಪಿಗೆ ವಿರೋಧ ಒಡ್ಡುತ್ತಿದೆ. ಇದೆಲ್ಲ ಧಿಕ್ಕರಿಸಿ ತನ್ನದೇ ಪಡೆ ಕಟ್ಟಿಕೊಳ್ಳುವ ಧೈರ್ಯ ಜೆಪಿಗೆ ಇನ್ನೂ ಬಂದಿಲ್ಲ. ಬಿಜೆಪಿ ಫಂಕ್ಷನ್ ಬೈಂದೂರಲ್ಲಿ ನಡೆದರೆ ಜೆಪಿಗೆ ಟಿಪಿ, ಝಡ್‌ಪಿ, ಗ್ರಾಪಂ ಸದಸ್ಯರ ನಂತರ ಮೂಲೆಯಲ್ಲಿ ಒಂದು ಕುರ್ಚಿ ಹಾಕಿ ಕೂಡಿಸುತ್ತಿದ್ದಾರೆ ಚಡ್ಡಿಗಳು.


ಜೆಪಿಯ ಸಂಪರ್ಕ ಇರುವುದು ಉಡುಪಿ ಮತ್ತು ಕುಂದಾಪುರ ಕ್ಷೇತ್ರದಲ್ಲಿ. ಬೈಂದೂರಲ್ಲಿ ಆತನ ಪ್ರಭಾವಳಿಯಿಲ್ಲ. ಸ್ಥಳೀಯ ಸ್ವ-ಜಾತಿ ಬಂಟರಿಗೂ ಜೆಪಿ ಬಗ್ಗೆ ಅಂಥ ಒಲವೇನಿಲ್ಲ. ಅಕಸ್ಮಾತ್ ಬಿಜೆಪಿ ಟಿಕೆಟ್ ಸಿಕ್ಕರೂ ಆತ ಇಲ್ಲಿ ಗೆಲ್ಲೋದು ಅನುಮಾನ. ಹೀಗಿರುವಾಗ ಜೆಪಿ ಬೈಂದೂರು ಕ್ಷೇತ್ರದಿಂದ ಚುನಾವಣೆ ನಿಲ್ಲುವ ಉಮೇದಿಗೆ ಬಿದ್ದಿದ್ದಾದರೂ ಹೇಗೆಂಬ ಜಿಜ್ಞಾಸೆ ರಾಜಕೀಯ ವಲಯದಲ್ಲಿ ನಡೆಯುತ್ತಿದೆ. ಕಳೆದ ಬಾರಿ ಸೋತ ಬಿ.ಎಂ. ಸುಕುಮಾರ ಶೆಟ್ಟಿ ಸುಲಭಕ್ಕೆ ಸೀಟು ಬಿಟ್ಟುಕೊಡಲು ತಯಾರಿಲ್ಲ.

ರಾಜ್ಯ ಬಿಜೆಪಿ ಅಧ್ಯಕ್ಷ ಯಡ್ಡಿ ಮಹಾತ್ಮನ ಅತ್ಯಾಪ್ತ ಚೇಲ ಈ ಸುಕುಮಾರ ಶೆಟ್ಟಿ. ಬೈಂದೂರು ಯಡ್ಡಿಯ ಎಂಪಿ ಕ್ಷೇತ್ರವಾದ ಶಿವಮೊಗ್ಗಕ್ಕೆ ಸೇರಿರುವುದರಿಂದ ಸುಕುಮಾರ ಶೆಟ್ಟಿ ಸೋಭಕ್ಕನಿಗೂ ಹತ್ತಿರತ್ತಿರ. ಯಡ್ಡಿ ಮಗ ರಾಘುಗೂ ಬೇಕಾದವ. ಬಿಜೆಪಿಯೊಳಗಿನ ಟಿಕೆಟ್ ತಂತ್ರಗಾರಿಕೆ ಕಂಡರೆ ಜೆಪಿ ನಂಬಿರುವ ಆರ್. ಅಶೋಕ್ ಹತ್ತಿರವೂ ಏನೂ ಮಾಡಲಾಗದು ಅನ್ನಿಸುತ್ತದೆ. ಈಗ ಜಿಲ್ಲೆಯಾದ್ಯಂತ ಜೆಪಿ ದುಡುಕಿದರೆಂದು ಹೇಳೋರೇ ಹೆಚ್ಚು; ಜೆಪಿ ಬಿಜೆಪಿ ಸೇರಿ ರಾಜಕೀಯ ಆತ್ಮಹತ್ಯೆ ಮಾಡಿಕೊಂಡರೆಂಬ ವಿಶ್ಲೇಷಣೆಗಳೂ ನಡೆಯುತ್ತಿದೆ.

ಕಾಂಗ್ರೆಸ್‌ನಿಂದ ನಾಲ್ಕು ಸಲ ಗೆದ್ದಿರುವ ಗೋಪಾಲ ಪೂಜಾರಿಗೆ ಬಿಲ್ಲವರ ಕೋಟಾದಲ್ಲಿ ಮಂತ್ರಿ ಭಾಗ್ಯ ಸಿಗಲೇ ಇಲ್ಲ. ಬೇಜಾರು ಮಾಡಿಕೊಂಡಿದ್ದ ಪೂಜಾರಿಗೆ ಆಸ್ಕರ್-ಸಿದ್ದು ಕೆಎಸ್‌ಆರ್‌ಟಿಸಿ ನಿಗಮದ ಅಧ್ಯಕ್ಷ ಮಾಡಿದ್ದಾರೆ. ನಕ್ರಾಗಳಿಂದ ಬಣ್ಣಗೆಟ್ಟಿದ್ದ ಪೂಜಾರಿ ಒಂಚೂರು ತಿದ್ದಿಕೊಂಡಂತೆ ಕಾಣಿಸುತ್ತಿದ್ದಾರೆ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ಕೋಟಿ-ಕೋಟಿ ಚರ-ಸ್ಥಿರ ಆಸ್ತಿ ಕಾಯಲು ಗುತ್ತಿಗೆದಾರನೊಬ್ಬನಿಗೆ ಮ್ಯಾನೇಜಿಂಗ್ ಟ್ರಸ್ಟಿಯಾಗಿ ನೇಮಿಸಿ ಕಾಸು ಮಾಡಿದ್ದಾರೆಂಬ ಅಪವಾದ ಪೂಜಾರಿ ಮೇಲಿದೆ. ಕ್ಷೇತ್ರದಲ್ಲಿ ಒಂದಿಷ್ಟು ಜನಪರ ಕೆಲಸ ಮಾಡಿರುವ ಪೂಜಾರಿ ಕಳ್ಳ ಕಂಟ್ರಾಕ್ಟರ್ಸ್ ಸಹವಾಸ ಬಿಟ್ಟರೆ ಮತ್ತಷ್ಟು ಜನರಿಗೆ ಹತ್ತಿರವಾಗುತ್ತಾರೆ. ಬಿಜೆಪಿ ಟಿಕೆಟ್ ಶೆಟ್ರೇ ತರಲಿ ಅಥವಾ ಹೆಗ್ಡೆಯೇ ತರಲಿ- ಕ್ಷೇತ್ರದಲ್ಲಿ ಆಳದಲ್ಲಿ ಬೇರು-ಬಿಳಲು ಇಳಿಸಿರುವ ಗೋಪಾಲ ಪೂಜಾರಿಗೆ ಮಣಿಸೋದು ಅಷ್ಟು ಸುಲಭವಲ್ಲ!!

■ನಹುಷ





ಕಲ್ಲಡ್ಕ ಭಟ್ಟ


ಆಸ್ಕರ್ ಫರ್ನಾಂಡಿಸ್

ಮೊಳಕಾಲ್ಮೂರು: ಕಾಂಗ್ರೆಸ್ ಟಿಕೆಟ್ ಯಾರ 'ಕೈ'ಗೆ?

ಬಿರು ಬಿಸಿಲಿನ ನಡುವೆಯೂ ಮೊಳಕಾಲ್ಮೂರಿನಲ್ಲಿ 18ರ ಅಸೆಂಬ್ಲಿ ಮೊಳಕೆಗಳು ಅಲ್ಲಲ್ಲಿ ಕಾಣಿಸಿಕೊಳ್ಳಲು ವಾಗಿವೆ. ಹಾಲಿ ಬಿಜೆಪಿ ಶಾಸಕ ನೇರಲಗುಂಟೆ ಸ್ವಾಮಿಗೆ ಮತ್ತೆ ಗೆಲ್ಲುವ ವಿಶ್ವಾಸವಿಲ್ಲ. ಪಕ್ಕದ ಬಳ್ಳಾರಿ ಾಂತರ ಕ್ಷೇತ್ರಕ್ಕೆ ಶಾಸಕನಾಗಿ ವಲಾಯಿಸಿರೋ ಎನ್.ವೈ. ಾಲಕೃಷ್ಣಗೆ ತವರುಮನೆ ಬಾ ಎಂದು ರಾತ್ರೋರಾತ್ರಿ ಬಿದ್ದಂತಾಗುತ್ತಿದೆಯಂತೆ. ಇನ್ನು ಜೆಡಿಎಸ್‌ನ ಗೌಡ ನಾನೂ ಒಂದು ಕೈ ನೋಡೇ ಬಿಡ್ತೀನಿ ಎಗರೆಗರಿ ಬೀಳುತ್ತಿದ್ದಾನಂತೆ. ಇದರ ನಡುವೆ ಹಳೇ ುಗಳ ಸೆರಗನ್ನು ಸರಿಸಿ ಹೊಸಬರು ಟಿಕೆಟ್ ಸ್ಪಿನಲ್ಲಿ ಓಡಾಡುತ್ತಿದ್ದಾರೆ. ಒಟ್ಟಿನಲ್ಲಿ ಮುಂದಿನ ದ ಕದನಕ್ಕೆ ಮೊಳಕಾಲ್ಮೂರು ಭರ್ಜರಿಯಾಗೇ ದಾಗುತ್ತಿದೆ.

ಾದು ಹೇಳಿಕೇಳಿ ನಾಯಕ ಜನಾಂಗದ ಪ್ರಾಬಲ್ಯವಿರುವ . ಹಾಗಾಗಿ ಬಸಪ್ಪ, ನಿಜಲಿಂಗಪ್ಪ ಎಂಬಿಬ್ಬರು ಂಪಿತ ನಾಯಕರನ್ನು ಬಿಟ್ಟರೆ ಇನ್ನುಳಿದಂತೆ ನಾಯಕ ಂಗದ ಶಾಸಕರದ್ದೇ ಇಲ್ಲಿ ಕಾರುಬಾರು. ಈಗೀಗ ಕ ಜನಾಂಗದೊಳಗೇ ಇರುವ ಮ್ಯಾಸ ಬೇಡರು ಊರು ನಾಯಕರು ಎಂಬ ಒಳಪಂಗಡಗಳ ಯೇ ಜಿದ್ದಾಜಿದ್ದಿ ನಡೆಯುತ್ತಿರೋದರಿಂದ ಉಳಿದ ಳು ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿವೆ. ಎಲೆಕ್ಷನ್‌ನಲ್ಲಿ ಗೋಪಾಲಕೃಷ್ಣನನ್ನು ಅನಾಮತ್ತು ಮೂಲೆಗೊತ್ತಿದ್ದು ಕೂಡಾ ಇದೇ 'ಒಳ' ಮರ್ಮ. ಊರ ನಾಯಕರಿಗಿಂತ ಮ್ಯಾಸ ಬೇಡರ ಸಂಖ್ಯೆಯೇ ಅದೇ ಕಾರಣಕ್ಕೆ ಓ. ಬೋರಯ್ಯ, ಪೂರ್ಣ ್ಯ, ಎನ್.ಜಿ.ನಾಯಕ್‌ರಂತ ಮ್ಯಾಸಬೇಡ ಕರುಗಳೇ ಗೆದ್ದು ಬರುತ್ತಿದ್ದರು. ಆದಾಗ್ಯೂ ಆಗ ಂಗಡಗಳು ಪರಸ್ಪರ ಜಿದ್ದಾಜಿದ್ದಿಗೆ ಬಿದ್ದಿರಲಿಲ್ಲ. ಆದರೆ ಾಗ ಊರ ನಾಯಕರ ಪಂಗಡದ ಗೋಪಾಲಕೃಷ್ಣ


ಎನ್.ವೈ. ಗೋಪಾಲಕೃಷ್ಣ


ತಿಪ್ಪೇಸ್ವಾಮಿ

ಸಾಲುಸಾಲು ಅವಧಿಗೆ ಶಾಸಕನಾಗುತ್ತಾ ಕುಟುಂಬ ಮತ್ತು ಒಳಪಂಗಡ ರಾಜಕಾರಣಕ್ಕಿಳಿದನೋ ಆಗಿನಿಂದ ಮ್ಯಾಸಬೇಡರು ತಮ್ಮದೇ ರಾಜಕೀಯ ಅಸ್ತಿತ್ವಕ್ಕೆ ಟೊಂಕಕಟ್ಟಿ ನಿಲ್ಲಲು ಶುರು ಮಾಡಿದರು. ಅದರ ಪರಿಣಾಮವೇ 2013ರಲ್ಲಿ ಗೋಪಾಲಕೃಷ್ಣನನ್ನು ಸೋಲಿಸಿ ಬಿಎಸ್‌ಆರ್ ಕಾಂಗ್ರೆಸ್‌ನಿಂದ ನಿಂತಿದ್ದ ಮ್ಯಾಸಬೇಡರ ನೇರಲಗುಂಟೆ ತಿಪ್ಪೇಸ್ವಾಮಿಯನ್ನು ಗೆಲ್ಲಿಸಿದ್ದರು. ನಂತರ ಬಳ್ಳಾರಿಯ ರಾಮುಲು ತನ್ನ ಪಾರ್ಟಿಯನ್ನು ಬಿಜೆಪಿಯಲ್ಲಿ ವಿಲೀನ ಮಾಡಿದ್ದರಿಂದ ತಿಪ್ಪೇಸ್ವಾಮಿ ಅಧಿಕೃತವಾಗಿ ಬಿಜೆಪಿ ಶಾಸಕ ಎನಿಸಿಕೊಂಡ.

ಎನ್‌ವೈ ಫ್ಯಾಮಿಲಿ ಡ್ರಾಮಾ

2013ರಲ್ಲಿ ಗೋಪಾಲಕೃಷ್ಣ ಸೋಲಲು ಈ ಒಳಪಂಗಡ ಕದನ ಎಷ್ಟು ಕಾರಣವೋ ಆತನ ಕುಟುಂಬ ರಾಜಕಾರಣವೂ ಅಷ್ಟೇ ಕಾರಣ. ಆರಂಭದಲ್ಲಿ ಜನತಾ ಪರಿವಾರದಲ್ಲಿ ಸರಿದಾಡುತ್ತಿದ್ದ ಎನ್‌ವೈ ಫ್ಯಾಮಿಲಿಯ ರಾಜಕಾರಣವನ್ನು ಕಾಂಗ್ರೆಸ್ ಹಳಿಗೆ ತಂದು ನಿಲ್ಲಿಸಿದ್ದು ಎನ್.ಜಿ.ನಾಯಕ್‌ರು. ಅವರು ಎನ್‌ವೈರ ತಾಯಿ ಎಲ್ಲಮ್ಮರನ್ನು ರಾಂಪುರ ಜಿಲ್ಲಾ ಪಂಚಾಯತ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಸಿ ಗೆಲ್ಲಿಸಿದ್ದರು. ಆಗಲೇ ತನ್ನ ಸರ್ಕಾರಿ ನೌಕರಿಗೆ ಗುಡ್‌ಬೈ ಹೇಳಿದ ಗೋಪಾಲಕೃಷ್ಣ ಫುಲ್‌ಟೈಂ ರಾಜಕಾರಣಿಯಾಗಿ ಬೇರೂರಿದರು. ಆದರೆ ಯಾವ ಎನ್.ಜಿ.ನಾಯಕ್‌ರು ಎನ್‌ವೈ ಫ್ಯಾಮಿಲಿಗೆ ಕಾಂಗ್ರೆಸ್‌ನಲ್ಲಿ ಅವಕಾಶ ಕೊಟ್ಟಿದ್ದರೋ ಅದೇ ಎನ್.ಜಿ. ನಾಯಕ್ ವಿರುದ್ಧ ತಿರುಗಿಬಿದ್ದ ಎನ್‌ವೈ 1994ರ ಚುನಾವಣೆಯಲ್ಲಿ ಅವರ ಎದುರು ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಕಾಂಗ್ರೆಸ್ ಮತಗಳ ವಿಂಗಡಣೆಯಿಂದಾಗಿ ಗುರು-ಶಿಷ್ಯ ಇಬ್ಬರೂ ಮಕಾಡೆ ಮಲಗಿದರು. ಆ ಚುನಾವಣೆ ಎನ್.ಜಿ.ನಾಯಕ್‌ರ ರಾಜಕೀಯಕ್ಕೆ ಕೊನೆ ಮೊಳೆ ಹೊಡೆದರೆ, ಎನ್‌ವೈ ಪಾಲಿಗೆ ಶುಭ ಸೂಚನೆ ರವಾನಿಸಿತ್ತು. ಯಾಕೆಂದರೆ ಇವರಿಬ್ಬರ ಕಾದಾಟದ ನಡುವೆ ಗೆದ್ದು ಶಾಸಕರಾಗಿದ್ದ ಪೂರ್ಣ ಮುತ್ತಯ್ಯ 1997ರಲ್ಲಿ ಅಪಘಾತದಲ್ಲಿ ತೀರಿಕೊಂಡಿದ್ದರಿಂದ ಮಧ್ಯಂತರ ಉಪಚುನಾವಣೆ ಎದುರಾಗಿತ್ತು. ಅಷ್ಟರಲ್ಲಾಗಲೆ ಎನ್.ಜಿ.ನಾಯಕ್‌ರು ರಾಜಕೀಯದ ಆಸಕ್ತಿ ಕಳೆದುಕೊಂಡಿದ್ದರು. ಆಗ ಬಂಡಾಯ ಅಭ್ಯರ್ಥಿಯಾಗಿದ್ದ ಕಾರಣಕ್ಕೆ ತಾನೇ ಅಮಾನತ್ತು ಮಾಡಿದ್ದ ಗೋಪಾಲಕೃಷ್ಣನನ್ನೆ ಕಾಂಗ್ರೆಸ್ ಪಾರ್ಟಿ ಮತ್ತೆ ಪಕ್ಷಕ್ಕೆ ಸೇರಿಸಿಕೊಂಡು ಅಭ್ಯರ್ಥಿಯಾಗಿಸಿತ್ತು. ಪ್ರಬಲ ಪೈಪೋಟಿಯೇ ಇಲ್ಲದೆ ಎನ್‌ವೈ ಸಲೀಸಾಗಿ ಗೆದ್ದು ಬಂದರು.

ಅಲ್ಲಿಂದಾಚೆಗೆ ಬರೋಬ್ಬರಿ ನಾಲ್ಕು ಬಾರಿ ಶಾಸಕನಾದ ಗೋಪಾಲಕೃಷ್ಣ ತನ್ನ ಕುಟುಂಬ ರಾಜಕಾರಣಕ್ಕೆ ಒತ್ತುಕೊಟ್ಟರೇ ವಿನಾ ಬೇರೆಯವರನ್ನು ಬೆಳೆಸುವ ಉಸಾಬರಿಗೇ ಕೈ ಹಾಕಲಿಲ್ಲ. ಅದೇ ಅವರಿಗೆ ಈಗ ಮುಳುವಾಗಿದೆ. ತಾನು ಶಾಸಕನಾದ ತರುವಾಯ ರಾಂಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರದಿಂದ ಅಣ್ಣ ಚನ್ನೋಬಳಸ್ವಾಮಿಯ ಹೆಂಡತಿ ಸುಶೀಲಮ್ಮನನ್ನು ಗೆಲ್ಲಿಸಿಕೊಂಡು 2012ರಲ್ಲಿ ಆಕೆಯನ್ನು ಪಂಚಾಯ್ತಿ ಉಪಾಧ್ಯಕ್ಷೆಯನ್ನಾಗಿ ಮಾಡಿದ. ಹಾಗೆಯೇ ತಂಗಿ ಸುಜಾತರನ್ನು ರಾಂಪುರ ಗ್ರಾಮ ಪಂಚಾಯ್ತಿ ಮೆಂಬರು, ಅಧ್ಯಕ್ಷೆಯಾಗಿಸುವಲ್ಲಿ ಗೆದ್ದ ಗೋಪಾಲಕೃಷ್ಣ ತನ್ನ ಹೆಂಡತಿಯ ತಮ್ಮ ರವಿಯನ್ನು ಅದೇ ರಾಂಪುರ ಗ್ರಾಮ ಪಂಚಾಯ್ತಿ ಸದಸ್ಯನಾಗಿಸಿ ಕೃತಾರ್ಥನಾದ.

ಇದರ ನಡುವೆ 2005ರಲ್ಲಿ ಪಾರ್ಲಿಮೆಂಟ್ ಚುನಾವಣೆ ಎದುರಾದಾಗ ಕೈ ನಾಯಕ ಮೂಡಲಗಿರಿಯಪ್ಪನ ವಿರುದ್ಧವೇ ಮಸಲತ್ತು ಮಾಡಿ ಟಿಕೆಟ್ ತಪ್ಪಿಸಿ, ತನ್ನ ಅಣ್ಣ ನಿವೃತ್ತ ಹೈಕೋರ್ಟ್ ಜಡ್ಜ್ ಎನ್.ವೈ. ಹನುಮಂತಪ್ಪನವರು ಕಾಂಗ್ರೆಸ್

▶▶| 10

ಪಾಪ ವಿಶ್ವನಾಥ್ ಹೋಗೇಬಿಟ್ರು ಅತ್ತಗೆ



• ಬಿ.ಚಂದ್ರೇಗೌ

ಕಟ್ಟೆಪುರಾಣ

ಊರಿಕೊಂಡ ಆಕಾಶದ ಜೊತೆಗೆ ಮನುಷ್ಯರೂ ಮುದುರಿಕೊಂಡಿದ್ದವು. ಆಗ ಬಾಯಿ ಬಿಟ್ಟ ಉಗ್ರಿ.

"ಈ ಸಿದ್ದರಾಮಯ್ಯ ಸಾಲಮನ್ನ ಮಾಡ್ತನೇ ಅಂತ ಒಂದು ಚೂರು ಸೂಚನೆ ಇದ್ರು ಸಾಕಾಗಿತ್ತು ಕಣ ಮಾವ ನಾನು ಸಾಲ ಮಾಡತಿದ್ದೆ" ಎಂದ.

"ಆ ವಾಟಿಸ್ಸೆ ಮಾಡಿರಬೇಕು ಕಂಡ್ಳ" ಎಂದಳು ಜುಮ್ಮಿ.

"ಅವುನು ಸ್ಟೇಟ್‌ಬ್ಯಾಂಕಿಲ್ಲಿ ಮಾಡ್ಯವುನೆ ಕಣೆ. ಆ ಸಾಲವ ಮೋದಿನೆ ಮಜ ಮಾಡಬೇಕಂತೆ."

"ಅವುರೇನೊ ಮಾಡಕ್ಕುಲವಂತಲ್ಲಾ."

"ಮಾಡದೆವ್ರೋದ್ರೆ ಈ ಬಿಜೆಪಿಗಳಿಗೆ ಮರಿಯಾದಿರಕುಲ್ಲ ಕಂಡ್ಕ. ಕಡಿಗೆ ಮಾಡ್ತರೇನೊ" ಎಂದ ಸೀರ.

"ಅವುರು ಮಾಡಿದರೇಟು ಬುಟ್ರೇಟ್ಳ. ನೀನೇನು ಬ್ಯಾಂಕಿನ ಸಾಲ ತಗದಿದ್ದಿಯಾ" ಎಂದ ಕಾಳಮಾವ.

"ನನ್ನ ಸುದ್ದಿಬುಡು. ಯರಡೊರ್ಸಾಯ್ತು ಬರಗಾಲ ಬಂದು. ಅಂತೂ ರೈತರಿಗೆ ಅನುಕೂಲಾದ್ರೆ ಸಾಕು."

"ಯಲ್ಲಾ ರೈತರಿಗೂ ಅನುಕೂಲಾಗಬೇಕಾದ್ರೆ ಕೇಂದ್ರದೋರು ಮಜ ಮಾಡಬೇಕಂತೆ ಕಣೊ. ಈ ಎಡೂರಪ್ಪ ಹಳ್ಳಿ ತಿರುಗಿ ಉಳ್ಳಿ ಸಾರಲ್ಲಿ ಉಣ್ಣೊ ನಾಟಕ ಆಡದಕಿಂತ, ದಿಲ್ಲಿಗೋಗಿ 'ನಾವು ಮಕ ಎತ್ತಗಂಡು ತಿರುಗಾಡಕ್ಯಾಗದಿಲ್ಲ, ಮದ್ಲು ಕರ್ನಾಟಕದ ರೈತರ ಸಾಲ ತೀರಿಸಿ' ಅಂತ ಹೇಳಿ ಬರಬೇಕು" ಎಂದು ಉಗ್ರಿ ಹೇಳುತ್ತಿರುವಾಗ ಬಂದ ವಾಟಿಸ್ಸೆ,

"ಪಾಪ ವಿಶ್ವನಾಥ ಹೋಗೇಬುಟ್ಟ" ಎಂದ.

"ಏನಾಗಿತ್ತ ಅವುನಿಗೆ?" ಎಂದ ಕಾಳಮಾವ.


"ಅವುನಿಗೇನು ಆಗಿರಲಿಲ್ಲ ದೊಡಪ್ಪ. ಅಂಗ ಬಕ್ಕತಲೆ ತಗರಿದ್ದಂಗವುನೆ. ಕಾಂಗ್ರೆಸ್ ಪಾರ್ಟಿ ಬುಟ್ಹೋದ ಅಂದೆ."

"ಯತ್ತಗೋದಾ?"

"ಇನ್ನೇನು, ಅವುನ ಮಾತುಕತೆ ನೋಡಿದ್ರೆ ಬಿಜೆಪಿ ಕಡಿಕೆ ಹೋಗಲಾರ. ಅದ್ಕೆ ಜೆಡಿಎಸ್ ಮನೆಕಡಿಕೆ ವಂಟಿರಬೇಕು."

"ಜೆಡಿಎಸ್ಸ ಮನೆ ಅಂತಿಯಲ್ಲ" ಎಂದಳು ಜುಮ್ಮಿ.

"ಊ ಕಣಕ್ಕ, ಅದೊಂದು ದೊಡ್ಡ ಮನೆ. ಅದರಲ್ಲೂ ತೊಟ್ಟಿ ಮನೆ. ತೊಟ್ಟಿ ಮನೆಗೆ ದೊಡ್ಡ ಬಾಗಲಿರತದೆ. ಆ ಬಾಗಲ ದಾಟಿ ವಳಿಕೋದ್ರೆ ಸುಮಾರು ಕ್ವಾಣೆ ಇರತವೆ. ಅದರೊಳಗೆ ಅವಿಭಕ್ತ ಕುಟುಂಬದ ಸದಸ್ಯರುಗಳೆಲ್ಲ ಬಿಲದಲ್ಲಿ ಇಲಿ ತುಂಬಿಕೊಂಡಂಗೆ ತುಂಬಿಕೊಂಡಿರತರೆ. ಬಂದೋರು ಮಾತ್ರ ಹಜಾರದಲ್ಲಿ ಕುತಗತರೆ. ಅಂತ ಹಜಾರಕ್ಕೆ ವಿಶ್ವನಾಥ ಹೋದ."



"ಏನೇ ಆಗ್ಲಿ ವಿಶ್ವನಾಥನ ಬುಟ್ಟುಕೊಡಬಾರದಿತ್ತು ಕಣೊ" ಎಂದ ಉಗ್ರಿ.

"ಬುಟ್ಟು ಕೊಡಬಾರದಿತ್ತು ಅಂತ ನಿನಿಗನ್ನಿಸ್ತದೆ ಕಣೊ ಉಗ್ರಿ. ಕಾಲ ಯಾರ್ಯಾರ್ನ ಎಲ್ಲಿರುಸ್ತದೊ ಹೇಳಕ್ಕೆ ಬರದಿಲ್ಲ ಕಣೊ."

"ಅವುನ್ಯಾಕ್ ಕಾಂಗ್ರೆಸ್ ಬುಟ್ಟ ಹೇಳ್ಳ" ಎಂದ ಕಾಳಮಾವ.

"ಬ್ರೀಪಾಗೇಳ್ತಿನಿ ಕೇಳು ದೊಡಪ್ಪ, ನಮ್ಮ ವಿಶ್ವನಾಥ ರಾಜಕಾರಣದಲ್ಲೇ ಇವತ್ತಿಗೆ ತುಂಬಾ ಬುದ್ಧಿವಂತ. ಆದ್ರೆ ಬುದ್ಧಿ ಸ್ವಲುಪ ಅತಿಯಾಯ್ತು ಅನುಸ್ತದೆ ಅವುನ ನಡವಳಿಕೆ ನೋಡಿದ್ರೆ."

"ಅಂತದೇನು ಮಾಡಿದ?"

"ಅವುನು ಕಾಂಗ್ರೆಸಲ್ಲಿ ಅಂತ ವಜಕಟ್ಟಿರೊ ತೂಕವಾನ ಲೀಡ್ರು ಯಾರೂ ಇಲ್ಲ ಅಂತ ಸಿದ್ದರಾಮಯ್ಯ ಕಾಂಗ್ರೆಸ್ಸಿಗೆ ಬರಂಗೆ ಮಾಡಿದ. ಆದ್ರೆ ನನ್ನಿಂದ್ಲೆ ಸಿದ್ದರಾಮಯ್ಯ ಕಾಂಗ್ರೆಸ್ಸಿಗೆ ಬಂದ ಅಂತ ತಿಳಕಂಡ."

"ಅದರಲ್ಲಿ ತಪ್ಪೇನೂ?" ಎಂದ ಉಗ್ರಿ.

"ತಪ್ಪು ಕಣೊ. ನೀನೂ ಕಾರಣ ಇರಬವ್ಪುದು. ಆದ್ರೆ ನೀನೇ ಕಾರಣ ಅಂತ ಅಲ್ಲ. ಅಂಗೆ ತಿಳಕಂಡು ಸಿದ್ದರಾಮಯ್ಯನಿಂದ ಏನೇನೊ ನಿರೀಕ್ಷೆ ಮಾಡಿಕಂಡು ಕುಂತಿದ್ದ."

"ವಿಶ್ವನಾಥ ಅಂಥೋನಲ್ಲ ಕಣೊ."

"ಅಂಗಾದ್ರೆ ಸುಮ್ಮನಿರಬೇಕಾಗಿತ್ತು ಕಣೊ ಉಗ್ರಿ. ಆ ಜೆಡಿಎಸ್‌ನೋರು ಬಿಜೆಪಿಗಳೇ ಸುಮ್ಮನಿದ್ದಾಗ ಇವುನು ಪ್ರೆಸ್‌ಮೀಟ್ ಮಾಡಿ ಮೈಕ್ ಟೆಸ್ಟ್ ಟೋನಲ್ಲಿ 'ಸಿದ್ದರಾಮಯ್ಯ ನಮಿಗೆ ನಿರಾಶೆಯುಂಟು ಮಾಡಿದ್ದಾರೆ. ನಮ್ಮ ನಿರೀಕ್ಷೆ ಸುಳ್ಳಾಗಿದೆ. ಈಗ ಮುಖ್ಯಮಂತ್ರಿ ಬದಲಾಯಿಸೊ ಕಾಲ ಬಂದಿದೆ. ಇಲ್ಲ ಅಂದ್ರೆ ಅವುರ ನಡವಳಿಕೆ ತಿದ್ದಿಕಬೇಕು' ಅಂದ. ಇದ ಸರಿನೇ?"

"ತಪ್ಪು ಕಣೊ. ಇಂತ ಮಾತು ವಿರೋಧ ಪಕ್ಷದಿಂದ ಬರಬವ್ಪುದಿತ್ತು."

"ಸರಿ, ಇದೇ ಮಾತಿಡಕಂಡು ಭಲವಾದಿ ಶಿವರಾಮ, ಯಂಕಟಸ್ವಾಮಿ ಅಂತ ಯಾರ್ಯಾರೋ ದಲಿತ ಮುಖ್ಯಮಂತ್ರಿ ಬೇದಿಕೆ ಇಟ್ರು. ಅದ್ಕೆ ವಿಶ್ವನಾಥನ ಟೋನೇ ಕಾರಣವಂತೆ."

"ಅದೊಂದು ಟೇಮಲ್ಲಿ ಸರಕಾರನು ಅಂಗೆ ಇತ್ತು ಕಣೊ. ನೀರಿಗಿಳಿದ ಯಮ್ಮೆಯಂಗೆ ಆರಾಮಾಗಿತ್ತು."

"ಆರಾಮಾಗಿರಲಿಲ್ಲ ಕಣೊ ಉಗ್ರಿ. ಮಾಡೋ ಕ್ಯಲಸ ಮಾಡ್ತಯಿತ್ತು. ಈ ಪೇಪರ್ ಮುಂಡೆ ಮಕ್ಕಳ ಜ್ವತಿಗೆ ಟಿವಿಯೋರು ಸೇರಿಕೊಂಡು ಸರಕಾರವೇ ಇಲ್ಲ ಅನ್ನಂಗೇ ನ್ಯಡಕಂಡ್ರು. ಅವುರ ಜೊತಿಗೆ ಈ ವಿಶ್ವನಾಥ ಬ್ಯಾರೆ."

"ಅವುನು ಮದ್ಲಿಂದ ಅಂಗೆ ಅಲವೇನೊ. ಆ ಯಸ್ಸೆಂ ಕಿಸ್ಣನ ಸರಕಾರದಲ್ಲಿದ್ದಾಗ್ಲು ಡಿಕೆಶಿ ಹಾವುಳಿ ಜಾಸ್ತಿಯಾಯ್ತು, ಮುಖ್ಯಮಂತ್ರಿ ತುಂಬ ಸಪೋಟು ಮಾಡ್ತರೆ ಅಂತ ಟೀಕೆ ಮಾಡಿದ್ದ."

"ಅದಾವತ್ತಿಗೆ ಸರಿಯಿತ್ತು ಕಣೊ ಉಗ್ರಿ. ಆದ್ರಿವತ್ತು ಅವುನ ಮಾತುಗಳು ಅವುನಿಗೆ ಸುತ್ತಿಗಂಡು ಕೆಡಿಕಂಡಂಗಾಯ್ತು."

"ಸಿದ್ದರಾಮಯ್ಯ ಅವುನ್ನ ತಡಿಬೇಕಾಗಿತ್ತು ಕಂಡ್ಳ" ಎಂದ ಕಾಳಮಾವ.

"ತಡಿಯೋರ್ನ ತಡದವುನೆ ದೊಡಪ್ಪ ಆದ್ರೆ ಈ ವಿಶ್ವನಾಥ ಹೋಗ್ಲತ್ತಗೆ ಅಂತ ಸುಮ್ಮನಾದ."

"ತಪ್ಪಲವೆ?"

"ನ್ಯಾಯಕೆ ಅಂತ ಕುಂತ್ರೆ ವಿಶ್ವನಾಥನದೆ ತಪ್ಪಾಯ್ತದೆ."

"ಅದ್ಯಂಗೋ?"

"ಸಿದ್ದರಾಮಯ್ಯ ಅಧಿಕಾರ ಉಳಿಸಿಗಳಕ್ಕೆ ಡೆಲ್ಲಿ ಲೀಡ್ರಿಗೆ ಹಣ ಕೊಟ್ಟಿರಬವ್ಪುದು ಅಂತ ವಿಶ್ವನಾಥ ಅಂದ. ಅಂತ ಮಾತಂದೋನ್ನ ಉಳಿಸಿಗಳದು ಕಷ್ಟ ಅಂತ ಯಲ್ಲಾರಿಗೂ ಅನ್ನಸ್ತು, ಅದ್ಕೆ ಕಾಂಗ್ರೆಸ್ಸಿನ ಎಮ್ಮೆಲ್ಲೆಗಳಾಗ್ಲಿ, ಪಂಚಾಯ್ತಿ ಸದಸ್ಯರಾಗ್ಲಿ ಯಾರೂ ವಿಶ್ವನಾಥನ ಪರ ಮಾತಾಡ್ಲಿಲ್ಲ, ಅದ್ಕೆ ಹೋದ ಅತ್ತಗೆ."

"ಅಂಗಾದ್ರೆ ಅವುನೆ ಕ್ಯರಕಂಡು ರಣಗಾಯ ಮಾಡಿಕಂಡಿದ್ರಲ್ಲಿ ಯಾರ ತಪ್ಪು ಇಲ್ಲ ಅಂತಿಯಾ?"

"ಇಲ್ಲ ಕಣೊ ಉಗ್ರಿ. ಕೆಲವು ಸಾರಿ ನೀವೇ ಕ್ಯರಕ... ಗಾಯ ಮಾಡಿಕಂಡ್ರೆ ನೀವೇ ಅನುಭವುಸಬೆ... ಇವುನ್‌ದೇನೋ ಹಿಂಗಾಯ್ತು, ಆ ಪೂಜಾರಿ ಕತೆ ಹೇ..."

"ಊ ಕಣೊ. ಅವುನ್ನ ಯಾವ ಪಾರ್ಟಿಯೊ... ಸೇರಸದಿಲ್ಲ, ಅಂಗವುನೆ. ಅವುನಕತೆ ಏನೂ ಅಂತ..."

"ಏನು ಇಲ್ಲ, ಕಾಂಗ್ರೆಸ್ಸಿನ ಓಲ್ಡೇಜ್ ಪಿಂಚಣಿ ತಗ... ಟ್ವೆಂಟು ಟೈಂ ಟೀಕೆ ಮಾಡಿಕಂಡು ಕಾಲ ಹಾಕ್ತನೆ."

"ಅಂಗಂತಿಯಾ?"

"ಬ್ಯಾರೆ ರೂಟೆ ಇಲ್ಲ, ಆ ವಿಶ್ವನಾಥನಂಗೆ ಇವುನೆಲ್ಲಿ... ಹೋಗದಿಲ್ಲ."

"ಅದೇನಾರ ಆಗ್ಲಿ ಜೆಡಿಎಸ್ಸಿಗೆ ವಿಶ್ವನಾಥನಂಥೋನ... ಬೇಕಿತ್ತು ಕಂಡ್ಳ" ಎಂದ ಕಾಳಮಾವ.

"ವಿಶ್ವನಾಥ ದೇವೇಗೌಡ್ರ ಜೊತೆ ಸೇರಿದ್ದಕ್ಕೆ ವಿ... ಸಮಾಧಾನಾದಂಗೆ ಕಾಣ್ತದೆ ನಮ್ಮ ದೊಡಪ್ಪನಿಗೆ."

"ಕಾಣದಲ್ಲ ಕಂಡ್ಳ. ವಿಶ್ವನಾಥ ಮಾಗಿದ ... ರಾಜಕಾರಣ ಯಂಗೆ ಮಾಡಬೇಕು ಅಂತ ಹೇಳಿಕೊಡ..."

"ಅದೇನೊ ನಿಜ. ಸಿದ್ದರಾಮಯ್ಯನ ಹೆದರ... ಯಾವ್ಯಾವ ಬಾಣ ಬುಡಬೇಕು ಅಂತ ಹೇಳಿಕೊ... ಯಂಗಿದ್ರೂ ಕುಮಾರಣ್ಣ ದ್ಯಾವೇಗೌಡ್ರ ಜೊತೆ ಸರಿಯ... ಮಾತಾಡದಿಲವಂತೆ. ಆ ಪ್ಲೇಸಿಗೆ ವಿಶ್ವನಾಥ ಬಂದಂಗಾಯ..."

"ಅಂಗರಪ್ಪನ ಜ್ವತೆ ಕುಮಾರಣ್ಣ ಸರಿಯ... ಮಾತಾಡದಿಲವೇನ್ಲ?" ಎಂದಳು ಜುಮ್ಮಿ.

"ನಮ್ಮ ಕಡೆ ಯಾವ ಅಪ್ಪ ಮಕ್ಕಳು ನ್ಯ... ಮಾತಾಡ್ಯವಕ್ಕ? ಅವುನು ಪೂರ್ವಕ್ಕೆ ಮಖ ಮಾಡಿಕ... ಮಾತಾಡಿದ್ರೆ, ಇವುನು ಪಶ್ಚಿಮಕ್ಕೆ ಮುಸುಡಿ ತಿರುಗಿಸಿಗ... ಉತ್ತರ ಕೊಡ್ತನೆ. ಅಂತ ಟೇಮಲ್ಲಿ ವಿಶ್ವನಾಥ ಉಪಯೋ... ಬತ್ತನೆ."

"ಅಂತೂ ವಿಶ್ವನಾಥ ದ್ಯಾವೇಗೌಡ್ರ ನಂತ್ರ ಯದ... ಪ್ಲೇಸಲ್ಲಿ ಕುಂತಗತ್ತನೆ."

"ಈ ರಾಜಕಾರಣದ ತಮಾಸಿನೆ ಚಂದ ಕಣೊ ಉ... ದ್ಯಾವೇಗೌಡ್ರ ವೈರಿ ಚಲುವರಾಯಸ್ವಾಮಿ ಸಿದ್ದರಾಮಯ್ಯ... ಛತ್ರಿ ಹಿಡದ್ರೆ, ಸಿದ್ದಣ್ಣನ ವೈರಿ ವಿಶ್ವನಾಥ ದ್ಯಾವೇಗೌ... ಚಾಮರ ಹಿಡಿಯಂಗಾಯ್ತು. ಇನ್ನ ಪತ್ತು ... ಯಾರ್ಯಾರಿಡಿತರೊ ನೋಡನಿರು."

"?!"

ಮೊಳಕಾಲ್ಮೂರು: ಕಾಂಗ್ರೆಸ್ ಟಿಕೆಟ್ ಯಾರ 'ಕೈ'ಗೆ?


9 ⏮

ಅಭ್ಯರ್ಥಿಯಾಗಿಸಿದ್ದ. ವಿಪರ್ಯಾಸವೆಂದರೆ 1994ರಲ್ಲಿ ಎನ್.ಜಿ.ನಾಯಕ್‌ರ ವಿರುದ್ಧ ಬಂಡಾಯ ಅಭ್ಯರ್ಥಿಯಾದ ಕಾರಣಕ್ಕೆ ಪಕ್ಷದಿಂದ ಅವಮಾನತುಗೊಂಡಿದ್ದ ಗೋಪಾಲಕೃಷ್ಣನನ್ನು ಮತ್ತೆ ಕಾಂಗ್ರೆಸ್‌ಗೆ ಸೇರಿಸುವಲ್ಲಿ ಇದೇ ಮೂಡಲಗಿರಿಯಪ್ಪ ಇನ್ನಿಲ್ಲದಂತೆ ಓಡಾಡಿದ್ದರು!

ಕೈ ಪಾರ್ಟಿಗೇ ಕೈಕೊಟ್ಟ ಎನ್‌ವೈ

ಗೋಪಾಲಕೃಷ್ಣಗೆ ತನಗೆ ಸರಿಸಮನಾಗಿ ಮತ್ತೊಬ್ಬರು ಬೆಳೆಯುವುದು ಸುತಾರಾಂ ಇಷ್ಟವಿರಲಿಲ್ಲ, ಹಾಗಾಗಿ ತನ್ನ ಕುಟುಂಬಸ್ಥರನ್ನು ಬಿಟ್ಟು ಮತ್ತೊಬ್ಬರನ್ನು ಆತ ರಾಜಕೀಯವಾಗಿ ಬೆಳೆಸಲಿಲ್ಲ. ಅದೇ ಕಾರಣಕ್ಕೆ ಕಳೆದ ಝಡ್‌ಪಿ ಎಲೆಕ್ಷನ್ ತರುವಾಯ ಕಾಂಗ್ರೆಸ್‌ಗೆ ದಕ್ಕಬೇಕಿದ್ದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನು ವ್ಯವಸ್ಥಿತವಾಗಿ ತಪ್ಪಿಸುತ್ತಾ ಬಂದ. ಕಾಂಗ್ರೆಸ್‌ನಿಂದ ಗೆದ್ದಿದ್ದ ಕೆ.ಜಗಳೂರಯ್ಯ, ಮಹದೇವಪುರದ ತಿಪ್ಪೇಸ್ವಾಮಿ, ಮಾರಾನಾಯಕ, ಪಾಪಾನಾಯಕ ಇವರಲ್ಲಿ ಯಾರಾದರು ಒಬ್ಬರಿಗೆ ಅಧ್ಯಕ್ಷಗಾದಿ ಒಲಿಯುವ ಸಾಧ್ಯತೆ ಇತ್ತು, ಆದರೆ ಎನ್‌ವೈ ಅದಕ್ಕೆ ಅವಕಾಶ ಕೊಡಲಿಲ್ಲ, ಪುನಃ 2010ರಲ್ಲಿ ನರಸಿಂಹ, ಗೋವಿಂದಪ್ಪ ಭಾಗ್ಯಲಕ್ಷ್ಮಿ ತಿಪ್ಪೇಸ್ವಾಮಿ, ಜಯಮ್ಮ ಬಾಲರಾಜ್, ನರಸಮ್ಮ ಗೋವಿಂದಪ್ಪ ಎರಡನೇ ಕಂತಿನಲ್ಲಿ ಅಧ್ಯಕ್ಷರಾಗುವ್ರದಿತ್ತು, ಆಗಲೂ ಅಡ್ಡಗಾಲು ಹಾಕಿದ ಎನ್‌ವೈ ಕೈ ಕಟ್ಟಾಳುಗಳಿಗೆ ಅವಕಾಶ ತಪ್ಪಿಸಿದ.

ಅದೇ ವರ್ಷ ಬಿ.ಜಿ.ಕೆರೆ ಕ್ಷೇತ್ರದಿಂದ ಗೆದ್ದು ಬಂದಿದ್ದ ತನ್ನದೇ ಸಮುದಾಯದ ಯೋಗೀಶ್ ಬಾಬು ಜಿಲ್ಲಾ ಪರಿಷತ್ ಉಪಾಧ್ಯಕ್ಷನಾಗುವುದು ಬಹುತೇಕ ನಿಶ್ಚಿಯಾಗಿತ್ತು, ರಾಜ್ಯ ಕೈನಾಯಕರೂ ಹಸಿರುನಿಶಾನೆ ತೋರಿಸಿದ್ದರು. ಆದರೆ ತನ್ನ ಅತ್ತಿಗೆ ಸುಶೀಲಮ್ಮನಿಗೆ ಉಪಾಧ್ಯಕ್ಷ ಸ್ಥಾನ ಕೊಡದೆಹೋದರೆ ವಿಷ ಕುಡಿಯುವ ಬೆದರಿಕೆಯೊಡ್ಡಿ ನಾಯಕರನ್ನು ಬ್ಲ್ಯಾಕ್‌ಮೇಲ್ ಮಾಡಿಬಿಟ್ಟ. ಹಾಗಾಗಿ ಯೋಗೀಶ್ ಬಾಬುನ ಅವಕಾಶ ಎನ್‌ವೈ ಫ್ಯಾಮಿಲಿ ಪೊಲಿಟಿಕ್ಸ್‌ಗೆ ಬಲಿಯಾಯ್ತು, ಇಂಥಾ ಕ್ಷುಲ್ಲಕ ರಾಜಕಾರಣ ಮಾಡಿಕೊಂಡು ಬಂದ ಗೋಪಾಲಕೃಷ್ಣನ ವಿರುದ್ಧ ಬಹುಸಂಖ್ಯಾತ ವ್ಯಾಸಬೇಡರು ಒಟ್ಟಾಗಿ ನಿಂತ ಪರಿಣಾಮವೇ 2013ರ ಅಸೆಂಬ್ಲಿ ಸೋಲು!



ಹನುಮಂತಪ್ಪ

ಅಧಿಕಾರದಾಹಿ ಗೋಪಾಲಕೃಷ್ಣ ನಸೀಬು ಎಂತದ್ದು ನೋಡಿ. 2013ರಲ್ಲಿ ಸೋತ ಆತ ಇನ್ನೇನು ರಾಜಕೀಯವಾಗಿ ಮೂಲೆ ಹಿಡಿಯುತ್ತಾನೆ ಎಂಬ ಹೊತ್ತಿಗೆ ಸರಿಯಾಗಿ 2014ರಲ್ಲಿ ಬಳ್ಳಾರಿ ಗ್ರಾಮಾಂತರ ಕ್ಷೇತ್ರದ ಉಪಚುನಾವಣೆ ಎದುರಾಗಿತ್ತು, 1997ರಲ್ಲಿ ಎನ್‌ವೈಗೆ ಲೈಫ್ ಕೊಟ್ಟಿದ್ದ ಉಪಚುನಾವಣೆಯೇ 2014ರಲ್ಲಿ ಮರುಜನ್ಮವನ್ನೂ ನೀಡಿದ್ದು ಕಾಕತಾಳೀಯ. ಬಳ್ಳಾರಿ ಗ್ರಾಮಾಂತರದಿಂದ ಗೆದ್ದು ಶಾಸಕನಾಗಿದ್ದ ಬಿ.ಶ್ರೀರಾಮುಲು ಎಂಪಿ ಎಲೆಕ್ಷನ್‌ನಲ್ಲಿ ಗೆದ್ದಿದ್ದರಿಂದ ಬೈಎಲೆಕ್ಷನ್ ಎದುರಾಗಿತ್ತು, ಬಿಜೆಪಿಯ ಬಿಗಿ ಹಿಡಿತದಲ್ಲಿದ್ದ ಅಲ್ಲಿ ಗೆಲ್ಲಬೇಕೆಂದರೆ ಜಾತಿ ರಾಜಕಾರಣದ ಮೊರೆ ಹೋಗಲೇಬೇಕಿತ್ತು, ನಾಯಕ ಸಮುದಾಯ ಪ್ರಧಾನವಾಗಿರುವ ಅಲ್ಲಿಂದ ಸ್ಪರ್ಧಿಸಲು ಗೋಪಾಲಕೃಷ್ಣ ಉತ್ಸಾಹ ತೋರಿದ್ದರಿಂದ ಕಾಂಗ್ರೆಸ್ ಕೂಡಾ ಸಮ್ಮತಿಸಿತು. ಅಧಿಕಾರದಲ್ಲಿದ್ದ ಕಾಂಗ್ರೆಸ್ ರಾಜ್ಯ ಸರ್ಕಾರದ ವರ್ಚಸ್ಸಿನ ಕಾರಣದಿಂದ ಎನ್‌ವೈ ಸುಲಭವಾಗಿ ಗೆದ್ದು ಶಾಸಕನಾದ.

ಗಣಿ ರೊಕ್ಕದ 'ಸ್ವಾಮಿ'ಗೆ ಸೋಲಿನ ಭೀತಿ

ಕುಟುಂಬ ರಾಜಕಾರಣಕ್ಕೆ ತಿಲಾಂಜಲಿ ಇಡಬೇಕು ಅಂತ ಮೊಳಕಾಲ್ಮೂರಿನ ಜನ ಗೋಪಾಲಕೃಷ್ಣನನ್ನು ಸೋಲಿಸಿದ್ದೇನೊ ನಿಜ, ಆದರೆ ಅದರಿಂದ ಕ್ಷೇತ್ರದ ಹಣೆಬರಹ ಬದಲಾಗಲಿಲ್ಲ. ಒಂಥರಾ ಬಾಣಲೆಯಿಂದ ಬೆಂಕಿಗೆ ಬಿದ್ದಂತಹ ಪರಿಸ್ಥಿತಿ. ಯಾಕೆಂದರೆ ಶಾಸಕನಾಗಿ ವಕ್ಕರಿಸಿದ್ದು ತಿಪ್ಪೇಸ್ವಾಮಿ ಎಂಬ ಗಣಿ ದುಡ್ಡಿನ ಗೊಂಬೆ. ಈತನ ತಮ್ಮ ಅರಣ್ಯಾಧಿಕಾರಿ ಮುತ್ತಯ್ಯ ಬಳ್ಳಾರಿಯಲ್ಲಿ ಗಣಿ ರೆಡ್ಡಿಗಳಿಗೆ ಮೈನಿಂಗ್ ಮಾಡಲು ಬೇಕಾಬಿಟ್ಟಿ ಪರ್ಮಿಷನ್ ಕೊಟ್ಟು ಸಂಪಾದಿಸಿದ ಹಡಬೆ ದುಡ್ಡಿತ್ತಲ್ಲ, ಅದೇ ದುಡ್ಡಿನ ಬಲದಲ್ಲಿ ಚಲಾವಣೆಗೆ ಬಂದವನು ಈ ತಿಪ್ಪೇಸ್ವಾಮಿ.

ಅಧಿಕಾರ ದುರುಪಯೋಗಪಡಿಸಿಕೊಂಡು ಗೆಬರಿದ್ದ ಮುತ್ತಯ್ಯನಿಗೆ ತಾನು ಜೈಲಿಗೆ ಹೋಗುವುದು ಗ್ಯಾರಂಟಿ ಎಂಬುದು ಖಾತ್ರಿಯಾಗಿತ್ತು, ಅದನ್ನು ತಪ್ಪಿಸಿಕೊಳ್ಳಬೇಕೆಂದರೆ ತನ್ನ ಸುತ್ತ ಪೊಲಿಟಿಕಲ್ ಕೋಟೆ ಕಟ್ಟಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಬಂದ ಆತ ಬಿ.ಎಸ್.ಆರ್ ಕಾಂಗ್ರೆಸ್‌ನಿಂದ ಅಣ್ಣ ನೇರಲಗುಂಟೆ ತಿಪ್ಪೇಸ್ವಾಮಿಯನ್ನು ಮೊಳಕಾಲ್ಮೂರಿನಿಂದ, ಸ್ವಂತ ಬಾಮೈದ ರಾಜೇಶ್‌ನನ್ನು ಜಗಳೂರಿನಿಂದ ನಿಲ್ಲಿಸಿ ಗೆಲ್ಲಿಸಿಕೊಂಡ. ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದರೆ ಅಣ್ಣನ ಮೂಲಕ ಅಥವಾ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದರೆ ಬಾಮೈದುನ ಮೂಲಕ ಸೇಫ್ ಆಗುವುದು ಅವನ ಇರಾದೆಯಾಗಿತ್ತು, ಆತನ ತಂತ್ರಗಾರಿಕೆ ಹೆಚ್ಚೂಕಮ್ಮಿ ಫಲಿಸಿದೆ ಅಂತಲೇ ಹೇಳಬಹುದು. ಇದಕ್ಕೂ ಮುನ್ನ ತನ್ನ ಹೆಂಡತಿ ಶಶಿರೇಖಾರನ್ನು ನೇರಲಗುಂಟೆ ಝಡ್‌ಪಿ ಮೆಂಬರ್ ಮಾಡಿದ್ದ ಮುತ್ತಯ್ಯ ಅರೆಸ್ಟಾದರೂ ಸೇಫ್ ಆದದ್ದು ಆತನ ಫ್ಯಾಮಿಲಿ ಪೊಲಿಟಿಕಲ್ ಲಿಂಕ್‌ಗಳಿಂದಲೇ!

ಹೀಗೆ ತನ್ನ ತಮ್ಮ ಹಡಬೆ ದುಡಿಮೆಯನ್ನು ಕಾಪಾಡುವುದಕ್ಕೆಂದೇ ಶಾಸಕನಾದ ತಿಪ್ಪೇಸ್ವಾಮಿಯಿಂದ ಕ್ಷೇತ್ರ ಉದ್ಧಾರವನ್ನು ನಿರೀಕ್ಷಿಸಿದ್ದೇ ದುಬಾರಿಯಾಯ್ತು, ಆತ... ಈಗ ಜನರಿಗೆ ಬೇಡವಾಗಿದ್ದಾನೆ.


ಟಿಕೆಟ್‌ಗೆ ಕೊಸರಾಟ


ಹೇಳಿಕೇಳಿ ಬಳ್ಳಾರಿ ರಿಪಬ್ಲಿಕ್ ಅನ್ನೋದು ... ಮಾಫಿಯಾದ ಅಡ್ಡ. ಅಲ್ಲಿ ರೆಡ್ಡಿ-ರಾಮುಲುಗಳ... ದರ್ಬಾರು. ಕಳೆದ ಸಾರಿ ಜನಾರ್ದನ ರೆಡ್ಡಿ ಜೈಲು ಸೇ... ಶ್ರೀರಾಮುಲು ಅತಂತ್ರನಾದ್ದರಿಂದ ಎನ್‌ವೈ ಗೆಲ್ಲು... ಸಾಧ್ಯವಾಯ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ... ಆಚೆ ಬಂದಿದ್ದಾನೆ. ರಾಮುಲು ಹುರುಪಿನಲ್ಲಿದ್ದಾನೆ. ಮುಂ... ಎಲೆಕ್ಷನ್‌ನಲ್ಲಿ ತನ್ನ ಆಟ ಅಲ್ಲಿ ನಡೆಯೋಲ್ಲ ಅನ್ನೋ... ಗೋಪಾಲಕೃಷ್ಣಗೆ ಮನದಟ್ಟಾಗಿಹೋಗಿದೆ. ಹಾಗಾಗಿ ... ಮೊಳಕಾಲ್ಮೂರಿಗೆ ಮತ್ತೆ ಕಾಲೂರಲು ತಯಾ... ನಡೆಸುತ್ತಿದ್ದಾನೆ. ಹೇಗೂ ಹಾಲಿ ಶಾಸಕ ತಿಪ್ಪೇಸ್ವಾಮಿಯಿಂ... ಜನರಿಗೆ ಬೇಸರವಾಗಿರೋದ್ರಿಂದ ತಾನು ಗೆಲ್ಲೋದು ಗ್ಯಾರಂ... ಎಂಬ ಲೆಕ್ಕಾಚಾರ ಗೋಪಾಲಕೃಷ್ಣನದ್ದು. ಆದರೆ ಕಾಂಗ್ರೆ... ಟಿಕೆಟ್‌ಗಾಗಿ ಜಿಲ್ಲಾ ಪಂಚಾಯ್ತಿ ಮೆಂಬರ್ ಯೋಗೀ... ಬಾಬು ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನ ನಡೆಸಿರೋ... ಎನ್‌ವೈಗೆ ಮಗ್ಗುಲ ಮುಳ್ಳಾಗುವ ಸಾಧ್ಯತೆ ಇದೆ.


2012ರಲ್ಲಿ ಇದೇ ಯೋಗೀಶ್ ಬಾಬು ಜಿ... ಪಂಚಾಯ್ತಿ ಉಪಾಧ್ಯಕ್ಷನಾಗಬೇಕಿತ್ತು, ಆದರೆ ... ಅತ್ತಿಗೆಯನ್ನು ಆ ಸ್ಥಾನದಲ್ಲಿ ಕೂರಿಸಲು ಎನ್... ಯೋಗೀಶ್‌ಗೆ ಅನ್ಯಾಯ ಮಾಡಿದ್ದ. ಆ ಸಿಂಪಥಿ ರಾ... ನಾಯಕರು ಮತ್ತು ಜಿಲ್ಲಾ ಉಸ್ತುವಾರಿ ಮ... ಆಂಜನೇಯರಿಗೆ ಯೋಗೀಶ್ ಮೇಲಿದೆ. ಮುಖ್ಯ... ಸಿಎಂ ಸಿದ್ದರಾಮಯ್ಯನವರಿಗೂ ಗೋಪಾಲಕೃಷ್ಣ... ಮೊಳಕಾಲ್ಮೂರಿನ ಟಿಕೆಟ್ ನೀಡಲು ಇಷ್ಟವಿಲ್ಲ ಎ... ಮಾತು ಕೇಳಿಬರುತ್ತಿದ್ದು ಬಹಳ ದಿನಗಳ ತರುವಾ... ಕ್ಷೇತ್ರದಲ್ಲಿ ಹೊಸ ಮುಖಗಳ ಕದಲಿಕೆಗಳಿಗೆ ಅವಕಾ... ಮಾಡಿಕೊಟ್ಟಿದೆ. ಇನ್ನೂ ಚುನಾವಣೆಗೆ ಒಂದು ವ... ಸಮಯವಿದ್ದು ಅಷ್ಟರಲ್ಲಿ ಎನ್.ವೈ. ಅದಿನ್ನೇನು ತ... ಹೆಣೆದು ತನ್ನ ಫ್ಯಾಮಿಲಿ ಪಾಳೇಗಾರಿಕೆ ಉಳಿಸಿಕೊಳ್ಳುತ್ತಾನೊ... ಕಾದು ನೋಡಬೇಕು.


■ ಟಿ.ಎನ್. ಷಣ್ಮು...

ಹುಬ್ಬಳ್ಳಿ: ಅಬ್ಬಯ್ಯನ ಕೈ ಅನಾಥ-ಬಿಜೆಪಿಯ ಟಿಕೆಟ್ ಕಿತ್ತಾಟ!









ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ...ಲ್ಲಿ ಟಿಕೆಟ್ ಕಬ್ಬಾಟ ಜೋರಾಗಿದೆ. ಕಾಂಗ್ರೆಸ್‌ನ ಶಾಸಕ ಪ್ರಸಾದ್ ಅಬ್ಬಯ್ಯ ಎರಡನೇ ಬಾರಿಗೆ ಕೈ ...ಯಾಗುವ ಹುಮ್ಮಸ್ಸಿನಲ್ಲಿದ್ದರೆ ಎಚ್.ಕೆ.ಪಾಟೀಲರ ...ಮ್ಮು ಆತನ ವಿರುದ್ಧ ಸಣ್ಣಗೆ ಕತ್ತಿ ಮಸೆಯಲು ...ಮಾಡಿದೆ. ಇತ್ತ ಬಿಜೆಪಿಯೊಳಗೆ ಟಿಕೆಟ್ ಕದನ ...ದ ದಿನಕ್ಕೆ ಮುಗಿಲು ಮುಟ್ಟುತ್ತಿದೆ.

...ಜೆಪಿಯ ಒಳಜಗಳ ಮತ್ತು ಭ್ರಷ್ಟಾಚಾರದ ಕಾರಣಕ್ಕೆ ...ವಣೆ ಬಯಸಿದ್ದ ಜನರ ಆಶಯದಿಂದಾಗಿ 2013ರ ...ನಲ್ಲಿ ಪ್ರಸಾದ್ ಅಬ್ಬಯ್ಯ ಕಾಂಗ್ರೆಸ್‌ನಿಂದ ಗೆದ್ದು ...ದ್ದು ಅಚ್ಚರಿಯೇ ಸರಿ. ಯಾಕೆಂದರೆ ಈತನಿಗೆ ನೆಟ್ಟಗೆ ...ಪರಿಚಯವೇ ಇರಲಿಲ್ಲ, ಆದರೆ ಗೆಲ್ಲುತ್ತಿದ್ದಂತೆಯೇ ... ವರಸೆಯೇ ಬದಲಾಗಿದೆ. ಚುನಾವಣೆಯಲ್ಲಿ ...ಟ್ಟಗಿದ್ದ ಮುಖಗಳು ಬದಲಾಗಿವೆ. ಕ್ರಿಕೆಟ್ ಬೆಟ್ಟಿಂಗ್ ...ರು, ಹವಾಲಾ ದಂಧೆಕೋರರು, ಮೀಟರ್ ಬಡ್ಡಿ ...ರು, ಚೀಟಿ ವ್ಯವಹಾರ ನಡೆಸುವವರೇ ಅಬ್ಬಯ್ಯನ ...ಕಾಯಿಸುತ್ತಿದ್ದಾರೆ.

...ಸಕ ಪ್ರಸಾದ್ ಅಬ್ಬಯ್ಯ ಹುಬ್ಬಳ್ಳಿಗಿಂತ ...ರಿನಲ್ಲಿ ಸಿಗುವುದೇ ಜಾಸ್ತಿ. ವಿಧಾನಸಭಾ ಅಧಿವೇಶ... ಮಾತನಾಡಿದ್ದನ್ನು ಕಂಡವರಿಲ್ಲ. ಮಲ್ಲಿಕಾರ್ಜುನ ... ಕೃಪಾಕಟಾಕ್ಷದಿಂದ ಟಿಕೆಟ್ ಪಡೆದು ಶಾಸಕನಾದ ...ದಲ್ಲಿ ಡಾ. ಜಿ. ಪರಮೇಶ್ವರ್ ಬಳಿ ಸ್ವಲ್ಪ ದಿನ ...ಡಿ ಕೊನೆಗೆ ಸಿಎಂ ಸಿದ್ದರಾಮಯ್ಯನಲ್ಲಿ ...ಗಿಬಿಟ್ಟ. ಹಾಗಾಗಿ ಸರಕಾರದ ಅನುದಾನ ಕೋಟಿ ...ಲ್ಲಿ ಹರಿದು ಬಂತು. ಈ ಕ್ಷೇತ್ರದಲ್ಲಿ 24 ಸ್ಲಂಗಳು ...ವೆ. ಸ್ವಲ್ಪಮಟ್ಟಿಗೆ ರೋಡ್, ಗಟಾರಗಳು ಅಂತ ...ದ್ದೇ ಈತನ ಸಾಧನೆಗಳು. ಆದರೆ ತನ್ನ ಸುತ್ತ ಚೀಟಿ ...ಯಲ್ಲಿ ಮೋಸಮಾಡಿ ಹಣ ಗಳಿಸಿದವರು, ದಲಿತರ ...ಲ್ಲಿ ಸುಲಿಗೆಗೆ ಇಳಿದವರು, ರೌಡಿಗಳು, ರಿಯಲ್ ...ಟ್ ಕುಳಗಳು ಮುಂತಾದವರೇ ತಳವೂರಿರುವುದು ...ಯ್ಯನ ವರ್ಚಸ್ಸನ್ನು ಕುಗ್ಗಿಸಿದೆ. ಈ ಹಿಂದೆ ಗಜು ... ಎಂಬಾತನೂ ಅಬ್ಬಯ್ಯನ ಆಪ್ತ ವಲಯದಲ್ಲಿದ್ದ. ಆತ ಕ್ರಿಕೆಟ್ ಬೆಟ್ಟಿಂಗ್ ಜಾಲದಲ್ಲಿ ಸಿಕ್ಕಿಬಿದ್ದು ...ಡಿಸಿಕೊಂಡ ತರುವಾಯ ಅಬ್ಬಯ್ಯ ದೂರ ಸರಿಸಿದ್ದ. ...ೂ ಇನ್ನುಳಿದ ತನ್ನ ದುಷ್ಟಕೂಟವನ್ನು ನಿವಾರಿಸಿ ...ು ಅಬ್ಬಯ್ಯ ಹೊರಬರದಿದ್ದರೆ ಜನ ತಕ್ಕ ಪಾಠ ...ದ್ದಾರೆ.

...ಂದಹಾಗೆ, ಅಬ್ಬಯ್ಯನ ವಿರುದ್ಧ ಹೆಚ್.ಕೆ.ಪಾಟೀಲರ ...ಲ್ಲಿ ಗುರುತಿಸಿಕೊಂಡಿರುವ ರಾಜ್ಯ ಎಸ್ಸಿ ಘಟಕದ ... ಜಕ್ಕಪ್ಪನವರ್, ಕಾರ್ಪೋರೇಟರ್ ಮೋಹನ ...ುನಿ, ಗಣೇಶ, ಟಗರಗುಂಡಿ, ಸ್ಕ್ರಾಪ್ ದಂಧೆಯ ...ಪ್ ಸವಣೂರ, ಸತೀಶ ಮಹೆರವಾಡೆ ...ದವರು ಕತ್ತಿ ಮಸೆಯಲು ತಯಾರಿ ನಡೆಸಿದ್ದಾರೆ. ...ರೆ ಚುನಾವಣೆಗೂ ಮುನ್ನ ತನ್ನ ಜೊತೆಗಿದ್ದ ರಾಜಶೇಖರ ಮೆಣಸಿನಕಾಯಿ, ಅನ್ವರ ಮುಧೋಳ, ಶಹರ ಕಾಂಗ್ರೆ ಅಧ್ಯಕ್ಷ ಮಾಜಿ ಸಚಿವ ಎ.ಎಂ. ಹಿಂಡಸಗೇರಿಯಂತವರನ್ನೇ ದೂರ ಮಾಡಿಕೊಂಡಿರುವ ಪ್ರಸಾದ್ ಅಬ್ಬಯ್ಯನಿಗೆ ಪಕ್ಷದೊಳಗೆ ಪ್ರತಿಕೂಲ ಪರಿಸ್ಥಿತಿ ನಿರ್ಮಾಣವಾಗಿದೆ. 2ನೇ ಅವಧಿಗೆ ಮತ್ತೆ ನಾಮ ನಿರ್ದೇಶನ ಮಾಡಿಸಿದ ಧರ್ಮಣ್ಣ ದೊಡಮನಿ ಎಡಬಲಕ್ಕೆ ಇದ್ದರೆ ಮಾಜಿ ಕಾರ್ಪೋರೇಟರ್ ಯಮನೂರ ಗುಡಿಹಾಳ ಕೊತಕೊತ ಕುದಿಯುತ್ತಿದ್ದಾನೆ.

ಇನ್ನು 15 ವರ್ಷಗಳ ಹಿಂದೆ ಆಗಿನ ಶಾಸಕ ಜಬ್ಬಾರ ಖಾನ್ ಹೊನ್ನಳ್ಳಿ ಖರೀದಿಸಿದ್ದ 35 ಎಕರೆ ಜಮೀನಿನಲ್ಲಿ 2500 ಮನೆಗಳ ನಿರ್ಮಾಣಕ್ಕೆ ಮುಂದಾಗಿರುವ ಪ್ರಸಾದ್ ಅಬ್ಬಯ್ಯ ಫಲಾನುಭವಿಗಳ ಆಯ್ಕೆಯಲ್ಲೂ ಹೆಸರು ಕೆಡಿಸಿಕೊಂಡಿದ್ದಾನೆ. ಫಲಾನುಭವಿಗಳ ಆಯ್ಕೆಯಲ್ಲಿ ಈತನ ಸಹೋದರರು ಕೈಯಾಡಿಸುತ್ತಿರೋದನ್ನು ಅವನದೇ ಪಕ್ಷದ ಗಣೇಶ ಟಗರಗುಂಡಿ, ಮೋಹನ್ ಹಿರೆಮನಿ, ವಿಜಯ ಗುಂಟ್ರಾಳರು ವಿರೋಧಿಸುತ್ತಿದ್ದಾರೆ. ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಕಾರ್ಯಗಳಲ್ಲಿ ಮೂಗು ತೂರಿಸುವ ಅಬ್ಬಯ್ಯನ ಸಹೋದರರಾದ ಮಂಜು, ಧರ್ಮರಾಜ, ಹಿರಿಯಣ್ಣ ವಿಜಯಕುಮಾರನನ್ನು ದೂರ ಸರಿಸಿದರೆ ಆತನಿಗೇ ಒಳಿತು. ಒಟ್ಟಿನಲ್ಲಿ ಇಂಥಾ ಯಡವಟ್ಟುಗಳನ್ನೆಲ್ಲ ಸರಿಪಡಿಸಿಕೊಳ್ಳದೆ, ಪಕ್ಷದೊಳಗಿನ ವಿರೋಧವನ್ನು ಹತ್ತಿಕ್ಕದೇ ಆತ ಚುನಾವಣೆ ಎದುರಿಸುವುದು ಕಷ್ಟದ ಕೆಲಸ.

ಬಿಜೆಪಿಯಲ್ಲಿ ಟಿಕೆಟ್ ಕಿತ್ತಾಟ

ಅತ್ತ ಕಾಂಗ್ರೆಸ್‌ನಲ್ಲಿ ಆಂತರಿಕ ಬೇಗುದಿ ಪ್ರಸಾದ್ ಅಬ್ಬಯ್ಯನನ್ನು ಮೆತ್ತಗಾಗಿಸಲು ಕಾದಿದ್ದರೆ ಇತ್ತ ಬಿಜೆಪಿಯೊಳಗೆ ಟಿಕೆಟ್‌ಗಾಗಿ ಕಾಲೆಳೆದಾಟ ಜೋರಾಗಿಯೇ ಸಾಗಿದೆ. ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ ತಾನೇ ಮುಂದಿನ ಅಭ್ಯರ್ಥಿ ಎಂಬ ಘೋಷಣೆ ಕೂಗಿಕೊಂಡು ಊರೆಲ್ಲಾ ಸುತ್ತುತ್ತಿದ್ದರೆ ಯಡ್ಡಿಯ ಹಿಂಬಾಲಕ ಅಶೋಕ್ ಕಾಟವೆ ತನ್ನ ಚೇಲಾ ಒಬ್ಬನಿಗೆ ಟಿಕೆಟ್ ಕೊಡಿಸಲು ಸದ್ದಿಲ್ಲದೆ ಪ್ರಯತ್ನ ನಡೆಸಿದ್ದಾನೆ. ಈ ಮೊದಲು ಸಾಮಾನ್ಯ ಕ್ಷೇತ್ರವಾಗಿದ್ದ ಹುಬ್ಬಳ್ಳಿ-ಧಾರವಾಡ 2008ರಲ್ಲಿ ಎಸ್‌ಸಿ ಮೀಸಲು ಕ್ಷೇತ್ರವಾಗಿ ಬದಲಾಗಿತ್ತು. ಬಿಜೆಪಿ ಆಗ ಇಲ್ಲಿಗೆ ಅಭ್ಯರ್ಥಿಯಾಗಿ ಪ್ರತಿಷ್ಠಾಪಿಸಿದ್ದು ಹಾಲಿ ಕೇಂದ್ರ ಮಂತ್ರಿಯಾಗಿ ಠಳಾಯಿಸಿರುವ ರಮೇಶ್ ಜಿಗಜಿಣಗಿಯ ಅಳಿಯ ವೀರಭದ್ರಪ್ಪ ಹಾಲಹರವಿಯನ್ನು. ಆತನ ವಿರುದ್ಧ ಒಡೆದ ಮನೆಯಂತಾಗಿದ್ದ ಕಾಂಗ್ರೆಸ್ ಪಾರ್ಟಿ ಎಫ್.ಎಚ್. ಜಕ್ಕಪ್ಪನನ್ನು ಕಣಕ್ಕಿಳಿಸಿದ್ದರೆ, ಜೆಡಿಎಸ್ ಹನುಮಂತಪ್ಪ ಆಲ್ಕೋಡು ಎಂಬ ಆಮದು ರಾಜಕಾರಣಿಯನ್ನು ಅಖಾಡಕ್ಕಿಳಿಸಿತ್ತು. ಇವರಿಬ್ಬರ ಮತ ವಿಂಗಡನೆಯ ಲಾಭ ದಕ್ಕಿದ್ದು ವೀರಭದ್ರಪ್ಪ ಹಾಲಹರವಿಗೆ. ಈತ ಪಕ್ಕಾ ಅವಕಾಶವಾದಿ ರಾಜಕಾರಣಿ. ಕ್ಷೇತ್ರದ ಉದ್ಧಾರದ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಂಡವನಲ್ಲ.

ಗಣಿ ರೆಡ್ಡಿಗಳು ಯಡ್ಡಿ ಸರ್ಕಾರದ ಭದ್ರತೆಗಾಗಿ ಸೂಟ್‌ಕೇಸ್ ಹಂಚುವ 'ಧರ್ಮ'ಕಾರ್ಯಕ್ಕೆ ಇಳಿದಾಗ ಈ ವೀರಭದ್ರಪ್ಪನೂ ಹೈದ್ರಾಬಾದ್ ಹಾದಿಹಿಡಿದು, ಸೂಟ್‌ಕೇಸ್ ಸಮೇತ ವಾಪಾಸ್ಸು ಬಂದಿದ್ದ. ಆನಂತರವೇ ಗಿರಣಿ ಚಾಳದಲ್ಲಿದ್ದ ಮುರುಕು ಮನೆ ತೊರೆದು ಹುಬ್ಬಳ್ಳಿ ಐಬಿ ಹಿಂಭಾಗ 40 ಲಕ್ಷ ರೂಪಾಯಿ ಕೊಟ್ಟು ಮನೆ ಖರೀದಿಸಿದ್ದು, ನವನಗರದ ಬಳಿ ಫಾರ್ಮ್‌ಹೌಸ್ ಖರೀದಿಸಿದ್ದು, ಸಾಲದ್ದಕ್ಕೆ ಜಿ-ಕೆಟಗರಿ ಅಡಿ ಬೆಂಗಳೂರಿನಲ್ಲೊಂದು ಮನೆ ಮಾಡಿದ್ದು. ಕೊನೆಕೊನೆಗೆ ತಾನೊಬ್ಬ ಶಾಸಕನೆನ್ನುವುದನ್ನೂ ಮರೆತ ವೀರಭದ್ರಪ್ಪ ತನ್ನದೇ ಪಕ್ಷದ ಕಾರ್ಯಕರ್ತರನ್ನೂ ದೂರ ಮಾಡಿಕೊಂಡ. ಹಾಗಾಗಿಯೇ 2013ರ ಚುನಾವಣೆಯಲ್ಲಿ ಸ್ವಪಕ್ಷೀಯರೇ ಅವನನ್ನು ಮಕಾಡೆ ಮಲಗಿಸಿದರು.

ಇಂಥಾ ವೀರಭದ್ರಪ್ಪ ಈಗ ಮತ್ತೆ ಟಿಕೆಟ್ ಹೊಂಗನಸಿನಲ್ಲಿದ್ದಾನೆ. ಆದರೆ ಯಡ್ಡಿಯ ಪಕ್ಕಾ ಫಾಲೋವರ್ ಮಾಜಿ ಶಾಸಕ ಅಶೋಕ ಕಾಟವೆ ತನ್ನ ಹಿಂಬಾಲಕರಿಗೆ ಟಿಕೆಟ್ ಬೇಕು ಅಂತ ಹಠ ಹಿಡಿದು ಕೂತಿದ್ದಾನೆ. ರಂಗನಾಯಕ ತಪೇಲಾನಿಗೆ ಟಿಕೆಟ್ ಕೊಡಬೇಕೆನ್ನುವುದು ಅಶೋಕ ಕಾಟವೆಯ ಬೇಡಿಕೆ. ಅದಕ್ಕಾಗಿ ಹಾಲಹರವಿಯ ವಿರುದ್ಧ ಭರ್ಜರಿಯಾಗೇ ಯಡ್ಡಿ ಕಿವಿಯೂದಿದ್ದಾನೆ. ಅಷ್ಟಕ್ಕೂ ಯಡ್ಡಿ ಕೆಜೆಪಿ ಕಟ್ಟಿಕೊಂಡು ಹೊರನಡೆದಾಗ ಅವನನ್ನು ಅನುಸರಿಸಿದ್ದ ಅಶೋಕ್ ಕಾಟವೆ ಅಂದ್ರೆ ಯಡ್ಡಿಗೂ ಒಂಥರಾ ಸಾಫ್ಟ್ ಕಾರ್ನರ್ ಉಂಟಂತೆ. 2013ರಲ್ಲಿ ಯಡ್ಡಿ ಕೆಜೆಪಿಯಿಂದ ಶಂಕ್ರಣ್ಣ ಬಿಜವಾಡನನ್ನು ಅಭ್ಯರ್ಥಿಯಾಗಿಸಿದಾಗ ಬಿಜೆಪಿಯಿಂದ ಹುರಿಯಾಳಾಗಿ ನಿಂತದ್ದು ವೀರಭದ್ರಪ್ಪ ಹಾಲಹರವಿ. ಆ ಸಿಟ್ಟು ಯಡ್ಡಿಗಿದೆ. ಅವತ್ತು ಬಿಜೆಪಿಯ ಹಾಲಹರವಿ 28831 ಮತ ಪಡೆದರೆ ಕೆಜೆಪಿ 26312 ಮತ ಪಡೆದಿತ್ತು. ಅಂದರೆ ಬಿಜೆಪಿಯಷ್ಟೇ ಪ್ರಬಲಶಾಲಿ ಯಡ್ಡಿ ಪಡೆಯೂ ಇಲ್ಲಿದೆ ಎಂಬುದು ಖಾತ್ರಿಯಾಗುತ್ತದೆ.


ಅಂದಹಾಗೆ ಕಳೆದ ಸಾರಿ ಬಿಜೆಪಿ, ಕೆಜೆಪಿ ಪಡೆದ ಮತಗಳನ್ನು ಸೇರಿಸಿದರೆ ಕಾಂಗ್ರೆಸ್‌ನಿಂದ ಆಯ್ಕೆಯಾದ ಪ್ರಸಾದ್ ಅಬ್ಬಯ್ಯ ಪಡೆದ 42353 ಗಳಿಗಿಂತ ಹೆಚ್ಚಾಗುತ್ತವೆ. ಈ ಸಲ ಇವೆರಡೂ ದಾಯಾದಿ ಪಾರ್ಟಿಗಳು ಒಂದಾಗಿರುವುದರಿಂದ ಬಿಜೆಪಿ ಗೆದ್ದೇ ಗೆಲ್ಲುತ್ತೆ ಎಂಬ ಭರವಸೆಯಲ್ಲಿ ಬಿಜೆಪಿ ಟಿಕೆಟ್‌ಗೆ ಭಾರೀ ಪೈಪೋಟಿ ನಡೆಯುತ್ತಿದೆ. ಹಾಲಹರವಿ ಮತ್ತು ರಂಗನಾಯಕನಲ್ಲದೆ ಇನ್ನು ಡಜನ್‌ಗಟ್ಟಲೆ ಆಕಾಂಕ್ಷಿಗಳು ಹುಟ್ಟಿಕೊಂಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಶಂಕ್ರಣ್ಣ ಬಿಜವಾಡ, ಕಾಂಗ್ರೆಸ್‌ನಿಂದ ಪಕ್ಷಾಂತರಗೊಂಡ ಬಸವರಾಜ ಅಮ್ಮಿನಬಾವಿ, ಕಟ್ಟರ್ ಹಿಂದೂತ್ವವಾದಿ ಎಸ್‌ಬಿಐ ಬ್ಯಾಂಕ್ ಉದ್ಯೋಗಿ ಚಂದ್ರಶೇಖರ ಗೋಕಾಕ, ಲಕ್ಷ್ಮಣ ಬಳಗಿ ಹೆಸರುಗಳೂ ರೇಸ್‌ನಲ್ಲಿವೆ. ಈ ಕ್ಷೇತ್ರದ ಮಾಧ್ಯಮ ಪತ್ರಾರ ಹನುಮಂತಪ್ಪ ದೊಡಮನಿಯಂತಹ ಎಳಸು ಕೂಡಾ ಟಿಕೆಟ್‌ಗಾಗಿ ಗುದ್ದಾಡುತ್ತಿದೆ.

ಕೇಶವ ಕುಂಜದ ಸುತ್ತಲೇ ಗಿರಕಿ ಹೊಡೆಯುತ್ತಿರುವ ಟಿಕೆಟ್ ಗಾಳಿಪಟದ ಸೂತ್ರ ಮಾತ್ರ ಅಮಿತ್ ಶಾ ಕೈಯಲ್ಲಿದೆ. ಈಗಾಗಲೇ ಕೇಶವ ಕುಂಜ ತಯಾರಿಸಿದ ಪಟ್ಟಿಯಲ್ಲಿ ಈ ಕ್ಷೇತ್ರಕ್ಕೆ ಚಂದ್ರಶೇಖರ ಗೋಕಾಕ್ ಹೆಸರು ಆಖೈರುಗೊಂಡಿದೆ. ಗೋಕಾಕ್ ಕುಟುಂಬ ಮೊದಲಿನಿಂದಲೂ ಕೈ ಪಾಳಯದಲ್ಲಿ ಗುರುತಿಸಿಕೊಂಡಿತ್ತು. ಹೀಗಾಗಿ ಈ ಭಾಗದಿಂದ ಕೆ.ಜಿ.ಗೋಕಾಕ್ ಪಾಲಿಕೆ ಸದಸ್ಯರಾಗಿ ಆಯ್ಕೆಗೊಳ್ಳುತ್ತಿದ್ದರು. ಆದರೆ ಯಾವಾಗ ಸಂಘ ಪರಿವಾರ ತನ್ನ ಬಾಹುವನ್ನು ಇತ್ತ ಚಾಚಲಾರಂಭಿಸಿ. ಮಕ್ಕಳಿಗೆ ವಿದ್ಯಾಭ್ಯಾಸ, ಹೆಣ್ಣುಮಕ್ಕಳಿಗೆ ಹೊಲಿಗೆ ನೆಪಗಳಲ್ಲಿ ಬೇರು ಬಿಡಲು ಶುರು ಮಾಡಿತೊ ಆಗ ಅದರ ನೇತೃತ್ವ ವಹಿಸಿಕೊಂಡಿದ್ದೇ ಈ ಚಂದ್ರಶೇಖರ ಗೋಕಾಕ್. ಬ್ಯಾಂಕ್ ನೌಕರಿಗಿಂತ ಸಂಘ ಪರಿವಾರದ ಚಟುವಟಿಕೆಗಳಲ್ಲೇ ಸಕ್ರಿಯನಾಗಿರುವ ಈತನಿಗೆ 2013ರ ಚುನಾವಣೆಯಲ್ಲಿಯೇ ಟಿಕೆಟ್ ಖಾತ್ರಿಯಾಗಬೇಕಾಗಿತ್ತು. ಆದರೆ ವೀರಭದ್ರಪ್ಪ ಹಾಲಹರವಿ ತನ್ನ ಮಾವ ರಮೇಶ್ ಜಿಗಜಿಣಗಿ ಮೂಲಕ ಬಿಫಾರಂ ದಕ್ಕಿಸಿಕೊಂಡಿದ್ದ. ಆದರೆ ಈ ಸಲ ಚಂದ್ರಶೇಖರ ಗೋಕಾಕ್ ಪರ ಸಂಘ ಪರಿವಾರ ದೃಢವಾಗಿ ನಿಂತಿದೆ.


ಒಂದುವೇಳೆ ಬಿಜೆಪಿ ಟಿಕೆಟ್ ಚಂದ್ರಶೇಖರ್ ಗೋಕಾಕ್ ಪಾಲಾದರೆ ಆಗ ಮತ್ತೊಬ್ಬ ಟಿಕೆಟ್ ಆಕಾಂಕ್ಷಿ ಶಂಕ್ರಣ್ಣ ಬಿಜವಾಡ ಬಿಜೆಪಿ ತೊರೆದು ಹೈದರಾಬಾದ್‌ನ ಓವೈಸಿ ಪಕ್ಷದಿಂದ ಅಭ್ಯರ್ಥಿಯಾಗುವುದಾಗಿ ಈಗಾಗಲೇ ಘೋಷಿಸಿಕೊಂಡಿದ್ದಾನೆ. ಇನ್ನು ಜೆಡಿಎಸ್‌ನಲ್ಲಿ ಅದೇ ಹಳೇ ಗಿರಾಕಿ ಅಲ್ಕೋಡ್ ಹನುಮಂತಪ್ಪ ಸ್ಪರ್ಧಿಸುವ ಸಾಧ್ಯತೆ ಇದೆ. ಆದರ ಬದಲು ಹಿರೇಕೆರೂರಿನ ಶಿವು ಅಥವಾ ಸಂತೋಷ್‌ನನ್ನು ಅಭ್ಯರ್ಥಿಯಾಗಿಸಿದರೆ ಒಂಚೂರು ಹೊಸತನವಿರಲಿದೆ.


■ ಹುಬ್ಬಳ್ಳಿಯಾಂವ

...ರಹಟ್ಟಿ: ಬಿಜೆಪಿ ಗದ್ದಲದ ನಡುವೆ ದೊಡ್ಮನಿ 'ಕೈ'ಗೆ ಸೆಕೆಂಡ್ ಚಾನ್ಸ್?









...ಎಸ್‌ಸಿ ಮೀಸಲು ಕ್ಷೇತ್ರವಾಗಿರೋ ಶಿರಹಟ್ಟಿಯಲ್ಲಿ ಟಿಕೆಟ್‌ಗಾಗಿ ಜಂಗೀ ಕುಸ್ತಿಯೇ ನಡೆಯುತ್ತಿದೆ. ...ಶಾಸಕ ರಾಮಣ್ಣ ಲಮಾಣಿ ಎರಡನೇ ಚಾನ್ಸ್‌ಗಾಗಿ ...ತ್ತಿದ್ದರೆ, ಆತನಿಗೆ ಟಿಕೆಟ್ ತಪ್ಪಿಸಿ ಭೀಮಸಿಂಗ್ ...ೋಡ್ ಎಂಬ ಹೊಸ ಮುಖವನ್ನು ...ಯಾಗಿಸಲು ಸಿ.ಸಿ.ಪಾಟೀಲ್ ಮತ್ತು ಕಳಕಪ್ಪ ಬಂಡಿ ...ಯು ಕಸರತ್ತು ನಡೆಸುತ್ತಿದ್ದಾರೆ. ಮುಂಡರಗಿ ಲಕ್ಷ್ಮೇಶ್ವರ ...ದ ಕೆಲ ಗ್ರಾಮಗಳನ್ನು ಹೆಣೆದುಕೊಂಡಂತೆ ...ೂಂಡಿರುವ ಶಿರಹಟ್ಟಿ ಕ್ಷೇತ್ರ ಎಸ್‌ಸಿ ಮೀಸಲು ...ಎಂದು 2008ರಲ್ಲಿ ಘೋಷಣೆ ಆಗುವವರೆಗೆ ಅಲ್ಲಿ ...ಯತ ರಾಜಕಾರಣಿಗಳ ಝಲಕ್ಕೇ ಕಂಡುಬರುತ್ತಿತ್ತು. ...ತಿಯಿಂದಾಗಿ ಜಾತಿ ಸಮೀಕರಣ ಕೊಂಚ ...ಗಿದೆ.

[illegible]ರಲ್ಲಿ ಇಲ್ಲಿಂದ ರಾಮಣ್ಣ ಲಮಾಣಿ ಗೆಲ್ಲುವುದಕ್ಕೆ ... ಕಾರಣಗಳಿದ್ದವು. ಯಡ್ಡಿಯ ಕಾರಣಕ್ಕೆ ಲಿಂಗಾಯತರು ...ಗಟಾಗಿ ಬಿಜೆಪಿಯತ್ತ ವಾಲಿದ್ದರೆ, ಮಾಜಿ ಶಾಸಕ ...ಸಾಲಿ ಜನಾಂಗದ ಗಂಗಣ್ಣ ಮಹಾಂತ ಶೆಟ್ಟರ್ ...ಸೇರಿದ್ದೂ ಕೂಡ ಆತನ ಗೆಲುವಿನಲ್ಲಿ ಪ್ರಧಾನ ...ವಹಿಸಿತ್ತು. ಇನ್ನು ಅದು ಸಾಮಾನ್ಯ ಕ್ಷೇತ್ರವಾಗಿದ್ದಾಗ ...ಬಾರಿ ಶಾಸಕನಾಗಿದ್ದ ಕಾಂಗ್ರೆಸಿನ ಗಡ್ಡದೇವರ ಮಠರ ... ಜನಸಿದ್ದ ಅಸಮಾಧಾನ ರಾಮಣ್ಣನ ಗೆಲುವಿನ ...ಕಾರಣವಾಗಿತ್ತು. ರಾಮಣ್ಣ ಲಮಾಣಿ ತಕ್ಕಮಟ್ಟಿಗೆ ...ತ ರಾಜಕಾರಣಿ ಎನಿಸಿಕೊಂಡರೂ ಅಭಿವೃದ್ಧಿಯ ...ದಲ್ಲಿ ತೀರಾ ಹಿಂದೆ ಬಿದ್ದರು. ಅದಕ್ಕಿಂತಲೂ ...ಾಗಿ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ... ಮತ್ತು ಜಿಲ್ಲೆಯ ಪ್ರಭಾವಿ ರಾಜಕಾರಣಿ ... ಬಂಡಿ ಜೊತೆಗೆ ವೈಮನಸ್ಸು ಕಟ್ಟಿಕೊಂಡದ್ದು ಆತನಿಗೆ ಭಾರೀ ದುಬಾರಿಯಾಯ್ತು. ಅದರ ಪರಿಣಾಮವೇ 2013ರಲ್ಲಿ ಎದುರಾದ ಸೋಲು.

ಅಷ್ಟರಲ್ಲಾಗಲೆ ಬಿಜೆಪಿ ಒಡೆದ ಮನೆಯಂತಾಗಿತ್ತು. ಯಡ್ಡಿ ಕೆಜೆಪಿ ಎಂಬ ತೆಂಗಿನಕಾಯಿ ಸ್ಟಾಲ್ ತೆರೆದು ಕೂತಿದ್ದರೆ, ಬಳ್ಳಾರಿ ರಾಮುಲು ಬಿಜೆಪಿ-ಕಾಂಗ್ರೆಸ್ ಎರಡನ್ನೂ ಕಲಬೆರಕೆ ಮಾಡಿ ಬಿಎಸ್‌ಆರ್ ಕಾಂಗ್ರೆಸ್ ಎಂಬ ಗುಜರಿ ಅಂಗಡಿ ಓಪನ್ ಮಾಡಿಕೊಂಡಿದ್ದ. ಅಕ್ಷರಶಃ ಗೊಂದಲಕ್ಕೆ ಬಿದ್ದ ರಾಮಣ್ಣ ಲಮಾಣಿ ಆರಂಭದಲ್ಲಿ ಯಡ್ಡಿಯ ಕೆಜೆಪಿಯಲ್ಲಿ ಗುರುತಿಸಿಕೊಂಡರಾದರೂ ಅದೇನಾಯಿತೊ ಏನೊ ಚುನಾವಣೆ ಹೊತ್ತಿಗೆ ವಾಪಾಸ್ ಬಿಜೆಪಿಗೆ ಬಂದು ಟಿಕೆಟ್ ಗಿಟ್ಟಿಸಿಕೊಂಡರು. ಅತ್ತ ಯಡ್ಡಿಯ ಕೆಜೆಪಿ ಶೋಭಾ ಲಮಾಣಿಯನ್ನು ಅಖಾಡಕ್ಕೆ ತಳ್ಳಿದರೆ, ರಾಮುಲು ಸ್ವಜಾತಿಯ ಜಯಶ್ರೀ ಹಳೆಪ್ಪರನ್ನು ಅಭ್ಯರ್ಥಿಯಾಗಿಸಿದ್ದ. ಈ ಜಯಶ್ರೀಯ ಮಾವ ಸಣ್ಣವೀರಪ್ಪ, ರಾಮುಲುನ ಬಲಗೈ ಭಂಟ ಎನ್ನುವುದೇ ಆಕೆ ಟಿಕೆಟ್ ಗಿಟ್ಟಿಸಲು ಇದ್ದ ಏಕೈಕ ಮಾನದಂಡ.

ಬಿಜೆಪಿಯೊಳಗಿನ ಇಂಥಾ ತ್ರಿಕೋನ ತಿಣುಕಾಟದಿಂದ ಲಾಭವಾದದ್ದು ಕಾಂಗ್ರೆಸ್‌ನ ದೊಡ್ಡಮನಿ ರಾಮಕೃಷ್ಣನಿಗೆ. ಹಲವಾರು ಜನಪರ ಹೋರಾಟಗಳ ಮೂಲಕ ಶಿರಹಟ್ಟಿಯಲ್ಲಿ ಹೆಸರು ಮಾಡಿದ್ದ ರಾಮಕೃಷ್ಣ ಎಡಪಂಥೀಯ ಧ್ವನಿ ಉಳ್ಳವರು. ಜೊತೆಗೆ ರಂಗಭೂಮಿಯ ನಂಟನ್ನೂ ಹೊಂದಿರುವ ಸಾಂಸ್ಕೃತಿಕ ಮನಸಿನ ದೊಡ್ಡಮನಿ ಮುನ್ಸಿಪಾಲ್ಟಿ ಹಂತದಿಂದ ಚುನಾವಣಾ ರಾಜಕಾರಣವನ್ನು ಮೈಗೂಡಿಸಿಕೊಂಡಿದ್ದರು. ಸಾಲದ್ದಕ್ಕೆ ಜಿಲ್ಲೆಯ ಕಾಂಗ್ರೆಸ್ ನಾಯಕ ಹೆಚ್.ಕೆ.ಪಾಟೀಲರ ಕೃಪಾಕಟಾಕ್ಷ. ಇವೆಲ್ಲ ಸೇರಿ ಬಲು ಪ್ರಯಾಸದಿಂದ ರಾಮಕೃಷ್ಣರನ್ನು 2013ರಲ್ಲಿ ಗೆಲ್ಲಿಸಿದ್ದವು. ಬಿಜೆಪಿಯ ರಾಮಣ್ಣ ಲಮಾಣಿ ವಿರುದ್ಧ ಮುನ್ನೂರು ಮತಗಳಿಂದ ಗೆದ್ದ ರಾಮಕೃಷ್ಣ ದೊಡ್ಡಮನಿಗೆ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹುದ್ದೆಯೂ ಒಲಿದು ಬಂದಿತ್ತು.

ಆದರೆ ಈ ಸಲ ಬಿಜೆಪಿಯ ಮೂರು ಮೂಲೆಗಳೂ ಒಂದಾಗಿವೆ. 'ಮಿಷನ್ 150' ಕನಸಿಟ್ಟುಕೊಂಡಿರುವ ಯಡ್ಡಿ ಭಾವಿ ಮುಖ್ಯಮಂತ್ರಿಯ ಹಗಲುಗನಸಿನಲ್ಲಿದ್ದಾರೆ. ರಾಮುಲು ಕೂಡಾ ತವರಿಗೆ ವಾಪಾಸ್ ಆಗಿದ್ದಾನೆ. ಹಾಗಾಗಿ ಶಿರಹಟ್ಟಿ ಬಿಜೆಪಿಯಲ್ಲಿ ಟಿಕೆಟ್‌ಗಾಗಿ ಭಾರೀ ಜಗ್ಗಜಗ್ಗಾಟ ಶುರುವಾಗಿದೆ. ಮಾಜಿ ಶಾಸಕ ರಾಮಣ್ಣ ಲಮಾಣಿ ಎರಡನೇ ಸಲ ಶಾಸಕನಾಗಲು ಮೂರನೇ ಸಲ ಟಿಕೆಟ್ ಪಡೆಯಲು ಕಾರ್ಯೋನ್ಮುಖನಾಗಿದ್ದರೆ ಆತನ ದುಶ್ಮನಿಗಳಾದ ಸಿ.ಸಿ.ಪಾಟೀಲ್ ಮತ್ತು ಕಳಕಪ್ಪ ಬಂಡಿಯ ಆಲೋಚನೆಗಳೇ ಬೇರೆ. ರಾಮಣ್ಣ ಲಮಾಣಿ ಅನಕ್ಷರಸ್ಥನಾಗಿರೋದ್ರಿಂದ ಆತನ ಬದಲಿಗೆ ಅಕ್ಷರವಂತ ಭೀಮಸಿಂಗ್ ರಾಥೋಡ್‌ಗೆ ಟಿಕೆಟ್ ಕೊಡಿ ಅಂತ ಅವರಿಬ್ಬರು ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ. ಕಳೆದ ಸಲ ಆರಂಭದಲ್ಲಿ ಕೆಜೆಪಿ ಸೇರಿದರೂ ನಂತರ ಕೈಕೊಟ್ಟ ಬಿಜೆಪಿಗೆ ವಾಪಸಾಗಿದ್ದ ರಾಮಣ್ಣ ಲಮಾಣಿ ಮೇಲೆ ಯಡ್ಡಿಗೂ ಅಂತಹ ಮಮಕಾರವಿಲ್ಲ. ಜೊತೆಗೆ ಕಳೆದ ಚುನಾವಣೆಯಲ್ಲಿ ರಾಮುಲನ ಬಿಎಸ್‌ಆರ್ ಪಾರ್ಟಿಯಿಂದ ಅಖಾಡಕ್ಕಿಳಿದಿದ್ದ ಜಯಶ್ರೀ ಹಳೆಪ್ಪ ಕೂಡಾ ಟಿಕೆಟ್‌ಗಾಗಿ ರಂಗವಲ್ಲಿ ಬಿಡುತ್ತಿದ್ದಾರೆ. ಆಕೆಯ ಗುತ್ತಿಗೆದಾರ ಮಾವ ಸಣ್ಣವೀರಪ್ಪ ಈಗಾಗಲೇ ರಾಮುಲು ಜೊತೆ ಮ್ಯಾಚ್‌ಫಿಕ್ಸಿಂಗ್ ಮಾಡಿಕೊಂಡಿದ್ದು ತನ್ನ ಸೊಸೆಗೇ ಟಿಕೆಟ್ ಗ್ಯಾರಂಟಿ ಎಂಬ ಹುಮ್ಮಸ್ಸಿನಲ್ಲಿದ್ದಾರೆ. ಜಯಶ್ರೀ ಈ ಹಿಂದೆ ಎರಡು ಬಾರಿ ಸ್ಪರ್ಧಿಸಿ ಸೋತಿರುವುದರಿಂದ ತಮ್ಮ ಕುಟುಂಬದ ಪರ ಜನರಿಗೆ ಸಿಂಪಥಿ ಇದೆ, ಜೊತೆಗೆ ತನ್ನ ಸೊಸೆ ಕೂಡಾ ವಿದ್ಯಾವಂತೆ, ಮಹಾನ್ ಮಾತುಗಾತಿಯಾಗಿರೋದ್ರಿಂದ ಆಕೆಗೇ ಟಿಕೆಟ್ ಕೊಡಬೇಕೆನ್ನುವುದು ಮಾವ ಸಣ್ಣವೀರಪ್ಪನ ವಾದ. ಅಂದಹಾಗೆ, ಈ ಜಯಶ್ರೀ 2013ರಲ್ಲಿ ರಾಮುಲು ಪಾಳಯದಿಂದ ಕಣಕ್ಕಿಳಿಯುವುದಕ್ಕಿಂತ ಮುನ್ನ [illegible]ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಸೋತಿದ್ದರು. ಬಿಜೆಪಿಯ ಇಂಥಾ ಟಿಕೆಟ್ ಕಾಲೆಳೆದಾಟವೇ ಕಾಂಗ್ರೆಸ್‌ನ ದೊಡ್ಡಮನಿ ರಾಮಕೃಷ್ಣರನ್ನು ಎರಡನೇ ಬಾರಿ ಕೈಹಿಡಿಯುತ್ತಾ ಎಂಬುದನ್ನು ಕಾದು ನೋಡಬೇಕಿದೆ.

■ ವರದಿಗಾರ

'ಶಾಶ್ವತ ಶಂಕಿತರ' ಬದುಕಿನ ಕಥೆ-ವ್ಯಥೆ


'ನಿನ್ನ ಎರಡು ತುಟಿಗಳು ಮುಕ್ತವಾಗಿವೆ, ಮಾತ್ನಾಡು
ಈಗಲೂ ನಿನ್ನ ನಾಲಿಗೆ ನಿನ್ನದೇ, ಮಾತ್ನಾಡು
ನೇರವಾದ, ಹುರಿಗೊಂಡ ನಿನ್ನ ದೇಹವು ಈಗಲೂ ನಿನ್ನದೇ
ನಿನ್ನ ಬದುಕು ಈಗಲೂ ನಿನ್ನದೇ, ಮಾತ್ನಾಡು'

ಎನ್ನುವ ಫೈಜ್ ಅವರ ಕವಿತೆಯ ಸಾಲುಗಳನ್ನು ಉಲ್ಲೇಖಿಸುತ್ತ ತಮ್ಮ ಮಾತುಗಳನ್ನು ಆರಂಭಿಸಿದ ಅಬ್ದುಲ್ ವಾಹಿದ್ ಶೇಕ್ 20 ನಿಮಿಷಗಳ ಕಾಲ ಅಲ್ಲಿ ನೆರೆದಿದ್ದ ಕಾನೂನು ವಿದ್ಯಾರ್ಥಿಗಳು, ಹಿರಿಯ, ಕಿರಿಯ ಪ್ರಜ್ಞಾವಂತರ ಮುಂದೆ "ಅನುಮಾನಿತರು ಮತ್ತು ಅವಮಾನಿತರ" ಮತ್ತೊಂದು ನರಕದ ಲೋಕವನ್ನೇ ಬಿಚ್ಚಿಟ್ಟರು. ಮೂಲತಃ ಬಿ.ಎಡ್. ಪದವೀಧರ, ಶಿಕ್ಷಕರಾದ ವಾಹಿದ್ ನಮ್ಮ ಮುಂದೆ ಬಿಚ್ಚಿಟ್ಟಿದ್ದು "ಶಾಶ್ವತ ಶಂಕಿತರಾದ" ಭಯೋತ್ಪಾದಕರೆನ್ನುವ ಹುಸಿಯಾದ ಆರೋಪಗಳನ್ನು ಎದುರಿಸಿ ಜೈಲು ಸೇರಿದ ನಿರಪರಾಧಿ ಮುಸ್ಲಿಂ ಯುವಕರ ಲೋಕ. 11, ಜುಲೈ 2006 (7/11 ಎಂದು ಕುಖ್ಯಾತಿ)ರ ಮುಂಬೈ ಟ್ರೇನ್ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಯಾವುದೇ ಅಪರಾಧವನ್ನೇ ಮಾಡದ, ಶಿಕ್ಷಕರಾಗಿದ್ದ ವಾಹಿದ್‌ರನ್ನು ಮುಸ್ಲಿಂ ತರುಣ ಎನ್ನುವ ಒಂದೇ ಕಾರಣಕ್ಕೆ ಆರೋಪಿಯಾಗಿ, ಅನುಮಾನಿತ ಭಯೋತ್ಪಾದಕನಾಗಿ ಬಂಧಿಸಲ್ಪಟ್ಟು ಜೈಲಿನಲ್ಲಿ ಚಿತ್ರಹಿಂಸೆ ಅನುಭವಿಸಿ, 9 ವರ್ಷಗಳ ಕಾಲ ಕೈದಿಯಾಗಿ ಕಳೆದ ಆ ದಿನಗಳನ್ನು ಅಬ್ದುಲ್ ವಾಹಿದ್ ವಿವರಿಸುತ್ತಾ ಹೋದಂತೆ ನಮ್ಮೆಲ್ಲರ ರಕ್ತ ತಣ್ಣಗೆ ಹೆಪ್ಪುಗಟ್ಟುತ್ತಿತ್ತು, 9 ವರ್ಷಗಳ ನಂತರ 2015ರಲ್ಲಿ ಈತನ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಹೇಳಿದ ಕೋರ್ಟ ವಾಹಿದ್ ನಿರಪರಾಧಿ ಎಂದು ಬಿಡುಗಡೆ ಮಾಡಿ ತೀರ್ಪು ನೀಡಿತು. ಅವಮಾನಿತನಾಗಿ ಹೊರಬಂದ ಅಬ್ದುಲ್ ವಾಹಿದ್ ತಮ್ಮ ಅನುಭವಗಳನ್ನು 'ಬೇಗುನಾ ಕೈದಿ' (ಅಮಾಯಕ ಕೈದಿ) ಎನ್ನುವ ಆತ್ಮ ಕಥನ ಮಾದರಿಯ ಪುಸ್ತಕದಲ್ಲಿ ವಿವರಿಸಿದ್ದಾರೆ. ಅವರು ಆರ್ಥರ್ ರಸ್ತೆ ಜೈಲಿನಲ್ಲಿದ್ದಾಗ ತಮ್ಮ ಅನುಭವಗಳನ್ನು ಬರೆದು ದಾಖಲಿಸತೊಡಗಿದರು. ಆದರೆ ಆಗ ಜೈಲು ಸೂಪರಿಂಟೆಂಡೆಂಟ್ ಆಗಿದ್ದ ಸ್ವಾತಿ ಸಾಥೆ ಆ ಶಾಶ್ವತ ಶಂಕಿತ ಕೈದಿಯ ಅನುಭವಗಳನ್ನು ದಾಖಲಿಸದಂತೆ ಪುಸ್ತಕದ ಹಾಳೆಗಳನ್ನು ಹರಿದು ಹಾಕುತ್ತಿದ್ದರು ಎಂದು ವಾಹಿದ್ ಅವರು ಸಂದರ್ಶನದಲ್ಲಿ ವಿವರಿಸುತ್ತಾರೆ.

ಮುಂಬೈನ ಪಶ್ಚಿಮ ಲೋಕಲ್ ಟ್ರೇನ್‌ನ ಪುರುಷರ ಮೊದಲ ದರ್ಜೆ ಕಂಪಾರ್ಟಮೆಂಟ್‌ನಲ್ಲಿ 11, ಜುಲೈ 2006ರಂದು ಸಂಜೆ 6.30-6.37ರ ಏಳು ನಿಮಿಷದ ಅವಧಿಯಲ್ಲಿ 7 ಬಾಂಬ್ ಸ್ಫೋಟಗೊಳ್ಳುತ್ತವೆ ಮತ್ತು ಯಾವುದೂ ವಿಫಲಗೊಳ್ಳುವುದಿಲ್ಲ, ಜುಲೈ 11 ರಂದು ವಿಚಾರಣೆ ಆರಂಭಿಸಿದ ಮಹಾರಾಷ್ಟ್ರ ಪೊಲೀಸರು ಜುಲೈ 12ರಂದು ಇಡೀ ತನಿಖೆಯ ಜವಾಬ್ದಾರಿಯನ್ನು ಭಯೋತ್ಪಾದನೆ ನಿಗ್ರಹ ದಳ(ಎಟಿಎಸ್)ಕ್ಕೆ ಹಸ್ತಾಂತರಿಸುತ್ತಾರೆ.

ಅಬ್ದುಲ್ ವಾಹಿದ್ ಅವರು "ಬಾಂಬ್ ಅನ್ನು ಸ್ಫೋಟಿಸಿ ಸಾವುನೋವಿಗೆ ಕಾರಣರಾದ ನಿಜವಾದ ಆರೋಪಿಗಳು ಎಟಿಎಸ್ ಪೊಲೀಸರಿಗೆ ದೊರಕುವುದಿಲ್ಲ, ಸ್ಫೋಟಗೊಂಡ ಸ್ಥಳದಲ್ಲಿಯೇ ಪಂಚನಾಮೆ ನಡೆಸುತ್ತಾರೆ. ಆದರೆ ಅಲ್ಲಿ ಯಾವುದೇ ಸುಳಿವು ದೊರಕುವುದಿಲ್ಲ, ಆಗ ಈ ಪೊಲೀಸ್ ಅಧಿಕಾರಿಗಳು ಕತ್ತಲಲ್ಲಿ ಬಾಣ ಬಿಡತೊಡಗುತ್ತಾರೆ, ಯಾರನ್ನು ಬಂಧಿಸಲಿ, ಯಾರಿಗೆ ಚಿತ್ರಹಿಂಸೆ ನೀಡಲಿ ಎಂದು ಕತ್ತಲಲ್ಲಿ ತಡಕಾಡಲು ಆರಂಭಿಸುತ್ತಾರೆ. ಈ ಪೊಲೀಸರ ಬಳಿ ಎರಡು ಆಯ್ಕೆಗಳಿದ್ದವು. ಒಂದು 'ಸರ್ ನಮಗೆ ಆರೋಪಿಗಳು ದೊರಕಲಿಲ್ಲ, ನಾವು ಅಪರಾಧಿಗಳನ್ನು ಪತ್ತೆ ಹಚ್ಚಲು ವಿಫಲರಾಗಿದ್ದೇವೆ' ಎಂದು ತಮ್ಮ ಮೇಲಧಿಕಾರಿಗಳಲ್ಲಿ ನಿವೇದನೆ ಮಾಡಿಕೊಳ್ಳುವುದು, ಎರಡನೆಯದು ನಿರಪರಾಧಿ, ಮುಗ್ಧ ಮುಸ್ಲಿಂ ಯುವಕರನ್ನು ಬಂಧಿಸಿ 'ಸರ್ ನಾವು ಬಾಂಬ್ ಸ್ಫೋಟದ ಆರೋಪಿಗಳನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದೇವೆ' ಎಂದು ಸುಳ್ಳು, ಕಪಟ ವರದಿ ಸಲ್ಲಿಸುವುದು. ಇಲ್ಲಿ ಈ ಪೊಲೀಸರು ಮೊದಲನೆಯ ಆಪ್ಷನ್ನಿಯನ್ನು ಆಯ್ಕೆ ಮಾಡಿಕೊಂಡರೆ ಅವರಿಗೆ ಮಾನಹಾನಿ ಉಂಟಾಗುತ್ತದೆ, ಗೌರವಕ್ಕೆ ಧಕ್ಕೆ ಉಂಟಾಗುತ್ತದೆ, ಅದನ್ನು ಅವರು ಯಾವುದೇ ಕಾರಣಕ್ಕೂ ಆಯ್ಕೆ ಮಾಡಿಕೊಳ್ಳುವುದಿಲ್ಲ, ತಮಗೆ ಪ್ರಶಂಸೆ, ಭಡ್ತಿ ತಂದುಕೊಡುವ ಎರಡನೆಯದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ" ಎಂದು ಎಳೆಎಳೆಯಾಗಿ ವಿವರಿಸಿದರು.


ಬಾಂಬೆ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಉಗ್ರರೆಂದು ತಮ್ಮೊಂದಿಗೆ ಬಂದಿತರಾದ ಉಳಿದ 12 ಕೈದಿಗಳು ಗಲ್ಲು ಶಿಕ್ಷೆಗೆ ಗುರಿಯಾಗಿ ಇಂದಿಗೂ ಜೈಲಿನಲ್ಲಿ ನರಳುತ್ತಿದ್ದಾರೆ ಎಂದು ಹೇಳಿದ ವಾಹಿದ್ ಅವರನ್ನು ಭಯೋತ್ಪಾದಕನೆಂದು ಅನುಮಾನಿಸಿ ಮುಂಬೈನಲ್ಲಿ ಬಂಧಿಸಲಾಯಿತಾದರೂ ವಿಚಾರಣೆಯ ನೆಪದಲ್ಲಿ ಬೆಂಗಳೂರಿಗೆ ಕರೆತಂದ ಭಯೋತ್ಪಾದನೆ ನಿಗ್ರಹ ದಳ (ಎಟಿಎಸ್)ದ ಪೊಲೀಸರ ಉದ್ದೇಶ ಹಿಂಸೆ ಕೊಡುವುದಾಗಿತ್ತು, ಅದು ವೈದ್ಯಕೀಯ ಹಿಂಸೆ. ಮಂಪರು ಪರೀಕ್ಷೆಯಲ್ಲಿ, ಬ್ರೇನ್ ಮ್ಯಾಪಿಂಗ್‌ನಲ್ಲಿ ಪರಿಣತಿ ಸಾಧಿಸಿದವರೆಂದು ಖ್ಯಾತಿ ಪಡೆದ ಬೆಂಗಳೂರಿನ ಫೋರೆನ್ಸಿಕ್ ಲ್ಯಾಬ್‌ನ ಮುಖ್ಯ ವೈದ್ಯೆ ಡಾ. ಮಾಲಿನಿ ಅವರು ವಾಹಿದ್ ಅವರನ್ನು ವಿಚಾರಣೆಯ ನೆಪದಲ್ಲಿ ಮಂಪರು ಪರೀಕ್ಷೆಗೆ ಗುರಿಪಡಿಸಿದರು. ಮಂಪರು ಪರೀಕ್ಷೆಯಲ್ಲಿ ಎಲ್ಲಾ ಸತ್ಯವ





ಹೊರಬಂದು ತಾವು ಬಿಡುಗಡೆಯಾಗಬಹುದೆಂದು ಮುಗ್ಧರಾಗಿ ನಂಬಿದ್ದ ಅಬ್ದುಲ್ ವಾಹಿದ್ ಅವರಿಗೆ ಮುಂದೆ ಸರಣಿ ಆಘಾತಗಳು ಕಾದಿದ್ದವು. ಎಟಿಎಸ್ ಪೊಲೀಸರು ಸತ್ಯನಿಷ್ಠರು ಎಂದು ನಂಬುವಷ್ಟು ಅಮಾಯಕರಾಗಿದ್ದ ವಾಹಿದ್ ಶೇಕ್ ಅವರಿಗೆ ಪೊಲೀಸರ ಕ್ರೌರ್ಯದ ನಿಜಸ್ವರೂಪ ಈರುಳ್ಳಿ ಸಿಪ್ಪೆ ಸುಲಿದಂತೆ ಒಂದೊಂದಾಗಿ ಬಿಚ್ಚಿಕೊಳ್ಳತೊಡಗಿದೊಡನೆ ಬೆಚ್ಚಿಬಿದ್ದರು. ವಿಚಾರಣೆಯ ನೆಪದಲ್ಲಿ ಬೆಂಗಳೂರಿಗೆ ಕರೆತಂದ ಪೊಲೀಸರು ವಾಹಿದ್ ಅವರನ್ನು ಲೇಡಿ ಕರ್ಜನ್ ಆಸ್ಪತ್ರೆ, ರಾಜೀವ್ ಗಾಂಧಿ ಆಸ್ಪತ್ರೆ ಎಂದೆಲ್ಲಾ ಸುತ್ತಾಡಿಸತೊಡಗಿದಾಗ ವೈದ್ಯರ ಬಳಿ, ಡಾ. ಮಾಲಿನಿ ಅವರ ಬಳಿ ತಾನು ನಿರಪರಾಧಿ, ಯಾವುದೇ ಬಗೆಯ ಅಪರಾಧ ಮಾಡಿಲ್ಲ ನನ್ನನ್ನು ಪರೀಕ್ಷಿಸಿ ಎಂದು ಬೇಡಿಕೊಂಡರು. ಆದರೆ ಅಲ್ಲಿ ನಡೆಯುತ್ತಿದ್ದ ಪಿತೂರಿಯೇ ಬೇರೆ ತೆರನಾಗಿತ್ತು, ಎಟಿಎಸ್‌ನ ಹಿರಿಯ ಅಧಿಕಾರಿಗಳು ಈ ಅಪರಾಧಿಗೆ ಯಾವ ಪ್ರಶ್ನೆ ಕೇಳಬೇಕು ಮತ್ತು ಈ ಅಪರಾಧಿಯಿಂದ ಯಾವ ಉತ್ತರವನ್ನು ಪಡೆದುಕೊಳ್ಳಬೇಕೆಂದು ತಮ್ಮೊಳಗೆ ವಿಚಾರಣೆ ಪೂರ್ವದಲ್ಲಿಯೇ ನಿಷ್ಕರ್ಷ ಮಾಡಿಕೊಳ್ಳತೊಡಗಿದರು ಮತ್ತು ಹಂಚಿಕೊಳ್ಳತೊಡಗಿದ್ದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ಅಬ್ದುಲ್ ವಾಹಿದ್ ಅವರಿಗೆ ಆತಂಕವಾಗತೊಡಗಿತು. "ಎಟಿಎಸ್ ಪೊಲೀಸ್ ಅಧಿಕಾರಿಗಳ ನಿರ್ದೇಶನದಂತೆ ವೈದ್ಯರು ವರ್ತಿಸಿದರು, ನನ್ನ ಪ್ರಶ್ನೆಗಳನ್ನು ತಿರುಚಲಾಯಿತು ಮತ್ತು ಉತ್ತರಗಳನ್ನು ಅವರೇ ಕಟ್ಟುತ್ತಿದ್ದರು" ಎಂದು ಗುರುತರ ಆಪಾದನೆ ಮಾಡಿದರು. ಮಂಪರು ಪರೀಕ್ಷೆ ಎನ್ನುವುದು ಒಂದು ಮೋಸ ಲೊಳಲೊಟ್ಟೆ, ನಿರಪರಾಧಿಗಳನ್ನು ಅಪರಾಧಿಗಳೆಂದು ಸಾಬೀತುಪಡಿಸಲು ಬಳಸಿಕೊಳ್ಳಲಾಗುವ ಒಂದು ಕುತಂತ್ರ ವಿಧಾನ ಎಂದು ಕಟುವಾಗಿ ಟೀಕಿಸಿದರು.

ವಾಹಿದ್ ಅವರು "ಈ ಮಂಪರು ಪರೀಕ್ಷೆಯಲ್ಲಿ ಕಾನೂನುಬದ್ಧ ಮತ್ತು ಕಾನೂನುಬಾಹಿರ ಎನ್ನುವ ಎರಡು ವಿಧಾನಗಳಿವೆ. ಇಲ್ಲಿ ಕೋರ್ಟಿನ ಅನುಮತಿ ಪಡೆದುಕೊಂಡು ವೈದ್ಯರು ನಡೆಸುವ ಮಂಪರು ಪರೀಕ್ಷೆ ತಾಂತ್ರಿಕವಾಗಿ ಕಾನೂನುಬದ್ಧವಾಗಿರುತ್ತದೆ ಆದರೆ ಇಲ್ಲಿ ಸುಳ್ಳುಗಳ, ವಂಚನೆಗಳ ಪ್ರಶ್ನೋತ್ತರಗಳನ್ನು ನಡೆಸಲಾಗುತ್ತದೆ. ನಿರಪರಾಧಿಯನ್ನು ಅಪರಾಧಿಯೆಂದು ಮೊದಲೇ ನಿರ್ಧರಿಸಲಾಗುತ್ತದೆ ಅದನ್ನು ಸಾಬೀತುಪಡಿಸಲು ಪಿತೂರಿ ಹೆಣೆಯಲಾಗುತ್ತದೆ. ಈ ಅಧಿಕೃತ ಮಂಪರು ಪರೀಕ್ಷೆಯನ್ನು ನಾನು ಕಾನೂನುಬಾಹಿರ ಎಂದೇ ಕರೆಯುತ್ತೇನೆ. ಆದರೆ ಜೈಲಿನಲ್ಲಿ ಕಸ್ಟಡಿಯಲ್ಲಿ ಪೊಲೀಸ್ ಅಧಿಕಾರಿಗಳು ನಡೆಸುವ ಮಂಪರು ಪರೀಕ್ಷೆ ಕಾನೂನುಬಾಹಿರವಾಗಿರುತ್ತದೆ, ಈ



ಮಂಪರು ಪರೀಕ್ಷೆಗೆ ಕೋರ್ಟಿನ ಅನುಮತಿ ಇರುವುದಿಲ್ಲ, ಅನಧಿಕೃತವಾಗಿರುತ್ತದೆ. ಆದರೆ ಈ ಅನಧಿಕೃತ ಮಂಪರು ಪರೀಕ್ಷೆಯಲ್ಲಿ ಸುಳ್ಳು ಪ್ರಶ್ನೋತ್ತರಗಳಿರುವುದಿಲ್ಲ, ಎಲ್ಲವೂ ನೇರಾನೇರವಾಗಿರುತ್ತದೆ. ಪೊಲೀಸರು ನೇರವಾದ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಆರೋಪಿಗಳು ನೇರವಾಗಿಯೇ ಉತ್ತರಿಸುತ್ತಾರೆ. ಈ ಅನಧಿಕೃತ ಮಂಪರು ಪರೀಕ್ಷೆಯನ್ನು ನಾನು ಕಾನೂನುಬದ್ಧ ಎಂದೇ ಪ್ರತಿಪಾದಿಸುತ್ತೇನೆ" ಎಂದು ವಿವರಿಸುತ್ತಾ ಹೋದಂತೆ ನಾವೆಲ್ಲಾ ದಂಗುಬಡಿದು ಒಂದು ಚಣ ತಪ್ಪೊಪ್ಪಿಗೆಯ ವಿಚಾರಣೆ ಎನ್ನುವ ಮೋಸದ ಆ ಯಾತನಾಲೋಕದೊಂದಿಗೆ ಮುಖಾಮುಖಿಯಾದಂತಿತ್ತು.

ಪೊಲೀಸ್ ಕಸ್ಟಡಿಯಲ್ಲಿ ತಾವು ಮೂರನೇ ದರ್ಜೆಯ ಚಿತ್ರಹಿಂಸೆಗೆ ಗುರಿಯಾಗಿದ್ದನ್ನು ಎಳೆಎಳೆಯಾಗಿ ಬಿಡಿಸುತ್ತಾ ಹೋದ ವಾಹಿದ್ ಅವರು ಪೊಲೀಸರು ಯಾವ ಯಾವ ಬಗೆಯಲ್ಲಿ ನಕಲಿ ಕತೆಗಳನ್ನು ಸೃಷ್ಟಿಸುತ್ತಾರೆ ಎಂದು ವಿವರಿಸಿದರು. ಬಾಂಬ್‌ಅನ್ನು ಸ್ಫೋಟಿಸಿದ್ದಾರೆ ಎಂದು ಹೇಳುವುದರ ಮೂಲಕ ಈ ತನಿಖೆ ಪೂರ್ಣಗೊಳ್ಳುವುದಿಲ್ಲ, ಅಥವಾ ಬಾಂಬ್‌ಅನ್ನು ಸ್ಫೋಟಿಸಿಲ್ಲ ಎಂದು ಘೋಷಿಸುವುದರ ಮೂಲಕವೂ ಇಡೀ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುವುದಿಲ್ಲ, ಬಾಂಬ್ ಸ್ಫೋಟಿಸಿ ದ್ದಾರೆ ಅನ್ನುವುದಾದರೆ ಹೇಗೆ ಸ್ಫೋಟಿಸಿದ್ದಾರೆ ಎನ್ನುವುದನ್ನು ದಾಖಲೆ ಸಮೇತ ಕೋರ್ಟ್ ಮುಂದೆ ಸಾಬೀತು ಪಡಿಸಬೇಕಾಗುತ್ತದೆ, ಸಾಕ್ಷಿಗಳನ್ನು ಹಾಜರುಪಡಿಸಬೇಕಾಗುತ್ತದೆ. ಒಂದು ವೇಳೆ ಸ್ಫೋಟಿಸಿಲ್ಲ ಎನ್ನುವುದಾದರೆ ಯಾಕೆ ಸ್ಫೋಟಿಸಿಲ್ಲ, ಆ ಸಂದರ್ಭದಲ್ಲಿ ಇವರೆಲ್ಲ ಎಲ್ಲಿದ್ದರು ಅದರ ವಿವರಗಳನ್ನು ನೀಡಬೇಕಾಗುತ್ತದೆ. ಇಡೀ ವಿಚಾರಣೆಯ ಪ್ರಕ್ರಿಯೆಯಲ್ಲಿ ಮೂರು ವಿಧಾನಗಳನ್ನು ಅನುಸರಿಸಲಾಗುತ್ತದೆ. ಮೊದಲನೆಯದಾಗಿ ತಪ್ಪೊಪ್ಪಿಗೆಯ ಹೇಳಿಕೆ. ಟಾಡಾದ ಸೆಕ್ಷನ್ 15, ಪೋಟಾದ ಸೆಕ್ಷನ್ 32 ಮತ್ತು ಮೋಕಾದ ಸೆಕ್ಷನ್ 80ರ ಅಡಿಯಲ್ಲಿ ಈ ತಪ್ಪೊಪ್ಪಿಗೆಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗುತ್ತದೆ. ಮೇಲ್ನೋಟಕ್ಕೆ ಈ ಮೂರು ಭಯಾನಕ ಕಾಯಿದೆಗಳು ಬೇರೆಬೇರೆಯಾದರೂ ಆಳದಲ್ಲಿ ಎಲ್ಲವೂ ಒಂದೇ ಆಗಿರುತ್ತವೆ. ಬಂಧಿತ ಆರೋಪಿಗಳು ಪ್ರಾಯಶ್ಚಿತ್ತ ಮಾಡಿಕೊಳ್ಳಲು ಬಯಸಿದರೆ ಈ ಬಗೆಯ ಕಾಯಿದೆಗಳನ್ನು ಬಳಸಿಕೊಂಡು ಬಂಧಿತರ ತಪ್ಪೊಪ್ಪಿಗೆಯ ಮೂಲಕ ಆರೋಪ ಸಾಬೀತುಪಡಿಸುತ್ತಾರೆ.


ವಾಹಿದ್ ಅವರು "ನನ್ನ ಜೀವಮಾನದಲ್ಲಿ ಅದರಲ್ಲೂ ನನ್ನ 9 ವರ್ಷಗಳ ಜೈಲುವಾಸದಲ್ಲಿ ಒಬ್ಬನೇ ಒಬ್ಬ ಆರೋಪಿಯು ಪಶ್ಚಾತ್ತಾಪ ಪಟ್ಟು ತಪ್ಪೊಪ್ಪಿಕೊಂಡಿದ್ದನ್ನು ನಾನು ಕಾಣಲಿಲ್ಲ, ಆದರೆ ದೊಡ್ಡ ದೊಡ್ಡ ಉದ್ಯಮಿಗಳು, ಪಾತಕಿಗಳು, ಭೂಗತ ಲೋಕದ ಡಾನ್‌ಗಳಿಗೆ ಈ ಮೇಲಿನ ಮೂರು ಕಾಯ್ದೆಗಳು, ತಪ್ಪೊಪ್ಪಿಗೆ ಅನ್ವಯವಾಗುವುದೇ ಇಲ್ಲ, ಅವರೆಲ್ಲಾ ತಮ್ಮ ಪ್ರಭಾವ ಬಳಸಿಕೊಂಡು ಕಾನೂನಿನ ಕುಣಿಕೆಯಿಂದ ಪಾರಾಗುತ್ತಾರೆ. ಆದರೆ ಅಮಾಯಕರು, ಅಸಹಾಯಕರಾಗಿ ಈ ತಪ್ಪೊಪ್ಪಿಗೆ ಎನ್ನುವ ನಕಲಿ ಪ್ರಹಸನಕ್ಕೆ, ಮೋಸದಾಟಕ್ಕೆ ಬಲಿಯಾಗುತ್ತಾರೆ. ಎಟಿಎಸ್‌ನ ಪೊಲೀಸ್ ಅಧಿಕಾರಿಗಳು ಸುಮಾರು 50 ಪುಟಗಳಷ್ಟು ತಪ್ಪೊಪ್ಪಿಗೆಯ ಹೇಳಿಕೆಯನ್ನು ಇಂಗ್ಲಿಷ್ ಭಾಷೆಯಲ್ಲಿ (ಬಹುಪಾಲು ಆರೋಪಿ ಗಳಿಗೆ ಇಂಗ್ಲಿಷ್ ಓದಲು ಬರುವುದಿಲ್ಲ) ಬರೆದು ಕೊಂಡು ಬಂದು ಆರೋಪಿಗಳಿಂದ ಒತ್ತಾಯಪೂರ್ವಕವಾಗಿ, ಒಂದುವೇಳೆ ಸಹಿ ಹಾಕಲು ನಿರಾಕರಿಸಿದರೆ ಥರ್ಡ್‌ಡಿಗ್ರಿ ಹಿಂಸೆಯನ್ನು ನೀಡುವುದರ ಮೂಲಕ ತಪ್ಪೊಪ್ಪಿಗೆಯ ಸಹಿಯನ್ನು ಪಡೆದುಕೊಳ್ಳುತ್ತಾರೆ. ಒಂದುವೇಳೆ ಈ ಹಿಂಸೆಗೂ ಬಗ್ಗದಿದ್ದಲ್ಲಿ ಆರೋಪಿಗಳ ಹೆಂಡತಿ, ಮಕ್ಕಳು, ತಂದೆ ತಾಯಿ, ಸಂಬಂಧಿಕರನ್ನು ಜೈಲಿಗೆ ಕರೆತಂದು ಕೀಳು[...] ಸಂಬೋಧಿಸುತ್ತ ಅವಮಾನಿಸುತ್ತಾರೆ. ಈ ತ[...] ಎನ್ನುವುದು ನಿರಪರಾಧಿಗಳನ್ನು ಕಾನೂನಿನ ಕು[...] ಸಿಲುಕಿಸುವ ಅತ್ಯಂತ ಪ್ರಬಲವಾದ ಆಯುಧ[...] ಎಂದು ವಿವರಿಸಿದರು.

ಮುಂದುವರೆದು ವಾಹಿದ್ ಅವರು "ಎರಡನೆ[...] ಪುನರ್ವಶ ಮಾಡಿಕೊಂಡ ಸ್ಫೋಟಕ್ಕೆ ಸಂಬಂಧಿತ ವ[...] ಈ ಸ್ಫೋಟಕ ಸಂಬಂಧಿತ ವಸ್ತುಗಳಾದ ರಿ[...] ಆರ್‌ಡಿಎಕ್ಸ್ ಬಾಂಬ್, ಸಿಮಿ ಉಗ್ರ ಸಂಘ[...] ಮಾನಿಫೆಸ್ಟೋ, ಇಂಡಿಯಾ-ಬಾಂಗ್ಲಾ ದೇಶ[...] ಇತ್ಯಾದಿಗಳು ಬಂಧಿಸಿದ ಆರೋಪಿಗಳ ಮ[...] ದೊರೆತವು ಎನ್ನುವ ಸುಳ್ಳು ಸುದ್ದಿಯನ್ನು ಪೊ[...] ತಮ್ಮ ಮನಸ್ಸಿಗೆ ತೋಚಿದಂತೆ ದಾಖಲಿಸಿದರೂ[...] ಅದು ಬಲವಾದ ಸಾಕ್ಷಿಯಾಗಿ ಪರಿಗಣನೆಯಾ[...] ಮೂರನೆಯದಾಗಿ ಹುಸಿಯಾದ, ನಿಜವಲ್ಲದ [...] ತಯಾರಿ. ಈ ಸಾಕ್ಷಿಗಳಲ್ಲಿ ಪ್ರಮುಖವಾಗಿ [...] ಬಗೆಯಲ್ಲಿರುತ್ತಾರೆ. ಮೊದಲನೆಯ ವರ್ಗವೆಂದರೆ ಪೊ[...] ಮಾಹಿತಿದಾರರು. ಈ ಮಾಹಿತಿದಾರರನ್ನು ನ್ಯಾಯಾ[...] ಸಾಕ್ಷಿಗಳೆಂದು ಹಾಜರುಪಡಿಸುತ್ತಾರೆ. ಎರ[...] ವರ್ಗವೆಂದರೆ ಇತರೆ ಧರ್ಮದ ಜನರು. ಈ[...] ಧರ್ಮದ ಜನರು ತಮ್ಮನ್ನು ಈ ಕೇಸಿನಲ್ಲಿ ಸಿಲುಕಿ[...] ಎಂದು ಬೇಡಿಕೊಂಡು ಅದರಿಂದ ಪಾರಾಗಲು[...] ಸಾಕ್ಷಿ ನೀಡಲು ತಯಾರಾಗುತ್ತಾರೆ. ಮೂರನೆಯ ವರ್[...] ನಮ್ಮದೇ ಧರ್ಮದ ಜನ. ಪೊಲೀಸರ ಚಿ[...] ಅತ್ಯಾಚಾರ, ನಕಲಿ ಎನ್‌ಕೌಂಟರ್ ಮುಂತಾದವು[...] ಪಾರಾಗಲು ಅಸಹಾಯಕರಾಗಿ ಸುಳ್ಳು ಸಾಕ್ಷಿ[...] ನ್ಯಾಯಾಲಯದಲ್ಲಿ ಹಾಜರಾಗುತ್ತಾರೆ. ಕಡೆಗೆ ಇಡೀ ಪ[...] 'ಇಂಡಿಯನ್ ಮುಜಾಹಿದ್ದೀನ್' ಎನ್ನುವ [...] ಸಂಘಟನೆಯ ಕೊಂಡಿಯೂ ತಳುಕು ಹಾಕಿಕೊಂಡಿದೆ[...] ಏಳು ರಾಜ್ಯಗಳ ದೆಹಲಿ, ಮಹಾರಾಷ್ಟ್ರ, ಕರ್ನಾಟಕ[...] ಪ್ರದೇಶ, ಕೇರಳ, ಉ.ಪ್ರ. ಪೊಲೀಸರು ಈ 7/11 ಸ್ಫೋಟದಲ್ಲಿ ಇಂಡಿಯನ್ ಮುಜಾಹಿದ್ದೀನ್ ಸಂಘ[...] ಕೈವಾಡ ಇದೆ ಎಂದು ಲಿಖಿತ ಹೇಳಿಕೆ ನೀ[...] ಆದರೂ ಸಹ ಈ ಎಟಿಎಸ್ ಅಧಿಕಾರಿಗಳು ನ[...] ಅಪರಾಧಿಗಳೆಂದು, ಇವರಿಗೆ ಗಲ್ಲು ಶಿಕ್ಷೆ ನೀಡಬ[...] ವಾದ ಮಂಡಿಸುತ್ತಾರೆ" ಎಂದು ಹೇಳಿದರು.

ತಮ್ಮ ಮಾತುಗಳನ್ನು ಮುಗಿಸುತ್ತಾ ಅಬ್ದುಲ್ ವಾ[...] ಶೇಕ್ "ನನ್ನೊಂದಿಗೆ ಬಂಧಿತರಾದ ಉಳಿದ[...] ಆರೋಪಿಗಳು ಗಲ್ಲು ಶಿಕ್ಷೆಗೆ ಗುರಿಯಾಗಿ ಜ[...] ಕೊಳೆಯುತ್ತಿದ್ದಾರೆ. ನಿಮಗೆ ನಾನು ಹೇಳುತ್ತೇನೆ ಅ[...] ನಿರಪರಾಧಿಗಳು. ನಾನು ಅವರಿಗಿಂತ ಕಡಿಮೆ ನಿರ[...] They are more innocent tham[...] ಅವರೆಲ್ಲರೂ ಬಿಡುಗಡೆ ಆಗುವವರೆಗೂ ನನ್ನ ಹೋ[...] ಜಾರಿಯಲ್ಲಿರುತ್ತದೆ. ಮುಸಲ್ಮಾನರು ದೇಶದ್ರೋಹಿ[...] ಅವರು ದೇಶದ್ರೋಹಿಗಳಾಗಿದ್ದರೆ ಜೈಲಿನಿಂದ ಹೊ[...] ನಾನು ಲೇಖನಿಯನ್ನು ಕೈಗೆತ್ತಿಕೊಳ್ಳುತ್ತಿರಲಿಲ್ಲ ಹಫೀಜ" ಎಂದು ಮಾರ್ಮಿಕವಾಗಿ ನುಡಿದರು.

ಬಿಡುಗಡೆಯಾದ ನಂತರ ಅಬ್ದುಲ್ ವಾಹಿದ್ ತಮ್ಮ ಶಿಕ್ಷಕ ವೃತ್ತಿಗೆ ಮರಳಿದ್ದಾರೆ. ಅಂಜುಮನ್-ಎ[...] ಶಾಲೆಯ ಆಡಳಿತ ಮಂಡಳಿ ವಾಹಿದ್ ಅವರಿಗೆ[...] ಗೌರವ ಆದರಗಳಿಂದ ಶಿಕ್ಷಕ ಹುದ್ದೆಗೆ ನ[...] ಮಾಡಿಕೊಂಡಿದೆ.

ನಂತರ ಮಾತನಾಡಿದವರು ಮತ್ತೊಬ್ಬ "ಶಾಶ್ವತ[...] ರಲ್ಲಿ ಒಬ್ಬರಾದ ಮಹಮ್ಮದ್ ಅಮೀರ್ ಖಾನ್. ಡಿ[...] 1996-1997ರ ನಡುವೆ ದೆಹಲಿ, ರೋ[...] ಘಾಜಿಯಾಬಾದ್, ಸೋನಪೇಟ್ ಪಟ್ಟಣಗಳಲ್ಲಿ ಉ[...] ಬಾಂಬ್ ಸ್ಫೋಟಗಳ (5 ಜನ ತೀರಿಕೊಂಡ[...] ರೂವಾರಿಯಲ್ಲೊಬ್ಬರು ಎಂದು ಅಮೀರ್ ಖಾನ್ ಅ[...]



ುಸಿದ ಪೊಲೀಸರು ಅವರ ಮೇಲೆ ಕೊಲೆ, ೋತ್ಪಾದನೆ, ದೇಶದ್ರೋಹದ ಆಪಾದನೆಗಳನ್ನೊಳಗೊಂಡ ಾರು 19 ಕೇಸುಗಳನ್ನು ಹಾಕುತ್ತಾರೆ. ಫೆಬ್ರವರಿ 1998ರ ಯ ಹೊತ್ತು, ದೆಹಲಿಯ ಓಣಿಯೊಂದರಲ್ಲಿ 20ರ ುದ ಅಮೀರ್ ಖಾನ್ ಅವರನ್ನು ಹಠಾತ್ತಾಗಿ ್ಷವರದ ಮಫ್ತಿಯಲ್ಲಿದ್ದ ಪೊಲೀಸರು ಯಾವುದೇ ೂಚನೆ, ಬಂಧನದ ವಾರೆಂಟ್ ನೀಡದೆ ಕಣ್ಣಿಗೆ ಬಟ್ಟೆ ಕಟ್ಟಿ ಹೊತ್ತೊಯ್ಯುತ್ತಾರೆ. ನಂತರದ್ದು ಒಂದು ನಾಮಯ ಕತೆ. 14 ವರ್ಷಗಳ ಕಾಲ ದೆಹಲಿಯ ್ ಜೈಲ್, ಘಜಿಯಾಬಾದ್ ಜೈಲ್‌ಗಳಲ್ಲಿ ಶಂಕಿತ ಎನ್ನುವ ಆರೋಪದ ಅಡಿಯಲ್ಲಿ ಕೈದಿಯಾಗಿ ನದಲ್ಲಿದ್ದರು. ಅನೇಕ ಬಗೆಯ ಚಿತ್ರಹಿಂಸೆಗೆ ಯಾದರು (ವಿವಸ್ತ್ರಗೊಳಿಸಿ ನಗ್ನ ದೇಹದ ಮೇಲೆ ಎಲೆಕ್ಟ್ರಿಕ್ ಷಾಕ್ ಇತ್ಯಾದಿ ಬರೆಯಲು ಸಾಧ್ಯವೇ ದಷ್ಟು ಕ್ರೌರ್ಯ). ಮೂರು ವರ್ಷಗಳ ನಂತರ 1ರಲ್ಲಿ ಅಮೀರ್ ಅವರ ತಂದೆ ಹಸೀಮ್ ಖಾನ್ ದಲ್ಲಿ ಕೊರಗಿ ತೀರಿಕೊಂಡಿದ್ದರು. ಸಂಬಂಧಿಕರು ರವಾಗಿದ್ದರು. ಅಷ್ಟರಲ್ಲಿ 19 ಕೇಸುಗಳ ಪೈಕಿ 11 ಗಳಲ್ಲಿ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ಅಮೀರ್ ಾಸೆಗೊಂಡಿದ್ದರು. ಆದರೆ ಆ ಸಮಾಧಾನವನ್ನು ಭವಿಸಲು ಅವರ ತಂದೆ ಬದುಕಿರಲಿಲ್ಲ.


14 ವರ್ಷಗಳ ನಂತರ 19 ಕೇಸುಗಳ ಪೈಕಿ 17 ಗಳಲ್ಲಿ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ ನಿರಪರಾಧಿಯಾಗಿ ನಿಂದ ಹೊರಬಂದ ಅಮೀರ್ ಖಾನ್‌ಗೆ ಭಾರತವೇ ಾದಂತೆ ಅಚ್ಚರಿ ಹುಟ್ಟಿಸಿತ್ತು. 14 ವರ್ಷಗಳ ನಂತರ ತ ದೇಶದ ಅಗತ್ಯ ವಸ್ತುಗಳಾಗಿ ಮೆರೆದಾಡುತ್ತಿದ್ದ ಜಾಲ (ಇಂಟರ್‌ನೆಟ್) ಮತ್ತು ಮೊಬೈಲ್ ್‌ಗಳ ಬಳಕೆ, ಹೊಸಹೊಸ ಮಾಲ್‌ಗಳು, ಫ್ಲೈ ್‌ಗಳು ಬೆರಗನ್ನು ಮೂಡಿಸಿದರೆ ತಾನು ಜೈಲಿಗೆ ದಾಗ ಕೇವಲ ದೂರದರ್ಶನ ಛಾನಲ್ ಮಾತ್ರ ಕಂಡಿದ್ದ ತ ಶಂಕಿತ ಅಮೀರ್ ಖಾನ್‌ಗೆ 14 ವರ್ಷಗಳ ರ ಅಣಬೆಗಳಂತೆ ಹುಟ್ಟಿಕೊಂಡ ಖಾಸಗಿ ಚಾನಲ್‌ಗಳು ಾಮುಖಿಯಾಗಿದ್ದು ಆತನಲ್ಲಿ ಯಾವ ಭಾವನೆಗಳನ್ನು ರಬಹುದು?

ಆದರೆ ಬಿಡುಗಡೆಗೊಂಡು ಮನೆಗೆ ಬಂದ ಅಮೀರ್ ಗೆ ಎದುರಾದದ್ದು ಕಾಯಿಲೆಯಿಂದ, ಮಿದುಳು ವದಿಂದ ನರಳುತ್ತಿದ್ದ ಆತನ ಪ್ರೀತಿಯ ಅಮ್ಮ. 6 ತಿಂಗಳ ನಂತರ ಆಕೆಯೂ ತೀರಿಕೊಂಡರು. 14 ವರ್ಷಗಳ ಕಾಲ ತನಗಾಗಿ ಕಾಯುತ್ತಿದ್ದ ಕಾಲದ ಗೆಳತಿ ಅಲಿಯಾ ಆತನಲ್ಲಿ ಮತ್ತೊಮ್ಮೆ ುವ ಹುಮ್ಮಸ್ಸು, ಜೀವನಪ್ರೀತಿ ಮೂಡಿಸಿದಳು. ಾಲ್ಯ ಗೆಳತಿ ಅಲಿಯಾಳನ್ನು ಮದುವೆಯಾದ ಅಮೀರ್ ಗೆ ಈಗ ಒಬ್ಬ ಮಗಳಿದ್ದಾಳೆ. ಶಬನಮ್ ಹಷ್ಮಿ ತ್ತಿರುವ ಕೋಮು ಸೌಹಾರ್ದ ಮತ್ತು ಮಾನವ ಳಿಗಾಗಿ ಕೆಲಸ ಮಾಡುವ "ಅನ್ಹದ್" ಎನ್ನುವ ಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮ್ಮ ಮೇಲೆ ಆಪಾದನೆಗಳು ಬೆಳೆಯುತ್ತಾ ಹೋದಂತೆ ವರ್ಷಗಳ ಕಾಲ ಶಂಕಿತ ಭಯೋತ್ಪಾದಕನಾಗಿ ಯಾಸ್/ಉರ್ಫಗಳಲ್ಲಿ ಬದುಕಿದರು. ಅಮೀರ್ ಯಾಸ್ 'ಕಮ್ರಾನ್' ಅಲಿಯಾಸ್ 'ಇಮ್ರಾನ್' ಯಾಸ್ 'ಅಬು' ಉರ್ಫ 'ಆಕಾಶ್' ಅಲಿಯಾಸ್ ್' ಅಲಿಯಾಸ್ 'ಉಮರ್' ಹೀಗೆ ಅನೇಕ ಬಗೆಯ ತ ವೇಷಗಳನ್ನು ಹೊತ್ತುಕೊಂಡು 14 ವರ್ಷಗಳ ಕತ್ತಲಲ್ಲಿ, ಏಕಾಂಗಿಯಾಗಿ ಬದುಕಿ 19 ವರ್ಷಗಳ ಆ ಎಲ್ಲಾ ಅಲಿಯಾಸ್/ಉರ್ಫಗಳ ಹೆಳವಂಡಗಳಿಂದ ಡೆಗೊಂಡು ಕೇವಲ ಮಹಮ್ಮದ್ ಅಮೀರ್ ಖಾನ್ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ ಮನಬಿಚ್ಚಿ ಾಡಿದರು. ಪ್ರಾರಂಭದಲ್ಲಿ ಕೊಂಚ ಭಾವೋದ್ರೇಕಕ್ಕೆ ದ ಅಮೀರ್ ಖಾನ್ "1998ರಲ್ಲಿ ಟಾಡಾ, ಾ, ಮೋಕಾ ಕಾಯ್ದೆಗಳನ್ನು ಮುಂದಿಟ್ಟುಕೊಂಡು ಅಪಹರಿಸಲಾಯಿತು. ಅದು ಬಂಧನವಲ್ಲ, ಕಾನೂನು ಾರ ನನ್ನ ಬಂಧನವಾಗಲಿಲ್ಲ. ಅದು ರಣವಾಗಿತ್ತು, ನಮ್ಮಂತಹವರನ್ನು ಭಯೋತ್ಪಾದನೆಯ ಲ್ಲಿ ಬಂಧಿಸಿದಾಗ ನಮ್ಮ ಪರವಾಗಿ ವಕಾಲತ್ತು ಸು ವಕೀಲರು ದೊರಕುತ್ತಿರಲಿಲ್ಲ, ಸಂತ್ರಸ್ತರ ುಂಬಗಳಿಗೆ ಸಾಮಾಜಿಕ ಬಹಿಷ್ಕಾರವನ್ನು ಾಗುತ್ತಿತ್ತು, ಆದರೆ 19 ವರ್ಷಗಳ ನಂತರ ಬಹಳ ಗಿದೆ. ಮಾನವ ಹಕ್ಕುಗಳ ಪರವಾಗಿ ಅನೇಕ ಸ್ಥೆಗಳು ಹೋರಾಡುತ್ತಿವೆ. ಚರ್ಚಿಸುತ್ತಿವೆ. ಸತ್ಯವನ್ನು ಮುಂದಿಡಲು ಪ್ರಯತ್ನಿಸುತ್ತಿವೆ. 19 ವರ್ಷಗಳ ಈ ವಾತಾವರಣವಿರಲಿಲ್ಲ, ಈ ಕಾರಣಕ್ಕಾಗಿಯೇ ಜೈಲಿಗೆ ಹೋದ ಎರಡು ವರ್ಷಗಳ ನಂತರ ನನ್ನ ತೀರಿಕೊಳ್ಳುತ್ತಾರೆ. ನನ್ನ ತಾಯಿ ತಬ್ಬಲಿಯಾಗುತ್ತಾರೆ. ಪಹರಣದ ನಂತರ ಏಳು ದಿನಗಳ ಕಾಲ ಚಿತ್ರಹಿಂಸೆ ಸು. ಬಂಧನದ ಆರಂಭದ ದಿನಗಳಲ್ಲಿ ಖಾಲಿ ಳ ಮೇಲೆ ಬಲಾತ್ಕಾರದಿಂದ ನನ್ನ ಸಹಿ ಕೊಳ್ಳಲಾಗುತ್ತದೆ. ಬಂಧನದ 24 ಗಂಟೆಗಳ ಒಳಗೆ ್ರೇಟ್ ಮುಂದೆ ನನ್ನನ್ನು ಹಾಜರುಪಡಿಸಬೇಕಾಗಿತ್ತು,

⏭ 15

ಮೋದಿಯ ಲೊಳಲೊಟ್ಟೆ 'ವಿಕಾಸ'



■ ಸುರೇಶ್ ಭಟ್ ಬಾಕ್ರಬೈಲ್

ನಾನಾ ರಂಗಗಳಲ್ಲಿ ವಿಫಲವಾಗಿರುವ ಮೋದಿ ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಡುವುದಕ್ಕೋಸ್ಕರ ಇಡೀ ದೇಶದ ಗಮನವೆಲ್ಲಾ ಅಸಲಿ ವಿಚಾರಗಳಿಂದ ಆಚೆಗೆ ತಿರುಗಿಸಲು ಯತ್ನಿಸುತ್ತಿದೆ. ಇದೇ ಪ್ರಯತ್ನಗಳ ಭಾಗವಾಗಿ ತುತ್ತೂರಿ ಮಾಧ್ಯಮಗಳಲ್ಲಿ ಗೋಮಾಂಸ ಭಕ್ಷಣೆ, ಲವ್ ಜಿಹಾದ್, ರಾಷ್ಟ್ರೀಯತೆ, ಗಡಿ ಸಂಘರ್ಷಗಳಂತಹ ಭಾವನಾತ್ಮಕ ವಿಚಾರಗಳ ಕುರಿತ ರೋಚಕ ಸುದ್ದಿಗಳು ಮತ್ತು ಗಲಾಟೆ, ಗದ್ದಲಗಳಿಂದ ಕೂಡಿದ ಸಂವಾದ ಕಾರ್ಯಕ್ರಮಗಳನ್ನು ಪ್ರಾಯೋಜಿಸಲಾಗುತ್ತಿದೆ. ಇದಕ್ಕೆ ದನಿಗೂಡಿಸುವ ಕೆಲಸವನ್ನು ಸಂಘ ಪರಿವಾರದ ಬೂಸಿ ಸಾಮಾಜಿಕ ಜಾಲತಾಣಗಳು, ನಕಲಿ ಫೇಸ್‌ಬುಕ್, ಟ್ವಿಟರ್, ವಾಟ್ಸಪ್ ಗುಂಪುಗಳು ಮಾಡುತ್ತಿವೆ. ಇವೆಲ್ಲವೂ ಸತ್ಯಾಂಶಗಳನ್ನು ಒಂದೋ ಮುಚ್ಚಿ ಇಲ್ಲಾ ತಿರುಚಿ ಸುಳ್ಳು ಸುದ್ದಿಗಳನ್ನು ಉತ್ಪಾದಿಸಿ ಪ್ರವಾಹೋಪಾದಿಯಲ್ಲಿ ಹರಿಬಿಡುತ್ತಿವೆ. ಈ ಗೋಬೆಲ್ಸ್ ತಂತ್ರದ ಫಲವಾಗಿ ಆರ್ಥಿಕ ಮತ್ತಿತರ ಪ್ರಮುಖ ಕ್ಷೇತ್ರಗಳಲ್ಲಿ ಆಗಿರುವ ಪೂರ್ತಿ ವೈಫಲ್ಯದ ವಿಚಾರ ಹೆಚ್ಚುಕಡಿಮೆ ತೆರೆಮರೆಗೆ ಸರಿದಿದೆ. ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿರುವ ಪುಂಖಾನುಪುಂಖ ಜಾಹೀರಾತುಗಳು, ಪ್ರಾಯೋಜಿತ ಲೇಖನಗಳು, ಸಂವಾದಗಳು ಮತ್ತು ಬೀದಿ ಬೀದಿಗಳಲ್ಲಿ ಎದ್ದಿರುವ ಫ್ಲೆಕ್ಸ್, ಕಟೌಟ್, ಬ್ಯಾನರ್‌ಗಳನ್ನು ನೋಡುವ ಅಮಾಯಕ ಮತದಾರರು ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೋದಿ ಸರ್ಕಾರ ಭಾರಿ ಅಭಿವೃದ್ಧಿ ಸಾಧಿಸಿದೆ ಎಂದೇ ನಂಬುತ್ತಿದ್ದಾರೆ. ಇವರು ವಿಷಯದ ಮತ್ತೊಂದು ಮಗ್ಗುಲನ್ನು ತಿಳಿಯುವ ಗೋಜಿಗೆ ಹೋಗದಿರುವುದರಿಂದ ಇವರಿಗೆ ನೈಜ ಪರಿಸ್ಥಿತಿಯ ಅರಿವಾಗುತ್ತಿಲ್ಲ. ಕಳೆದ ಮೂರು ವರ್ಷಗಳ ಮೋದಿ ಆಡಳಿತದಲ್ಲಿ ನಡೆದಿರುವುದನ್ನೆಲ್ಲಾ ವಿಶ್ಲೇಷಣೆಗೊಳಪಡಿಸಿದಾಗ, ಪ್ರಮುಖ ಕ್ಷೇತ್ರಗಳಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮ ಅವಲೋಕನಕ್ಕೆ ಒಡ್ಡಿದಾಗ ಪ್ರಚಾರ ಮತ್ತು ಅಸಲಿ ಪರಿಸ್ಥಿತಿ ಮಧ್ಯದ ಅಗಾಧ ವ್ಯತ್ಯಾಸಗಳ ಚಿತ್ರಣವೊಂದು ನಮ್ಮ ಮುಂದೆ ತೆರೆಯುತ್ತದೆ. ದೇಶದ ಮಹತ್ವದ ರಂಗಗಳ ಲ್ಲೊಂದಾದ ಆರ್ಥಿಕ ವ್ಯವಸ್ಥೆಯ ನಿರ್ವಹಣೆಯನ್ನು ಪರಿಶೀಲಿಸಿದಾಗ ಮೋದಿ ಸರ್ಕಾರದ ಹೇಳಿಕೆಗಳೆಲ್ಲಾ ಬರೀ ಲೊಳಲೊಟ್ಟೆ ಎನ್ನುವುದು ಸ್ಪಷ್ಟವಾಗುತ್ತದೆ.

ಕೃಷಿವಲಯ


ಮೋದಿ ಸರ್ಕಾರ ಇಂದು ಆರ್ಥಿಕ ರಂಗದಲ್ಲಿನ ವೈಫಲ್ಯಗಳನ್ನು ಮುಚ್ಚಿಟ್ಟು ಅಂಕಿಅಂಶಗಳಲ್ಲಿ ಆಟವಾಡಿ ಜಿಡಿಪಿ ದರದಲ್ಲಿ ಹೆಚ್ಚಳವಾಗಿದೆ ಎಂದು ಬಿಂಬಿಸಲು ಹೊರಟಿರುವುದನ್ನು ಗಮನಿಸಬಹುದು. ಮೋದಿ ಸರ್ಕಾರದ ಆಡಳಿತದಲ್ಲಿ ಜಿಡಿಪಿ (ನಿವ್ವಳ ದೇಶೀಯ ಉತ್ಪನ್ನ) ದರಗಳು ಎಂದರೆ ಸಟೆಗಳ ಫ್ಯಾಕ್ಟರಿಯ ಉತ್ಪನ್ನಗಳಂತಾಗಿದೆ. ಆದರೆ ಅದೆಷ್ಟೇ ಪ್ರಯತ್ನಪಟ್ಟರೂ ಕೆಲವೊಂದು ಸತ್ಯಾಂಶಗಳನ್ನು ಮರೆಮಾಚಲು ಸಾಧ್ಯವಾಗಿಲ್ಲ. ಸರಿಯಾಗಿ ಗಮನಿಸಿದರೆ ಅದರ ಹುಳುಕುಗಳೆಲ್ಲ ಬಯಲಾಗುತ್ತವೆ. ಕೃಷಿವಲಯವನ್ನು ತೆಗೆದುಕೊಂಡರೆ ಕೃಷಿ ಕಾರ್ಮಿಕರ, ರೈತರ, ಬಂಡವಾಳಿಗ ರೈತರ, ಊಳಿಗಮಾನ್ಯ ಹಾಗೂ ಬಂಡವಾಳಿಗ ಭೂಮಾಲಿಕರ ಆದಾಯಗಳ ಮೂಲವೆ ಕೃಷಿವಲಯದ ಜಿಡಿಪಿ. ಇವರಲ್ಲಿ ಕೆಲವು ಬಂಡವಾಳಿಗ ರೈತರು ಮತ್ತು ಭೂಮಾಲಿಕರಿಗೆ ವ್ಯಾಪಾರ, ಸಿನಿಮಾ, ಶಿಕ್ಷಣಸಂಸ್ಥೆಗಳು, ಸರಕು ಸಾಗಾಟಗಳಂತಹ ವಾಣಿಜ್ಯ ಚಟುವಟಿಕೆಗಳಿಂದ ಬರುವ ಕೃಷಿಯೇತರ ಆದಾಯಗಳೂ ಇರಬಹುದು. ಆದರೆ ಇಂಥವರ ಸಂಖ್ಯೆ ಕಡಿಮೆ. ಕೃಷಿವಲಯದ ಜಿಡಿಪಿಯಲ್ಲಿ ಇವರ ಪಾಲು ಕಡಿಮೆಯಾಗದಿದ್ದರೆ ಒಂದನ್ನಂತೂ ಊಹಿಸಿಕೊಳ್ಳಬಹುದು. ಅದೇನೆಂದರೆ ಕೃಷಿಯನ್ನು ಅವಲಂಬಿಸಿರುವವರ ನಿವ್ವಳ ಆದಾಯಗಳು ಕಡಿಮೆಯಾದಾಗ ಸಹಜವಾಗಿ ಕೃಷಿವಲಯದ ಜಿಡಿಪಿಯಲ್ಲಿ ಇಳಿಕೆಯಾಗುತ್ತದೆ. ವಾಸ್ತವದಲ್ಲಿ ಆಗಿರುವುದೂ ಅದೇ.

2014-15 ಮತ್ತು 2015-16ರಲ್ಲಿ ಬರಗಾಲದ ಕಾರಣಕ್ಕೆ ಬೆಳೆ ಅಷ್ಟೊಂದು ಚೆನ್ನಾಗಿಲ್ಲ. ಆದರೆ 2016-17ರಲ್ಲಿ ಉತ್ತಮ ಬೆಳೆಯಾಗಿರುವುದನ್ನು ಯಾರೂ ಅಲ್ಲಗಳೆಯುವುದಿಲ್ಲ. ಆದುದರಿಂದ 2013-14 ಮತ್ತು 2016-17ರ ಮಧ್ಯೆ ಹೋಲಿಕೆ ಮಾಡುವುದು ತಪ್ಪಾಗದು. ಈ ಮೂರು ವರ್ಷಗಳ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಕೃಷಿ ಆಧಾರಿತ ಜನರ ಸಂಖ್ಯೆಯಲ್ಲಿ ವಿಶೇಷ ಬದಲಾವಣೆಗಳಾಗುವ ಸಾಧ್ಯತೆಗಳಿಲ್ಲ. ,ಆದುದರಿಂದ ಕೃಷಿಯನ್ನು ಅವಲಂಬಿಸಿರುವ ಜನಸಂಖ್ಯೆಯ ಬೆಳವಣಿಗೆ ಇಡೀ ದೇಶದ ಜನಸಂಖ್ಯೆಯ ಬೆಳವಣಿಗೆಗೆ ಸಮನಾಗಿದೆ ಎಂದು ಹೇಳಬಹುದು. ಇದರೊಂದಿಗೆ ಕಾರ್ಮಿಕರು ಮತ್ತು ಒಟ್ಟು ಜನಸಂಖ್ಯೆ ನಡುವಿನ ನಿಷ್ಪತ್ತಿ ಇತರೆಲ್ಲಾ ಕ್ಷೇತ್ರಗಳಲ್ಲಿ ಒಂದೇ ವಿಧದಲ್ಲಿ ಇರುವಂತೆ ಕೃಷಿರಂಗದಲ್ಲಿಯೂ ಇರಬೇಕು ಎಂದು ಊಹಿಸಿಕೊಂಡರೆ ದೇಶದ ಒಟ್ಟು ಕಾರ್ಮಿಕರ ಪೈಕಿ ಅರ್ಧದಷ್ಟು ಮಂದಿ ಕೃಷಿವಲಯದಲ್ಲಿ ದುಡಿಯುತ್ತಿರುವುದಾಗಿ ತಿಳಿಯುತ್ತದೆ.

ಈಗ 2013-14ರಿಂದ 2016-17ರ ವರೆಗಿನ ಮೂರು ವರ್ಷಗಳ ಅವಧಿಯಲ್ಲಿ ತಲಾ ಜಿಡಿಪಿ ಕೊಡುಗೆಯಲ್ಲಿ ಶೇಕಡಾ 16ರಷ್ಟು ಹೆಚ್ಚಳ ಆಗಿದೆ ಎಂದು ಮೋದಿ ಸರ್ಕಾರ ಕೊಚ್ಚಿಕೊಳ್ಳುತ್ತಿದೆ. ಆದರೆ ಇದೇ ಅವಧಿಯಲ್ಲಿ ಗ್ರಾಮೀಣ ಭಾರತದ ಗ್ರಾಹಕ ಬೆಲೆ ಸೂಚ್ಯಂಕದಲ್ಲಿಯೂ (Consumer Price Index) ಏರಿಕೆಯಾಗಿದ್ದು ಶೇಕಡಾ 16.8ಕ್ಕೆ ತಲುಪಿದೆ. ಇದರರ್ಥ ಏನೆಂದರೆ ಈ ಅವಧಿಯಲ್ಲಿ ಕೃಷಿ ಆಧಾರಿತ ಜನರ ತಲಾ ನೈಜ ಆದಾಯದಲ್ಲಿ ಶೇಕಡಾ 0.8ರಷ್ಟು (16.8 - 16) ಇಳಿಕೆಯಾಗಿದೆ. ಅಲ್ಲಿಗೆ ದೇಶದ ಅರೆಪಾಲು ಜನರ ನೈಜ ಆದಾಯ ಕಡಿಮೆಯಾಗಿದೆ ಎಂದಾಯಿತು. ಇದೊಂದು ಭಾರಿ ಮಹತ್ವದ ವಿಷಯ.

ಕೃಷಿಯೇತರ ಕ್ಷೇತ್ರ

ಕೃಷಿಯೇತರ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಉತ್ಪಾದನೆ ಮತ್ತು ಉದ್ಯೋಗಗಳು ಬೇಡಿಕೆಯನ್ನು ಅವಲಂಬಿಸಿವೆ.



ಈ ಬೇಡಿಕೆಯ ಒಂದು ಭಾಗ ಆಂತರಿಕವಾಗಿದ್ದು ಅದು ಇದೇ ಕ್ಷೇತ್ರದ ಉತ್ಪಾದನೆಯಿಂದ ಬರುತ್ತದೆ. ಹಾಗಾಗಿ ಉತ್ಪಾದನೆ ಏರಿಕೆಯಾದಾಗ ಆದಾಯಗಳೂ ಹೆಚ್ಚುತ್ತವೆ ಮತ್ತು ಈ ಹೆಚ್ಚಿದ ಆದಾಯಗಳು ಕ್ಷೇತ್ರದ ಉತ್ಪನ್ನಗಳಿಗೆ ಆಂತರಿಕ ಬೇಡಿಕೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ. ಹೀಗಾಗಿ ಕೃಷಿಯೇತರ ಕ್ಷೇತ್ರದ ಉತ್ಪಾದನೆಯ ನೈಜ ಪರಿಸ್ಥಿತಿಯನ್ನು ತಿಳಿಯಬೇಕಿದ್ದರೆ ಆಂತರಿಕ ಆದಾಯಗಳ ಮೇಲೆ ಹೊಂದಿರದ, ಬೇಡಿಕೆಯ ಹೊರಗಣ ಭಾಗವನ್ನು ಪರಿಗಣಿಸಬೇಕಾಗುತ್ತದೆ.

ಕೃಷಿಯೇತರ ಸರಕು ಮತ್ತು ಸೇವೆಗಳಿಗಿರುವ ಹೊರಗಣ ಬೇಡಿಕೆಯ ಒಂದು ಪ್ರಮುಖ ಅಂಶ ನಿಸ್ಸಂದೇಹವಾಗಿ ಕೃಷಿ ಆದಾಯಗಳಿಂದ ಬರುತ್ತದೆ. ಆದರೆ ಈಗಾಗಲೆ ನೋಡಿರುವಂತೆ ಮೋದಿ ಆಡಳಿತದ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ವಲಯದ ಆದಾಯಗಳ ಪ್ರಮಾಣದಲ್ಲಿ ಆಗಿರುವ ಹೆಚ್ಚಳ ಕೇವಲ 0.8 ಪ್ರತಿಶತ ಅಂದರೆ ಹೆಚ್ಚುಕಡಿಮೆ ಶೂನ್ಯ. ಇದರರ್ಥ ಈ ಅವಧಿಯಲ್ಲಿ ಬೇಡಿಕೆಯ ಈ ಭಾಗದಲ್ಲಿ ಯಾವುದೇ ಅಭಿವೃದ್ಧಿ ಆಗಿಲ್ಲ ಎಂದಾಯಿತು. ಆದುದರಿಂದ ಹೂಡಿಕೆಯನ್ನು ಬಿಟ್ಟರೆ (ಹೂಡಿಕೆಯನ್ನು ಹೊರಗಣ ಬೇಡಿಕೆಯ ಅಂಶವಾಗಿ ಪರಿಗಣಿಸಲು ಸಾಧ್ಯವಿಲ್ಲ ಏಕೆಂದರೆ ಅದು ಉತ್ಪಾದನೆಯ ಪ್ರಮಾಣದ ಮೇಲೆ ಹೊಂದಿಕೊಂಡಿದೆ) ಬೇಡಿಕೆಯ ಹೊರಗಣ ಭಾಗದಲ್ಲಿ ಉಳಿಯುವುದೆಂದರೆ ಎರಡೇ ಅಂಶಗಳು: ನಿವ್ವಳ ರಫ್ತು (ರಫ್ತಿನಿಂದ ಆಮದನ್ನು ಕಳೆದಾಗ ಉಳಿಯುವ ಅಂಶ) ಮತ್ತು ಸರ್ಕಾರದ ವೆಚ್ಚಗಳು.

ನಿವ್ವಳ ರಫ್ತು

ಕಳೆದ ಮೂರು ವರ್ಷಗಳ ದಾಖಲೆಗಳನ್ನು ಗಮನಿಸಿದರೆ ನಿವ್ವಳ ರಫ್ತಿನಿಂದ ಜನಿಸುವ ಬೇಡಿಕೆ ಮಂದಗತಿಯಲ್ಲಿರುವುದು ಕಂಡುಬರುತ್ತದೆ. ಜಾಗತಿಕ ಆರ್ಥಿಕತೆಯಲ್ಲಿ ಉಂಟಾಗಿರುವ ಬಿಕ್ಕಟ್ಟು ಮತ್ತು ಅಮೆರಿಕ ಹೆಚ್ಚೆಚ್ಚಾಗಿ ಅಳವಡಿಸಿಕೊಳ್ಳುತ್ತಿರುವ ಆರ್ಥಿಕ ರಕ್ಷಣಾ ನೀತಿಗಳೆ ಇದಕ್ಕೆ ಕಾರಣ. ಅಮೆರಿಕದ ಕಂಪೆನಿಗಳು ತಮ್ಮ ಸೇವಾವಲಯದ ಚಟುವಟಿಕೆಗಳನ್ನು ವಿದೇಶಿ ಕಂಪೆನಿಗಳಿಗೆ ಹೊರಗುತ್ತಿಗೆ ನೀಡುವ ಪ್ರಕ್ರಿಯೆಗೆ ಅಡೆತಡೆಗಳು ಎದುರಾಗಿವೆ. ಇದರ ನೇರ ಪರಿಣಾಮವೆಂದರೆ ಭಾರತದಂತಹ ದೇಶಗಳ ರಫ್ತು ಉದ್ಯಮಕ್ಕೆ ಧಕ್ಕೆಯಾಗಿದೆ.

ಸರ್ಕಾರದ ವೆಚ್ಚಗಳು

ನೈಜ ಸಮಸ್ಯೆ ಇಲ್ಲೇ ಇದೆ. ಸರ್ಕಾರದ ವೆಚ್ಚಗಳಲ್ಲಿ ಅಲ್ಪಸ್ವಲ್ಪ ಹೆಚ್ಚಳವಾಗಿದೆ ಅಷ್ಟೆ. ಅದರ ವರ್ಷಾವಾರು ಪ್ರಮಾಣ ಹೀಗಿದೆ: 2014-15ರಲ್ಲಿ 6.7%, 2015-16ರಲ್ಲಿ 7.6% ಮತ್ತು 2016-17ರಲ್ಲಿ 12.5%. ಇನ್ನು 2017-18ರ ಬಜೆಟ್ಟಿನಲ್ಲಿ ಬರೀ 6% ಹೆಚ್ಚಳದ ಪ್ರಸ್ತಾಪ ಮಾಡಲಾಗಿದೆ. ಮೇಲಿನ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದ ವೆಚ್ಚಗಳನ್ನು ಒಟ್ಟು ಜಿಡಿಪಿಯ ಅನುಪಾತವಾಗಿ ಪರಿಗಣಿಸಿದಾಗ ವೆಚ್ಚಗಳಲ್ಲಿ ಇಳಿಕೆಯಾಗುತ್ತಿರುವುದನ್ನು ಕಾಣಬಹುದು. 2016-17ರಲ್ಲಿ ವೇತನಾ ಆಯೋಗದ ಸಲಹೆ ಮೇರೆಗೆ ಆಗಿರುವಂಥಾ ಶೇಕಡಾ 12.5ರ ಹೆಚ್ಚಳದಿಂದ ಈ ಅನುಪಾತದಲ್ಲಿ ಯಾವ ಏರಿಕೆಯೂ ಆಗುವುದಿಲ್ಲ.


ಹೀಗಾಗಿ ಸಮಗ್ರವಾಗಿ ನೋಡಿದರೆ ದೇಶದಲ್ಲಿಂದು ಒಂದು ಕಡೆ ತಲಾ ಕೃಷಿ ಆದಾಯ ಹೆಚ್ಚುತ್ತಿಲ್ಲ, ಇನ್ನೊಂದು ಕಡೆ ನಿವ್ವಳ ರಫ್ತಿನಿಂದ ಜನಿಸುವ ಬೇಡಿಕೆ ಇಳಿಯುತ್ತಿದೆ. ಇಂಥಾ ಪರಿಸ್ಥಿತಿಯಲ್ಲಿ ಸರ್ಕಾರ ತನ್ನ ವೆಚ್ಚಗಳನ್ನು ಹೆಚ್ಚಿಸಬೇಕಿತ್ತು. ಸರ್ಕಾರದ ವೆಚ್ಚಗಳಲ್ಲಿ ಗಮನಾರ್ಹ ಹೆಚ್ಚಳ ಆಗಿದ್ದಿದ್ದರೆ ಬೇಡಿಕೆಯೂ ಹೆಚ್ಚಾಗಿ ಅದರ ಪರಿಣಾಮವಾಗಿ ಕೃಷಿಯೇತರ ವಲಯದಲ್ಲಿ ಉತ್ಪಾದನೆ, ಉದ್ಯೋಗಾವಕಾಶ ಎರಡರಲ್ಲೂ ಹೆಚ್ಚಳ ಆಗಬಹುದಿತ್ತು. ಆದರೆ ತದ್ವಿರುದ್ಧ ಬೆಳವಣಿಗೆ ಆಗುತ್ತಿರುವುದನ್ನು ಕಾಣಬಹುದು. ಆರೋಗ್ಯ, ಶಿಕ್ಷಣ ಮೊದಲಾದ ಕ್ಷೇತ್ರಗಳಿಗೆ ಬಜೆಟ್ ಅನುದಾನ ಕಡಿಮೆಯಾಗಿದೆ. ಮೋದಿ ಸರ್ಕಾರ ತನ್ನ ವೆಚ್ಚಗಳಲ್ಲಿ ಕಡಿತ ಮಾಡುವ ಮೂಲಕ ವಾಸ್ತವದಲ್ಲಿ ಖಾಸಗಿ ವಿತ್ತೀಯ ಬಂಡವಾಳ ಸಂಸ್ಥೆಗಳ ಓಲೈಕೆ ಮಾಡುತ್ತಿದೆ. ಇನ್ನೊಂದು ಮುಖ್ಯ ವಿಚಾರವೆಂದರೆ ಅಂತಾರಾಷ್ಟ್ರೀಯ ತೈಲ ಬೆಲೆಗಳಲ್ಲಾದ ಇಳಿಕೆಯ ಲಾಭವನ್ನು ಜನರಿಗೆ ದಾಟಿಸುತ್ತಿದ್ದರೂ ಬೇಡಿಕೆಯಲ್ಲಿ ಹೆಚ್ಚಳ ಆಗಬಹುದಿತ್ತು. ಆದರೆ ಲಾಭವನ್ನೆಲ್ಲ ಸರ್ಕಾರವೇ ಕಬಳಿಸುತ್ತಿದೆ!

ಮೋದಿ ಸರ್ಕಾರದ ಆರ್ಥಿಕ ನೀತಿಗಳಲ್ಲಿ ಹಿಂದೆಂದೂ ಇರದ ದೂರಾಲೋಚನೆಯ ಕೊರತೆ ಎದ್ದುಕಾಣುತ್ತಿದೆ. ಉದ್ಯೋಗಗಳನ್ನು ಸೃಷ್ಟಿಸುವುದಕ್ಕಾಗಿ ಎನ್ನಲಾದ ಮೇಕ್ ಇನ್ ಇಂಡಿಯ, ಸ್ಕಿಲಿಂಗ್ ಇಂಡಿಯ, ಸ್ಟಾಂಡ್ ಅಪ್ ಇಂಡಿಯ ಯೋಜನೆಗಳೆಲ್ಲವೂ ಫ್ಲಾಪ್ ಆಗಿವೆ. ಉದ್ಯೋಗಗಳ ಅಂಕಿಅಂಶಗಳನ್ನು ನೋಡಿದರೆ ಇದು ತಿಳಿಯುತ್ತದೆ. 2010 ಮತ್ತು 2011ರಲ್ಲಿ ಸಂಘಟಿತ ಆರ್ಥಿಕ ಕ್ಷೇತ್ರದಲ್ಲಿ ವರ್ಷಕ್ಕೆ 8, 9 ಲಕ್ಷ ಉದ್ಯೋಗಗಳು ಸೃಷ್ಟಿಯಾಗಿದ್ದರೆ ಈಗ ಅದು 2 ಲಕ್ಷಕ್ಕೂ ಕಡಿಮೆ ಇದೆ. ಮೂರು ವರ್ಷಗಳ ಹಿಂದೆ 2.3 ಲಕ್ಷ ಕೋಟಿಯಷ್ಟಿದ್ದ ಬ್ಯಾಂಕುಗಳ ಎನ್‌ಪಿಎ ಇಂದು 6.8 ಲಕ್ಷ ಕೋಟಿಯಷ್ಟಾಗಿದೆ. ಇನ್ನು ಕಪ್ಪುಹಣವನ್ನು ಹೊರತೆಗೆಯಲೆನ್ನಲಾದ ನೋಟು ರದ್ದತಿಯಿಂದ ಕಪ್ಪುಹಣದ ಸ್ಥಿತಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ! 2012-13ರಲ್ಲಿ ಒಟ್ಟು ಅಘೋಷಿತ ಆದಾಯ (ಕಪ್ಪು ಹಣ) ರೂ. 29,629 ಕೋಟಿ ಇದ್ದರೆ 2013-14ರಲ್ಲಿ ರೂ. 1,01,182 ಕೋಟಿಯಷ್ಟಾಗಿತ್ತು! ನೋಟು ರದ್ದತಿ ನಡೆದ 2016-17ರಲ್ಲಿ ಇದು ಇನ್ನೂ ಹೆಚ್ಚಾಗಬೇಕಿತ್ತಲ್ಲವೆ. ಆದರೆ 2016-17ರಲ್ಲಿ ಒಟ್ಟು ಅಘೋಷಿತ ಆದಾಯದ ಪ್ರಮಾಣ ಸುಮಾರು 3 ಪಟ್ಟು ಕಡಿಮೆಯಾಗಿದ್ದು ಅದೀಗ ರೂ. 31,211 ಕೋಟಿಗಿಂತ ಸ್ವಲ್ಪ ಜಾಸ್ತಿ ಇರಬಹುದಷ್ಟೆ! ನವ ಉದಾರೀಕರಣ ನೀತಿಗಳು ಸೃಷ್ಟಿಸಿರುವ ಬಿಕ್ಕಟ್ಟಿನೊಂದಿಗೆ ನೋಟು ರದ್ದತಿ ಸೇರಿದಾಗ ಆರ್ಥಿಕತೆ ಮೇಲೆ ದೊಡ್ಡ ಹೊಡೆತ ಬಿದ್ದಿದೆ.


ಅಂತಾರಾಷ್ಟ್ರೀಯವಾಗಿ ಮಾನ್ಯತೆ ಪಡೆದಿರುವ ಬ್ರಿಟನ್‌ನ ಪ್ರತಿಷ್ಠಿತ ಇಕನಾಮಿಸ್ಟ್ ನಿಯತಕಾಲಿಕವನ್ನು ರಾಜಕೀಯ ಹಾಗೂ ಆರ್ಥಿಕ ವಲಯದ ಗಣ್ಯಾತಿಗಣ್ಯರು ಓದುತ್ತಾರೆ. ತನ್ನ ಇತ್ತೀಚಿನ ಆವೃತ್ತಿಯಲ್ಲಿ ಮೋದಿ ಸರ್ಕಾರದ ಆರ್ಥಿಕ ನೀತಿಗಳನ್ನು ಚರ್ಚಿಸಿರುವ ಪತ್ರಿಕೆ "ತಾನು ಸುಧಾರಣಾವಾದಿ ಎಂದು ತೋರಿಸಿಕೊಳ್ಳುವ ಮೋದಿ ನಿಜಕ್ಕೂ ಹಾಗಿಲ್ಲ; ಆತನೋರ್ವ ರಾಷ್ಟ್ರೀಯವಾದಿ, ಕಲಹಪ್ರಚೋದಕ... ಆರ್ಥಿಕ ಸಮಸ್ಯೆಗಳು ಎದುರಾದಾಗ ಕೋಮು ಸಂಘರ್ಷಗಳನ್ನು ಹುಟ್ಟುಹಾಕಲಾಗುತ್ತದೆ... ಅನೇಕ ಆರ್ಥಿಕ ಸಮಸ್ಯೆಗಳನ್ನು ರಾಜ್ಯಗಳಿಗೆ ದಾಟಿಸಲಾಗಿದೆ... ಜಿಎಸ್‌ಟಿಯನ್ನು ಅನಗತ್ಯವಾಗಿ ಸಂಕೀರ್ಣಗೊಳಿಸಲಾಗಿದೆ. ಅದರಲ್ಲಿ ಕಂಟಕಗಳು ತುಂಬಿವೆ" ಎಂದು ಟೀಕಾಪ್ರಹಾರ ಮಾಡಿದೆ.


(ಆಧಾರ: 21.6.2017ರ newsclick.inನಲ್ಲಿ ಪ್ರಭಾತ್ ಪಟ್ನಾಯಕ್ ಲೇಖನ ಮತ್ತು ಇತರ ಮೂಲಗಳಿಂದ)

ವಚನ ಸಾಹಿತ್ಯ ಪ್ರಕ್ಷಿಪ್ತತೆ ಮತ್ತು ಚಿದಾನಂದ ಮೂರ್ತಿಯ ಮೊಂಡು



ಕೊಂಡುಗುಳಿ ಕೇಶಿರಾಜ ಹನ್ನೆರಡನೆಯ ಶತಮಾನದ ಆದಿ ಭಾಗದ ಕವಿ. 1107 ಆತನ ಕಾಲ ಅಂತ ನಿರ್ಣಯಿಸಲಾಗಿದೆ. ಕಲ್ಯಾಣ ಕ್ರಾಂತಿಯ ನಂತರ ವಚನ ಸಾಹಿತ್ಯಕ್ಕೆ ವಿಪತ್ತು ಬಂದು ದಿಕ್ಕು ದೆಶೆಗೆ ಶರಣರು ವಚನಗಳ ಕಟ್ಟನ್ನು ಹೊತ್ತುಕೊಂಡು ಹೋದರು. ಶರಣರು ವಚನಗಳ ಅಜ್ಞಾತವಾಸ ಆರಂಭವಾಯಿತು. ಕಾಳಮುಖಿ ಶೈವರು ಶರಣರ ಕಾಲದಲ್ಲಿ ಲಿಂಗಾಯತ ಧರ್ಮದಲ್ಲಿ ಸೇರಿಕೊಂಡು ನಂತರದ ಕಾಲದಲ್ಲಿ ತಮ್ಮ ಜಾತಿಪ್ರಜ್ಞೆ ಪೌರೋಹಿತ್ಯವನ್ನು ಮುಂದುವರಿಸಿಕೊಂಡು ಹೋಗುವ ದೃಷ್ಟಿಯಲ್ಲಿ ಸಂಸ್ಕೃತ ಪಂಡಿತರು ವಚನಗಳನ್ನು ಸೇರಿ ಕೊಂಡುಗುಳಿ ಕೇಶಿರಾಜರ ಕೃತಿಯನ್ನು ವಿರೂಪಗೊಳಿಸಿದ್ದಾರೆ.





ಶರಣ ಸಾಹಿತ್ಯ ಪ್ರಕ್ಷಿಪ್ತಗೊಂಡಿವೆ. ವಚನ ಸಾಹಿತ್ಯದಲ್ಲಿ ಬರುವ ಸಂಸ್ಕೃತ ಮತ್ತು ವೀರಶೈವ ಸೇರ್ಪಡೆಯ ಅನೇಕ ಉದಾಹರಣೆಗಳು ಸಿಗುತ್ತವೆ. ಕನ್ನಡವನ್ನೇ ಅತ್ಯಂತ ಕಠಿಣ ಶ್ರಮ ಶ್ರದ್ಧೆಯಿಂದ ಕಲಿತ ಉರಲಿಂಗ ಪೆದ್ದಿಗಳ ವಚನದಲ್ಲಿ ಸಂಸ್ಕೃತ ಶಬ್ದಗಳ ಸೇರ್ಪಡೆ ಎಷ್ಟು ಹಾಸ್ಯಾಸ್ಪದ ಮತ್ತು ಅಪ್ರಸ್ತುತ.

ಕೊಂಡುಗುಳಿ ಕೇಶಿರಾಜರ ಕೃತಿಯಲ್ಲಿ ಬರುವ ಆರಮತ್ತು ಆಚರಣೆಗಳು ಲಿಂಗಾಯತ ಧರ್ಮಕ್ಕೆ ಸಂಪೂರ್ಣ ವಿರುದ್ಧವಾಗಿವೆ. ಅವುಗಳಲ್ಲಿ ಮಡಿ ಹುಡಿ, ಯಾರನ್ನು ಮುಟ್ಟಿಸಿಕೊಳ್ಳದೆ ಇರುವ ಅಸ್ಪೃಶ್ಯ ಆಚರಣೆ ಬಸವ ತತ್ವಕ್ಕೆ ವಿರುದ್ಧವಾಗಿದೆ. ಕೊಂಡುಗುಳಿ ಕೇಶಿರಾಜರ ಕೃತಿ-ಅದೊಂದು ಖೊಟ್ಟಿ ಮತ್ತು ಕೃತಕ, ನಕಲು ದಾಖಲಾತಿಗಳಿಂದ ಕೂಡಿದ ಕೃತಿ ಎಂದು ಜನನಿತವಾಗಿದೆ ಮತ್ತು ದೃಢಪಟ್ಟಿದೆ. ಇಂತಹ ಕೃತಿಗಳ ವಿರೋಧಾಭಾಸ ಗೊತ್ತಿದ್ದರೂ ಡಾ.ಚಿದಾನಂದ ಮೂರ್ತಿ ಮುಂತಾದವರು ಪತ್ರಿಕಾ ಪ್ರಕಟಣೆ ನೀಡಿ ವೀರಶೈವ ಆಚರಣೆಯ ಬಗ್ಗೆ ಹೇಳಿಕೆ ನೀಡಿರುವುದು ದುರದೃಷ್ಟಕರ.

ಚಿದಾನಂದ ಮೂರ್ತಿ ವಚನ ಸಾಹಿತ್ಯ ಮತ್ತು ಶರಣ ಸಂಸ್ಕೃತಿಯ ಬಗ್ಗೆ ಅಧ್ಯಯನ ಮಾಡಿದವರು. ಅವರೇ ರಚಿಸಿದ 'ವಚನಶೋಧ'ದಲ್ಲಿ ಪಂಚ ಪೀಠದವರು 13-15ನೆ ಶತಮಾನದಲ್ಲಿ ಬಂದವರು ಅಂತಾ ಹೇಳಿದ್ದಾರೆ. ವೃತ್ತಿಗೆ, ಬದುಕಿಗೆ, ಪುರಸ್ಕಾರಕ್ಕೆ ಬಸವಣ್ಣ ಬೇಕು. ಆದರೆ ಧರ್ಮದ ವಿಷಯ ಬಂದಾಗ ತಮ್ಮ ವೀರ ಮಾಹೇಶ್ವರ ವೀರಶೈವ ಜಾತಿಗೆ ನಿಷ್ಠೆ ತೋರುತ್ತಾರೆ. ಅಂದಿನ ಕಾಲದ ಪುರೋಹಿತರೆ ಇಂದಿನ ವೀರ ಮಾಹೇಶ್ವರರು. ಅವರಲ್ಲಿ ಚಿದಾನಂದ ಮೂರ್ತಿ ಒಬ್ಬರು. ಲಿಂಗಾಯತ ಧರ್ಮಕ್ಕೆ ಮಾನ್ಯತೆ ದೊರೆಯುವಲ್ಲಿ ಚಿದಾನಂದ ಮೂರ್ತಿ ಅಡ್ಡಗಾಲು. ತಮ್ಮ ಪ್ರತಿಷ್ಠೆಗೆ ಶರಣರ ಚರಿತ್ರೆ ವಿಕಾರ ಮಾಡುವ ಚಿದಾನಂದ ಮೂರ್ತಿ ಈ ಕೂಡಲೇ ಜನರಲ್ಲಿ ಕ್ಷಮಾಪಣೆ ಕೇಳಬೇಕು. ಸಮಾಜ ಒಡೆದವರು ಶಿವಾಚಾರ್ಯರು. ಇಲ್ಲಸಲ್ಲದ ಶಿಖಾಮಣಿಯ ತಂದು ಅದರ ಆದಿ ಅನಾದಿಗಳ ವ್ಯರ್ಥ ಚರ್ಚೆ ಮಾಡಿರುವುದು ಈ ಎಲ್ಲ ಗೊಂದಲಗಳಿಗೆ ಕಾರಣ.

ವೀರಶೈವ - ಈ ಪದವು ಶರಣರ ಷಟಸ್ಥಲ ವಚನಗಳಲ್ಲಿ ಕಾಣಬರುವದಿಲ್ಲ. ಹೆಚ್ಚಿನ ವಚನಗಳಲ್ಲಿ ಬರುತ್ತದೆಯಾದರೂ ಅವುಗಳನ್ನು ಶರಣರು ಬರೆದಿರುವರು ಎಂಬುದಕ್ಕೆ ಪುರಾವೆ ಇಲ್ಲ. ಹಂಪಿ ಹಾಳು ಮಾಡಿದ ವೀರಶೈವರು ಆಂಧ್ರ ಮೂಲದಿಂದ ಬಂದವರು. ಪಂಚಪೀಠದವರಲ್ಲೊಬ್ಬ ಮಲ್ಲಿಕಾರ್ಜುನ ಪಂಡಿತ ಬಸವಣ್ಣನೆ ಎನ್ನ ಗುರು ಅಂತ ಕರೆದಿರುವಾಗ ಚಿದಾನಂದ ಮೂರ್ತಿ ವೀರಶೈವ ಧರ್ಮವು ಬಸವಣ್ಣನಿಗಿಂತಲೂ ಹಳೆಯದ್ದು, ಬಸವಣ್ಣ ವೀರಶೈವನಾಗಿ ಲಿಂಗ ದೀಕ್ಷೆ ಪಡೆದನು ಅಂತ ಬುರುಡೆಬಿಡುವ ಪುರೋಹಿತರು. ಅವರ ಅರಳು ಮರುಳತನಕ್ಕೆ ಕನಿಕರ ಉಂಟಾಗುತ್ತದೆ.

ಬಸವಣ್ಣ ಜಗತ್ತು ಕಂಡ ಶ್ರೇಷ್ಠ ದಾರ್ಶನಿಕ. ವೀರಶೈವವು ಬಸವ ಪೂರ್ವದಲ್ಲಿದ್ದರೆ ಕಾಶ್ಮೀರ ಅರಸು, ಬೊಂತಾದೇವಿ, ತೆಲುಗು ಮಸಣಶ, ಅಂಡಾಳರು ಏಕೆ ಬಸವಕಲ್ಯಾಣಕ್ಕೆ ಹೆಜ್ಜೆ ಹಾಕಿದರು? ಗುರು ಪೀಠ ಇತ್ತೀಚಿನವು. ಆದರೆ ಗುರು ಪೀಠವಾಗಲಿ ವಿರಕ್ತ ಪೀಠವಾಗಲಿ ಜಾತಿ ಜಂಗಮರಿಂದ ಕೂಡಿದ ಒಂದು ವ್ಯವಸ್ಥೆ. ಅಥಣಿ ಶಿವಯೋಗಿಗಳು, ಮುಳಗುಂದ ಬಾಲಲೀಲ ಮಹಾಂತ ಶಿವಯೋಗಿಗಳು, ಕಲ್ಲಿಮಠದ ಶಿವಯೋಗಿಗಳು, ಮುರುಗೋಡ ಮಹಾಂತ ಶಿವಯೋಗಿಗಳು ಇಂತಹ ಬೆರಳೆಣಿಕೆಯಷ್ಟು ಬಸವ ಭಕ್ತ ವಿರಕ್ತರನ್ನು ಹೊರತು ಪಡಿಸಿದರೆ ಎಲ್ಲರೂ ವೀರ ಮಾಹೇಶ್ವರ ಹಿತಾಸಕ್ತಿ ನೋಡಿಕೊಂಡವರು.

ವೀರಶೈವ ಆಚರಣೆಗಳು ಎಂದಿಗೂ ಲಿಂಗಾಯತ ಧರ್ಮದ ಆಚರಣೆಗಳು ಆಗಲಾರವು. ವೀರಶೈವ ಪದವು ಹರಿಹರ, ರಾಘವಾಂಕ, ಚಾಮರಸ, ಕೆರೆ ಪದ್ಮರಸರ ಕೃತಿಗಳಲ್ಲಿ ಏಕೆ ಕಂಡುಬಂದಿಲ್ಲ ಅಂತ ಸಂಶೋಧಕರು ಆತ್ಮಾವಲೋಕನ ಮಾಡಿಕೊಳ್ಳಲಿ. ಒಂದು ಸುಳ್ಳನ್ನು ಸಾವಿರ ಸಲ ಹೇಳುವ ಪುರೋಹಿತರಿಂದ ಪ್ರಭಾವಿತರಾದ ಈ ಸಂಶೋಧಕರು ಕಲಿಯುಗದ ಕಾಳುಮುಖಿ ಸಂಪ್ರದಾಯವನ್ನು ಶರಣ ಧರ್ಮದಲ್ಲಿ ಬೆರೆಸುವ ನಿರಂತರ ಪ್ರಯತ್ನದಲ್ಲಿದ್ದಾರೆ.

ಶರಣ ಸಾಹಿತ್ಯಕ್ಕೆ ವಿಪತ್ತು ಬಂದಾಗ ಶರಣರು ಖಡ್ಗ ಹಿಡಿದು ಹೋರಾಡಿದರು. ಇಂದು ಅಖಿಲ ಭ… ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೋ.ರು.ಚೆನ್ನ… ವೀರಶೈವರ ಪರವಾಗಿ ವಕಾಲತ್ತು ವಹಿಸುತ್ತಿರುವು… ನಾಚಿಕೆಯ ವಿಷಯ.

ವೀರಶೈವ, ಲಿಂಗಾಯತ ಬೇರೆ ಬೇರೆ. … ಜಾತಿವಾಚಕ ಮತ್ತು ಹಿಂದೂ ಧರ್ಮಕ್ಕೆ ಪರಿ… ಲಿಂಗಾಯತ ಸಮಾನತೆ ಸಾರುವ ಸ್ವತಂತ್ರ ಧರ್ಮ…

ಈಗ ಚಿದಾನಂದ ಮೂರ್ತಿ ವೀರ … ಹಿತಾಸಕ್ತಿ ನೋಡಿಕೊಳ್ಳುವ ಗುತ್ತಿಗೆ ಸ್ವಯ… ರಾಗಿದ್ದಾರೆ. ಅವರಿಗೆ ಬಸವಾದಿ ಶರಣರು ಬುದ್ಧಿ… ಅವರು ಬಯಸಿದರೆ ಬಸವ ಭಕ್ತರಾದ ನಾವು… ಸಿದ್ಧ.

- ಡಾ.ಶಶಿಕಾಂತ ಪಟ್ಟಣ, ರಾ…

ಮೋದಿ ಭಕ್ತರ ಅಂಧ ಅಭಿಮಾ…

ಚಾಂಪಿಯನ್ ಟ್ರೋಫಿ ಕ್ರಿಕೆಟಿಗೆ ವಿರಾಟ್ … 'ಮೈಂಡ್ ಪ್ಲಾನ್ ವಿನ್ನಿಂಗ್ ಫಾರ್ಮುಲಾ' … ಪ್ರಧಾನಿ ನರೇಂದ್ರ ಮೋದಿ ಎಂದು ಮ್ಯಾಚಿಗೆ … ಕೆಲವು ಟಿವಿ ಚಾನೆಲ್ಲುಗಳು ಮತ್ತು ಕೇಸರಿ … ಮೋದಿಯ ಬಿಲ್ಡ್ ಅಪ್ ಮಾಡತೊಡಗಿದ್ದ… ಈ ಸಾರಿ ಪಾಕಿಸ್ತಾನದ ವಿರುದ್ಧ ಭಾರತ … ಶತಸಿದ್ಧ ಎಂದು ಹೆಚ್ಚಿನ ಭಾರತೀಯರು … ಆದರೆ ಭಾರತ ಸೋತಿದ್ದರಿಂದ ಮೋದಿಯ… ಬಿಲ್ಡಪ್ ಮಾಡಲು ಮೋದಿ ಭಕ್ತರಿಗೆ ಅವಕಾ… ಇಲ್ಲ ಪಾಪ.

ಒಂದು ವೇಳೆ ಭಾರತ ಗೆದ್ದಿದ್ದರೆ ಅದ… ಮೋದಿಗೆ ಕೊಡಲು ಎಲ್ಲಾ ತಯಾರಿ ಬಿಜೆಪಿಯ… ವಿಭಾಗ ಮತ್ತು ಕೇಸರಿ ಐಟಿ ಸೆಲ್ ನಡೆಸಿತ್ತು… ದುರದೃಷ್ಟದಿಂದ ಅವರ ಯೋಜನೆ ವಿಫಲ… ಅದಕ್ಕಾಗಿ ಅವರು ಪಾಕಿಸ್ತಾನದಲ್ಲಿ ನಡೆದ … ಸಂಭ್ರಮವನ್ನು ಭಾರತದಲ್ಲಿ ನಡೆಯಿತು ಎಂದು… ಹಿಂದೂಗಳಲ್ಲಿ ಭಾರತೀಯ ಮುಸ್ಲಿಮರ ವಿರು… ಹರಡಲು ಪ್ರಯತ್ನಿಸುತ್ತಿದ್ದಾರೆ.

ಪಾಕಿಸ್ತಾನದಲ್ಲಿಯ ಸಾಮೂಹಿಕ ಇಫ್ತಾರ್… ವಿಡಿಯೋ ಕ್ಲಿಪ್‌ಗಳನ್ನು ಬಳಸಿ ಅದು ಭಾರತದ… ಪಾಕ್ ಗೆಲುವಿನ ಸಂಭ್ರಮಾಚರಣೆ ಎಂದು … ಜಾಲತಾಣದಲ್ಲಿ ಕುತ್ಸಿತ ಪ್ರಚಾರ ಮಾಡ… 'ಮುಂಬಯಿಯ ಮೀರಾ ರೋಡ್ ಮಸೀದಿಯ… ಟಿವಿ ಸ್ಕ್ರೀನ್ ಮೇಲೆ ಮ್ಯಾಚ್ ನೋಡುತ್ತಾ ಮು…

ಇಫ್ತಾರ್ ಹಾಗು ಪೇಜಾವರರ 'ವಿಭೀಷಣ ನ್ಯಾಯ'



ನೀವು ಉಡುಪಿ ಪಟ್ಟಣವನ್ನು ಪ್ರವೇಶಿಸುವಾಗ ಒಂದು ಭವ್ಯ ಸ್ವಾಗತ ಮಂಟಪವೊಂದು ಎದುರಾಗುತ್ತದೆ. ಏಳೆಂಟು ಶತಮಾನಗಳ ಹಿಂದೆ ಯಾವ ಮಾಧ್ವ ಚಿಹ್ನೆಯನ್ನೂ ಹೊಂದಿಲ್ಲದ ಈ ಉಡುಪಿ ಪಟ್ಟಣದಲ್ಲಿ ಈ ಭವ್ಯ ಮಾಧ್ವ ಸಂಕೇತವನ್ನು ಪ್ರತಿಷ್ಠಾಪಿಸಿದ್ದು ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥರು. ಭಾರತವಲ್ಲದೇ ಅಮೆರಿಕಾದಂತಹ ದೇಶಗಳಲ್ಲೂ ಮಾಧ್ವ ಸಿದ್ಧಾಂತ ಪ್ರಚಾರಕ್ಕೆ ಒತ್ತು ಕೊಟ್ಟಂತಹ ವ್ಯಕ್ತಿಯೂ ಇವರೇ. ಉಡುಪಿ ಮಠದಲ್ಲಿ ಬರೀ ತಿಂದುಂಡು ಕಾಲಕಳೆಯುವ ಸ್ವಾಮೀಜಿಗಳಿಗಿಂತ ಇವರ ಕಾರ್ಯ ಸಾಧನೆ ದೊಡ್ಡದು. ಆದರೆ ಇಂತಹ ಸ್ವಾಮಿಯನ್ನೇ ಜುಜುಬಿ ವಿದೇಶಕ್ಕೆ ಹೋದಂತಹ ಮಡಿ ಮೈಲಿಗೆಯ ನೆಪಕ್ಕೆ ಪುನಃ ಪರ್ಯಾಯ ಪೀಠಕ್ಕೇರಲು ಪೇಜಾವರ ಶ್ರೀಗಳು ತಡೆಯೊಡ್ಡಿ ದೊಡ್ಡ ರಾದ್ಧಾಂತ ಸೃಷ್ಟಿಸಿದ್ದರು. ಕೊನೆಗೆ ಪರ್ಯಾಯ ಪೀಠವೇರಿದರೂ ಕೃಷ್ಣನ ವಿಗ್ರಹವನ್ನು ಯಾವ ಕಾರಣಕ್ಕೂ ಮುಟ್ಟಲೇಬಾರದು ಎಂದು ತಾಕೀತು ಮಾಡಿದ್ದರು. ಇಂತಹ ಜಿಗುಟು ಮೈಲಿಗೆಯ ಸ್ವಾಮೀಜಿಯೊಬ್ಬ ವೈದಿಕರಿಂದ ಮ್ಲೇಚ್ಛರೆಂದು ಕರೆಸಿಕೊಳ್ಳುವ ಮುಸಲ್ಮಾನರನ್ನು ಅವರ ರಂಜಾನ್ ಹಬ್ಬದ ಪ್ರಮುಖ ಘಟ್ಟವಾದ ಉಪವಾಸ ಬಿಡುವ ಕಾರ್ಯಕ್ಕಾಗಿ ಉಡುಪಿ ಮಠದೊಳಗೇ ಕರೆಸುತ್ತಾರೆಂದರೆ ಇದನ್ನು ಕೇವಲ ಸೌಹಾರ್ದದ ಲೇಬಲ್ಲಿಗೆ ಸೀಮಿತಗೊಳಿಸಿ ಬಿಟ್ಟರೆ ಅದು ನಮ್ಮ ಅಜ್ಞಾನವಷ್ಟೆ.

ಉಡುಪಿ ಮಠದಲ್ಲಿನ ಕುಖ್ಯಾತ ಪಂಕ್ತಿಭೇದದ ಬಗ್ಗೆ ತಮ್ಮದೇ ಆದ ಸಂಪ್ರದಾಯದ ಸಮರ್ಥನೆಗಳನ್ನು ಕೊಟ್ಟು ಜಾರಿಕೊಳ್ಳುವ ಶ್ರೀಗಳು; ಮಾಂಸಾಹಾರಿಗಳ ಜೊತೆ ಕೂತು ಸಂಪ್ರದಾಯಸ್ಥರಿಗೆ ಊಟ ಮಾಡಲು ಮುಜುಗರವಾಗುತ್ತದೆ ಹೀಗಾಗಿ ಇದನ್ನು ನಿಲ್ಲಿಸಲಾಗದು ಎನ್ನುವಂತಹ ಬಾಲಿಶ ಹೇಳಿಕೆಗಳಲ್ಲೇ ಜೋತಾಡುವ ಪೇಜಾವರರು ಈಗ ಏಕಾಏಕಿ ತಮ್ಮ ಮಡಿ ಮೈಲಿಗೆ ಧಾರ್ಮಿಕ ಸಿದ್ಧಾಂತಗಳನ್ನೆಲ್ಲ ಬದಿಗೊತ್ತಿ ಮುಸಲ್ಮಾನರಿಗಾಗಿ ಇಫ್ತಾರ್ ಕೂಟ ಆಯೋಜಿಸಿ ಅವರ ನಮಾಜಿಗೂ ಅಲ್ಲಿ ಅವಕಾಶ ನೀಡುತ್ತಾರೆಂದರೆ ಅದಕ್ಕೆ ಅವರದ್ದೇ ಆದ ದೊಡ್ಡ ಕಾರಣಗಳೇ ಇದೆ. ಯಾಕೆಂದರೆ ಎಲ್ಲರಿಗೂ ಗೊತ್ತಿರುವಂತೆ ಪೇಜಾವರರೊಳಗೊಬ್ಬ ನುರಿತ ರಾಜಕಾರಣಿಯೂ ಇದ್ದಾನೆ.

ಈ ಬಾರಿಯ ಪರ್ಯಾಯ ಪೀಠವನ್ನೇರಿ ನಿಯಮದಂತೆ ರಥಬೀದಿಗಷ್ಟೆ ಸೀಮಿತಗೊಂಡ ಪೇಜಾವರ ಸ್ವಾಮಿಗಳು ಸುಮ್ಮನೆ ಕುಳಿತುಕೊಳ್ಳುವ ಜಾಯಮಾನದ ವ್ಯಕ್ತಿಯಲ್ಲವೇ ಅಲ್ಲ, ದೇಶದ ರಾಜಕೀಯದ ಬಗ್ಗೆ ರಾಜಕಾರಣಿಗಳಿಗಿಂತಲೂ ಹೆಚ್ಚು ಹಗಲಿರುಳೆನ್ನದೇ ಚಿಂತಿಸುವ ಹಾಗು ಆ ಬಗ್ಗೆ ಪ್ರತಿಕ್ರಿಯಿಸುವ ಇವರ ಕಾರ್ಯತಂತ್ರಗಳೋ ಬಹಳ ನಾಜೂಕಿನದ್ದು, ಹೇಗಿದ್ದರೂ ಈ ಕು-ಯುಕ್ತಿ, ತಂತ್ರಗಾರಿಕೆಯಲ್ಲಿ ಪುರೋಹಿತಶಾಹಿಗಳನ್ನು ಮೀರಿಸುವರುಂಟೇ? ಐತಿಹಾಸಿಕ ಅಥವ ಅವರೇ ಬರಕೊಂಡಂತಹ ಪುರಾಣದ ಪುಟಗಳನ್ನು ತಿರುವಿಹಾಕಿ ನೋಡಿದರೂ ಈ ಬಗ್ಗೆ ಬಲಿಯಿಂದ ಹಿಡಿದು ಚಾಣಕ್ಯನವರೆಗಿನ ಸಾಕಷ್ಟು ಪುರಾವೆಗಳು ನಮಗೆ ಸಿಗುತ್ತವೆ. ಪುರೋಹಿತಶಾಹಿಗಳ ಇಂತಹ ತಂತ್ರಕ್ಕೆ ತೀರಾ ಇತ್ತೀಚಿಗಿನ ಉದಾಹರಣೆಯೆಂದರೆ ಹೆಸರಿಗಷ್ಟೇ ದಲಿತನಾದ 101% ಆರೆಸ್ಸೆಸ್ಸಿಗ ವ್ಯಕ್ತಿಯನ್ನು ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿಸ ಹೊರಟಿದ್ದು.

ತಮಗೆ ಪ್ರತಿರೋಧವಿದ್ದ ಗುಂಪಿನಿಂದ ತಮಗೊಪ್ಪುವಂತಹ ಯಾವನೋ ಒಬ್ಬನನ್ನು ಎಳಕೊಂಡು ಕಾರ್ಯ ಸಾಧಿಸುವ ಈ 'ವಿಭೀಷಣ ನ್ಯಾಯ'ದಲ್ಲಿ ಪುರೋಹಿತಶಾಹಿಗಳದ್ದು ಎತ್ತಿದ ಕೈ. ಅದ್ಯಾವನೋ ಉತ್ತರ ಪ್ರದೇಶದ ಫೈಸಲ್ ಖಾನ್ ಎಂಬುವನಿಂದ ಇವರು ನಡೆಸುವ ಗೋಮಾತೆಯ ಕುರಿತ ಕಾರ್ಯಕ್ರಮಗಳೇನೂ, ಹಿಂದೂತ್ವದ ಮೆರವಣಿಗೆ-ಸಮಾರಂಭಗಳಲ್ಲಿ ಮುಂದಿನ ಸಾಲುಗಳಲ್ಲಿ ಟೋಪಿಧಾರಿ-ಬುರ್ಖಾಧಾರಿಗಳನ್ನು ತಂದು ಬಿಂಬಿಸುವುದೇನೂ, ಪರ್ಯಾಯದಂತಹ ಖಾಸಗಿ ಸಮಾರಂಭಕ್ಕೆ ಮುಸಲ್ಮಾನರ ರಕ್ತದಾನ ಶಿಬಿರಗಳೇನೂ... ಇದೆಲ್ಲದರ ಅರ್ಥ ಪರಧರ್ಮೀಯರ ಇಡೀ ಸಮುದಾಯವೇ ತಮ್ಮ ಪರವಿದೆ ಎಂದು ಬಿಂಬಿಸುವುದು. ಮುಸಲ್ಮಾನರಾದರೂ ಹಿಂದೂತ್ವ ಬೆಂಬಲಿಸುವ ಬಿಜೆಪಿ ಪಕ್ಷದಲ್ಲಿರುವ ಅವಕಾಶವಾದಿಗಳಷ್ಟೇ ಜಮಾಯಿಸಿದ್ದ ಮೊನ್ನೆಯ 'ಇಫ್ತಾರ್ ನಾಟಕ' ಕೂಡ ಇದೇ ಕೆಟಗರಿಗೆ ಸೇರಿವಂತದ್ದು.

'ಉಡುಪಿ ಚಲೋ' ಕಾರ್ಯಕ್ರಮಕ್ಕೆ ಆಗಮಿಸಿದ್ದ ಜಿಗ್ನೇಶ್ ಮೇವಾನಿ ಸಾಂದರ್ಭಿಕವಾಗಿ ಮಠ ಮುತ್ತಿಗೆಯ ಸಾಧ್ಯತೆಯ ಬಗ್ಗೆ ಆಡಿದ ಮಾತನ್ನೇ ಮೀಡಿಯಾಗಳು ಉದ್ದೇಶಪೂರ್ವಕವಾಗಿ ದೊಡ್ಡದಾಗಿಸಿದ್ದವು. ಇದನ್ನೇ ರಾಜಕೀಯವಾಗಿ ದುರುಪಯೋಗಪಡಿಸಿಕೊಂಡು ರಾಜಕೀಯ ಪ್ರಭಾವವುಳ್ಳ ಹಿಂದೂತ್ವದ ದೊಡ್ಡಣ್ಣ ಪೇಜಾವರರ ಮನಗೆಲ್ಲಲು ಮುತ್ತಿಗೆಯನ್ನು ವಿರೋಧಿಸಿದ ಈ ಸಣ್ಣ ಅವಕಾಶವಾದಿ ಮುಸಲ್ಮಾನರ ಗುಂಪನ್ನು ಕೃತಜ್ಞತೆಯ ನೆಪ ಹಾಗು ಸ್ವಲಾಭಕ್ಕೋಸ್ಕರ ಪೇಜಾವರರು ಇಫ್ತಾರ್ ನೆಪದಲ್ಲಿ ಕರೆಸಿಕೊಂಡಿದ್ದರು.

ಯಡ್ಡಿ ಚೆಡ್ಡಿಗಳು ಏನೇ ಹೇಳಲಿ, ರಾಜ್ಯದಲ್ಲಿ ಸಿದ್ದರಾಮಯ್ಯರ ಸರಕಾರ ತನ್ನದೇ ಆದ ಜನಪ್ರಿಯತೆಯನ್ನು ಪಡೆದಿರುವುದನ್ನು ಯಾರೂ ಅಲ್ಲಗಳೆಯಲಾಗದು. ಅದೇ ರೀತಿ ಕೇಂದ್ರದಲ್ಲಿ ಹೇಳುವಂತಹ ಸಾಧನೆಗಳೇನೂ ನಡೆದಿಲ್ಲ, ಚುನಾವಣೆಗಳು ಸಮೀಪಿಸುತ್ತಾ ಇವೆ. ಹಾಗಾಗಿ ಕಡೆಗಣಿಸಲಾಗದ ಮುಸಲ್ಮಾನರ, ದಲಿತರ ಓಟಿಗಾಗಿ ಇಂತಹ ಓಲೈಕೆಗಳಿಗೆಲ್ಲ ಇದೀಗ-ಜೀವ ಬಂದಿದೆ. ವಿಎಚ್‌ಪಿ ಮುಂದಾಳುವಾಗಿ ಇಂತಹ ಕೂಟಗಳ ಮೂಲಕ ಸ್ವಾಮಿಗಳು ಇದೀಗಲೇ ಕಾರ್ಯಪ್ರವೃತ್ತರಾಗುತ್ತಿದ್ದಾರಷ್ಟೆ.

ಇದಕ್ಕೆ ಪೂರಕವಾಗಿ "ಇತ್ತೀಚಿಗೆ ಕೆಲವರು ಮಠಕ್ಕೆ ಮುತ್ತಿಗೆಯ ಬೆದರಿಕೆ ಹಾಕಿದಾಗ ಅದನ್ನು ವಿರೋಧಿಸಿ ನಮಗೆ ಮೊದಲು ಬೆಂಬಲ ನೀಡಿದ್ದೇ … ಬಂಧುಗಳು" ಹಾಗು "ಬಾಬ್ರಿ ಮಸೀದಿ … ನಾನು ತಡೆದಿದ್ದೆ" ಎಂಬ ಹಳಸಲು ಟೇಪನ್ನು … ಕೂಟದಲ್ಲಿ ಪೇಜಾವರರು ಪುನರುಚ್ಚರಿಸಿದ್ದರು.

ಮೊದಲೇ ಹೇಳಿದಂತೆ ಪೇಜಾವರರದ್ದು … ಕೂರುವ ಜಾಯಮಾನವಲ್ಲ, ಇದಕ್ಕೆ ಪೂರಕವಾಗಿ … ಇರುವ ಉತ್ತರ ಪ್ರದೇಶದಲ್ಲಿ ಅಲ್ಲಿನ ಸಂಸದ, ಹಿ… ಉಗ್ರ ಪ್ರತಿಪಾದಕ ಸಾಕ್ಷಿ ಮಹಾರಾಜ್ ಒಂದು… ಬಾಂಬನ್ನು ಸಿಡಿಸಿದ್ದರು. "ಇದೇ ನವೆಂಬರ್‌ನ… ಎಲ್ಲಾ ಪ್ರಮುಖ ಸಂತರು ಕರ್ನಾಟಕದ ಉಡು… ಪೇಜಾವರ್ ಮಹಾರಾಜ್ ಉಪಸ್ಥಿತಿಯಲ್ಲಿ … ಆಯೋಧ್ಯಾ ರಾಮಮಂದಿರದ ಸ್ಥಾಪನೆಗೆ ದಿ… ನಿಗದಿ ಮಾಡುತ್ತೇವೆ. ಈ ಬಗ್ಗೆ ಪೇ… ಮಹಾರಾಜ್‌ರೊಂದಿಗೆ ಮಾತುಕತೆಯೂ ನಡೆ… ದಿನಾಂಕ ನಿಗದಿ ಮಾಡಿದೆವೆಂದರೆ ನಮ್ಮನ್ನು … ತಡೆಯುವಂತಿಲ್ಲ" ಎಂದಿದ್ದ ಸಾಕ್ಷಿ ಮಹಾರಾ…

ಇಫ್ತಾರ್‌ಗೆ ಕರೆಸಲಾದ ಈ ಅವಕಾಶವಾದಿ … ಸಣ್ಣ ಗುಂಪನ್ನೇ ಸಾರಾಸಗಟಾಗಿ ಭಾರತ… ಮುಸಲ್ಮಾನರ ಪ್ರತಿನಿಧಿಯೆಂಬಂತೆ ಬಿಂಬಿಸುತ್ತ… ನವೆಂಬರ್ ತಿಂಗಳ ಈ ಸಂತ ಸಮಾವೇಶ… ಮುಸಲ್ಮಾನ ಬೆಂಬಲದ ಸುದ್ದಿಯನ್ನು ಲಾಭಕ್ಕೆ… ವಿಸ್ತರಿಸಿಕೊಳ್ಳಲಾಗುವ ತಂತ್ರವೂ ಇದರ ಹಿಂದಿ… ಸ್ಪಷ್ಟ.

"ನಾವೆಲ್ಲ ಹಿಂದೂತ್ವ ಅದೂ ಇದೂ … ಬೀದಿಯಲ್ಲಿ ನಿಂತು ಹೋರಾಡುತ್ತಾ ಒಂದರಮೇ… ಕೇಸುಗಳನ್ನು ಜಡಿಸಿಕೊಳ್ಳುತ್ತಾ ಇದ್ದರೆ ಈ … ಸ್ವಾಮಿಗಳು ಈ ರೀತಿಯಾಗಿ ಮಠದೊಳಗೆ ಮುಸ… ಕರೆತಂದು ನಮ್ಮಂತಹ ಓರಾಟಗಾರರಿಗೆ … ತರಬಾರದಿತ್ತು" ಎನ್ನುವ ಮುತಾಲಿಕ್‌ಗೆ ಪೇ… ಮುಸಲ್ಮಾನರ ಓಲೈಕೆ ಯಾತಕ್ಕಾಗಿ ಮಾಡುತ್ತಿ… ನಿಜಾಂಶದ ಅರಿವಿದ್ದಂತಿಲ್ಲ.

ಅಂದಹಾಗೆ, ಅವತ್ತು ದೇವಾಲಯದ … ಬಾರದೇ ಪೇಟೆ ಬೀದಿಯಲ್ಲಿ ದಲಿತರು 'ಉಡುಪಿ… ಹೆಸರಲ್ಲಿ ಹೆಜ್ಜೆಹಾಕಿದ್ದಕ್ಕೆ, ಉಡುಪಿಯನ್ನು 'ಕ… ಹೆಸರಲ್ಲಿ ಸ್ವಚ್ಛ ಮಾಡಲು ಹೊರಟ ಸೂಲಿ… ಈಗ ಮಾಂಸಾಹಾರಿ ಮುಸಲ್ಮಾನರು ಮ… ಕಾಲಿಟ್ಟು ನಮಾಜು ಮಾಡಿದ ಪರಿಸರವನ್ನು … ನಿರ್ಮಾ ಬಾರ್‌ನಿಂದ ತೊಳೆಯುತ್ತಾರೋ ನೋ…


-ಓದುಗ, ಮ…

ಭಾರತೀಯರನ್ನೇ ಬೆಸೆಯದ ಯೋಗ ಜಗತ್ತನ್ನು ಹೇಗೆ ಬೆಸೆದೀತು?

ಮೋದಿಯ ಮೂರು ವರ್ಷದ ಆಡಳಿತ ಸಂಪೂರ್ಣ ವಿಫಲತೆಯಿಂದ ಕೂಡಿದ್ದನ್ನು ಮರೆಮಾಚಲು ಯೋಗಕ್ಕೆ ಇಷ್ಟೊಂದು ಪ್ರಚಾರ ಕೊಡಲಾಗುತ್ತಿದೆ ಅಷ್ಟೇ. ಈ ವರ್ಷ ಯೋಗ ಪ್ರಚಾರಕ್ಕೆ 1200 ಕೋಟಿ ರೂಪಾಯಿ ಸಾರ್ವಜನಿಕ ಹಣ ಖರ್ಚಾಗಿದೆ. ಈ ಹಣದಿಂದ ಎಷ್ಟು ಜನ ನೇಗಿಲಯೋಗಿಗಳ (ರೈತರ) ಸಾಲಮನ್ನಾ ಮಾಡಬಹುದಿತ್ತು ಆಲೋಚಿಸಿ. ನಮಗೆ ಈಗ ಬೇಕಿರುವುದು ನೇಗಿಲ ಯೋಗಿ ರೈತರ ಆರ್ಥಿಕ ಆರೋಗ್ಯವೇ ಹೊರತು 'ಫೈವ್ ಸ್ಟಾರ್' ಯೋಗಿಗಳ ಜೇಬು ತುಂಬುವ ಯೋಗ ಡ್ರಾಮಾಗಳಲ್ಲ.

ಸುರಿಯುವ ಮಳೆಯಲ್ಲಿ ಮೋದಿ ಯೋಗ ಮಾಡಿದರು ಎಂದು ಹಲವು ಪತ್ರಿಕೆಗಳು ಮುಖಪುಟದಲ್ಲಿ ಕಿರುಚಿವೆ. ಆದರೆ ವರ್ಷವಿಡೀ ಕಾಯಕ-ಯೋಗಿ ಕಾರ್ಮಿಕರು, ನೇಗಿಲ- ಯೋಗಿ ರೈತರು, ಸ್ವಚ್ಛತೆಯ-ಯೋಗಿ ಪೌರ ಕಾರ್ಮಿಕರು, ಮುಂತಾದ ನಿತ್ಯ-ಯೋಗಿಗಳು ಭೀಕರ ಮಳೆ ಬಿಸಿಲು ಚಳಿಯಲ್ಲಿ ಯಾವುದೇ ರಕ್ಷಣೆಯಿಲ್ಲದೇ ಹಾಗೂ ಪ್ರಚಾರ ವಿಲ್ಲದೇ ಕೆಲಸ ಮಾಡಿ ಇಡಿ ದೇಶದ ಜನರ ಹೊಟ್ಟೆ ಬಟ್ಟೆ ಆರೋಗ್ಯಕ್ಕಾಗಿ ಮತ್ತು ಸುರಕ್ಷಿತತೆಗಾಗಿ ಜೀವ ತೇಯುತ್ತಿದ್ದಾರಲ್ಲಾ, ಅದಕ್ಕೆ ಯಾಕೆ ಇಂತಹ ಪ್ರಚಾರವಿಲ್ಲ? ವರ್ಷದಲ್ಲಿ ಕೇವಲ ಒಂದು ದಿನ ಕ್ಯಾಮರಾಗಳ ಎದುರು ಯೋಗ ಮಾಡುವ ಪೋಜ್ ಕೊಟ್ಟ ಮಾತ್ರಕ್ಕೆ ರಾಜಕಾರಣಿಗಳಿಗೆ, ಸಿನೆ ನಟರಿಗೆ ಮತ್ತು ಸ್ವಾಮೀಜಿಗಳಿಗೆ ಇಷ್ಟು ಪ್ರಚಾರ ಮತ್ತು ಬಿಲ್ಡಪ್ ಬೇಕೇ?

ಯೋಗದಿಂದ ಜಗತ್ತನ್ನೇ ಬೆಸೆಯಬಹುದು ಎಂದು ಮೋದಿ ಹೇಳುತ್ತಾರೆ. ಆದರೆ ಭಾರತದೊಳಗೆಯೇ ಜನರ ಮನಸ್ಸು ಇನ್ನೂ ಬೆಸೆದಿಲ್ಲ! ಜಾತಿ-ಜಾತಿಯೊಳಗೆ ದ್ವೇಷವಿದೆ, ರಾಜ್ಯ-ರಾಜ್ಯಗಳೊಳಗೆ ದ್ವೇಷವಿದೆ, ಭಾಷೆ-ಭಾಷೆಯೊಳಗೆ ದ್ವೇಷವಿದೆ, ಕನ್ನಡಿಗರ ಮೇಲೆ ಮೋದಿಯ ಹಿಂದಿವಾಲಗಳ ದಬ್ಬಾಳಿಕೆಯಿಂದ ಕನ್ನಡಿಗರೆಲ್ಲಾ ರೋಸಿ ಹೋಗಿದ್ದಾರೆ, ದಲಿತರ ಘೋರ ಶೋಷಣೆ ಮುಂದುವರಿದಿದೆ, ಪುರೋಹಿತ ಶಾಹಿಯಿಂದ ದರೋಡೆ ನಡೆಯುತ್ತಲೇ ಇದೆ, ಯೋಗ ಮಾಡಿಯೂ ಪೇಜಾವರ ಸ್ವಾಮಿಯ ಶಕುನಿ ಬುದ್ಧಿ ಬದಲಾಗಿಲ್ಲ. ಯೋಗದಿಂದ ಭಾರತೀಯರನ್ನೇ ಮೊದಲು ಬೆಸೆಯಲು ಸಾಧ್ಯವಾಗಿಲ್ಲ ಎಂದಮೇಲೆ ಇನ್ನು ಇಡಿ ವಿಶ್ವವನ್ನು ಯೋಗದಿಂದ ಬೆಸೆಯುತ್ತೇವೆ ಎನ್ನುವುದು ಬರಿ ಬೊಗಳೆ.



"ಯೋಗದಿಂದ ಉತ್ತಮ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದು ಸಾಧ್ಯ ಮಾತ್ರವಲ್ಲ ಆತ್ಮವೂ ಶುದ್ಧಿಯಾಗುತ್ತದೆ" ಎಂದು ಮೋದಿ ಹೇಳಿದರು. ಆದರೆ ಸ್ವತಃ ಮೋದಿಗೆ ಈವರೆಗೂ ಆತ್ಮ ಶುದ್ಧಿ ಆಗಿಲ್ಲ, ಹಿಂದಿನ 17 ವರ್ಷದಿಂದ ಅವರ ಹೃದಯ ಅಷ್ಟೇ ಕೊಳಕಾಗಿ ಇದೆ. ಹಾಗಾದರೆ ಅವರು ದಿನಾಲೂ ಯೋಗ ಮಾಡಿ ಏನು ಪ್ರಯೋಜನ?

ಜೂನ್ 21, 1940 ಕ್ಕೆ ಆರೆಸ್ಸೆಸ್ ಸ್ಥಾಪಕ ಹೆಡ್ಗೆವಾರ್ ಸತ್ತಿದ್ದು. ಆದಕ್ಕಾಗಿಯೇ ಆ ಹೆಡ್ಗೆವಾರನ ನೆನಪಲ್ಲಿ ಜೂನ್ 21 ಕ್ಕೆ ಆರೆಸ್ಸೆಸ್ ಆಣತಿಯಂತೆ ವಿಶ್ವಯೋಗ ದಿನವೆಂದು ಮೋದಿ ಸರಕಾರ ಘೋಷಿಸಿರುವುದು. ವರ್ಷದ 365 ದಿನವೂ ಒಂದಲ್ಲ ಒಂದು 'ವಿಶ್ವ ದಿನ' ಇದ್ದೇ ಇರುತ್ತದೆ. ಅದರಲ್ಲಿ ಇದೂ ಒಂದು ಅಷ್ಟೇ. ಆದರೆ ಇದನ್ನೇ ಮೋದಿಯ ದೊಡ್ಡ ಸಾಧನೆ ಎಂದು ಪ್ರಚಾರ ಮಾಡಿ ಮೋದಿಯ 3 ವರ್ಷ ಫ್ಯಾಸಿಸ್ಟ್ ಆಡಳಿತದಿಂದ ರೋಸಿ ಹೋಗಿರುವ ಜನರ ಗಮನ ಬೇರೆಡೆ ತಿರುಗಿಸಲು ಸಂಘಿಗಳು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ.

ಮೊನ್ನೆ ಬೆಂಗಳೂರಿನಲ್ಲಿ ಸರಕಾರದ ಯೋಗದಿನ ಕಾರ್ಯಕ್ರಮದಲ್ಲಿ ಅಣ್ಣಾ ಹಜಾರೆಯವರು ಮಾತನಾಡುತ್ತಾ ಭ್ರಷ್ಟಾಚಾರ ವಿರುದ್ಧ ಅವರ ಹೋರಾಟದ ಹಿಂದಿನ ಶಕ್ತಿ ಯೋಗವೇ ಆಗಿತ್ತು ಎಂದು ಹೇಳಿದರು. ಆದರೆ ಅಣ್ಣಾ ಹಜಾರೆಯವರೇ- ನಿಮ್ಮ ಹೋರಾಟದ ಹಿಂದಿನ ಶಕ್ತಿ ನಿಜವಾಗಿ ಯೋಗವಾಗಿತ್ತೇ ಅಥವಾ ಹಿಂದೂತ್ವವಾಗಿತ್ತೇ ಎಂಬ ಪ್ರಶ್ನೆ ಈಗ ಜನ ಎತ್ತುತ್ತಿದ್ದಾರೆ. ಯಾಕೆಂದರೆ 2011-12 ರಲ್ಲಿ ಯೋಗ ಮಾಡದೆಯೇ ನಿಮ್ಮಲ್ಲಿ ಲೋಕಪಾಲ ಬಿಲ್ಲಿಗಾಗಿ ಹೋರಾಡುವ ಶಕ್ತಿ ಇತ್ತು, ಕಾರಣ ಆಗ ಹಿಂದೂತ್ವವಾದಿ ಫ್ಯಾಸಿಸ್ಟ್ ಸರಕಾರ ಇರಲಿಲ್ಲ, ಆದರೆ ಈಗ ಹಿಂದಿನ ಮೂರು ವರ್ಷದಿಂದ ನೀವು ಆರಾಮವಾಗಿ ನಿದ್ದೆ ಮಾಡುತ್ತಿರುವ ಫೋಟೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಲೋಕಪಾಲ ಬಿಲ್ ಇನ್ನೂ ಪಾಸ್ ಆಗಿಲ್ಲ ಮತ್ತು ಭ್ರಷ್ಟಾಚಾರ ಸ್ವಲ್ಪವೂ ಕಡಿಮೆಯಾಗಿಲ್ಲ, ಆದರೂ ಹಜಾರೆಯವರೇ ತಾವು ಈಗ ಸುಮ್ಮನಿರುವುದು ನಿಮ್ಮ ಆಗಿನ ಹೋರಾಟ ಲೋಕಪಾಲ್‌ಗಾಗಿ ಇರದೇ ಬಾಬಾ ರಾಮದೇವ್‌ನಂತೆ ಬೇರೆ ಗುಪ್ತ ಅಜೆಂಡಾ ಹೊಂದಿತ್ತು ಎನ್ನುವ ಆರೋಪಕ್ಕೆ ಪುಷ್ಟಿ ನೀಡುತ್ತದೆ.

ಆಚಾರ್ಯ ರಜನೀಶರು 'ಸಂಭೋಗದಿಂದ ಸಮಾಧಿಯವರೆಗೆ' ಎಂಬ ಬಹು ಜನಪ್ರಿಯ ಪುಸ್ತಕ ಬರೆದಿದ್ದರು. ಈಗ ಬಾಬಾ ರಾಮ್ ದೇವ್ 'ಯೋಗದಿಂದ ಭೋಗದವರೆಗೆ' ಎಂಬ ತನ್ನ ಸ್ವಂತ ಅನುಭವದ ಪುಸ್ತಕ ಬರೆದಿದ್ದಾನಂತೆ. ಯೋಗದ ವಾಣಿಜ್ಯೀಕರಣದಿಂದ ಎಂತಹವರೆಲ್ಲಾ ಲಾಭ ಪಡೆಯುತ್ತಿದ್ದಾರೆ ನೋಡಿ. ಹರ್ಯಾಣದ ಶಾಲೆಗಳಲ್ಲಿ ಯೋಗ ಕಲಿಸುವ ಗುತ್ತಿಗೆ ಬಾಬಾ ರಾಮದೇವ್‌ಗೆ ಸಿಕ್ಕಿದೆ. ಈ ಗುತ್ತಿಗೆಯ ಮೊತ್ತ ಎಷ್ಟು ಗೊತ್ತೇ? ಬರೋಬ್ಬರಿ 750 ಕೋಟಿ ರೂಪಾಯಿ ಪ್ರತಿ ವರ್ಷಕ್ಕೆ! ಕೇವಲ 20 ರೂಪಾಯಿಯಲ್ಲಿ ತಯಾರಾಗುವ ಯೋಗ ಚಾಪೆಗಳು ಈಗ ಡಿಪಾರ್ಟ್ಮೆಂಟಲ್ ಸ್ಟೋರುಗಳಲ್ಲಿ ರೂ.300 ರಿಂದ 400 ಕ್ಕೆ ಮಾರಾಟವಾಗುತ್ತವೆ. ಹಾಗಾಗಿ ಯೋಗ ಚಾಪೆಯ ವ್ಯಾಪಾರ ಸಹಾ ಕೋಟ್ಯಾಂತರ ಮೊತ್ತದ ಬಂಪರ್ ಲಾಭವುಳ್ಳ ವ್ಯಾಪಾರವಾಗಿದೆ. ಒಟ್ಟಾರೆ ಯೋಗದ ವಾಣಿಜ್ಯೀಕರಣದಿಂದ ಭಯಂಕರ ಸುಲಿಗೆ ಶುರುವಾಗಿದೆ. ಶುದ್ಧ ವ್ಯಾಪಾರಿ ಬುದ್ಧಿಯ ಗುಜ್ಜು ಮೋದಿ ಮತ್ತು ಅಮಿತ್ ಷಾಗೆ ಬೇಕಾಗಿದ್ದೂ ಇದೇ ತಾನೇ! ಕಳೆದ ವರ್ಷ ಯೋಗಾದ ಜಾಹೀರಾತುಗಳಿಗೆ ರೂ. 700 ಕೋಟಿ ಖರ್ಚಾಗಿತ್ತು, ಈ ವರ್ಷ ರೂ. 1200 ಕೋಟಿ ಖರ್ಚಾಗಿದೆಯಂತೆ. ಇದೆಲ್ಲಾ ಚೇಲಾ ಮಾಧ್ಯಮಗಳ ಡೊಳ್ಳು ಹೊಟ್ಟೆಗೆ ಸೇರಿದೆ. ಅಮಿತ್ ಷಾ ಅಥವಾ ಇತರ ಬಿಜೆಪಿಗರ ಭಾರಿ ಹೊಟ್ಟೆ ಮಾತ್ರ ಯೋಗದಿಂದ ಕರಗಿಯೇ ಇಲ್ಲ ಪಾಪ.

- ಹರೀಶ್ ಎಂ.ಆರ್, ಉಡುಪಿ

ಪಾಕ್ ಗೆಲುವಿನ ಸಂಭ್ರಮಾಚರಣೆ' ಎಂಬ ಶೀರ್ಷಿಕೆಯೊಂದಿಗೆ ವಾಟ್ಸಪ್‌ನಲ್ಲಿ ಹರಿದಾಡಿದ ಪಿಟಿವಿ-ಸ್ಪೋರ್ಟ್ಸ್ ವಿಡಿಯೋ ನಿಜವಾಗಿ ಕರಾಚಿಯಲ್ಲಿ ನಡೆದಿದ್ದ ವಿಜಯೋತ್ಸಾಹದ ವಿಡಿಯೋ ಆಗಿತ್ತು. ಮಸೀದಿ ಅಥವಾ ದರ್ಗಾಗಳಲ್ಲಿ ಟಿವಿ ಅಥವಾ ಇತರ ಮನೋರಂಜನೆಯ ಸಾಧನ ಪ್ರದರ್ಶಿಸುವುದು ಜಗತ್ತಿನಲ್ಲಿ ಎಲ್ಲಿಡೆ ಕಟ್ಟುನಿಟ್ಟಾಗಿ ನಿಷೇಧಿತವಾಗಿದೆ ಎಂಬ ಕನಿಷ್ಠ ಜ್ಞಾನವೂ ಸಂಘಿಗಳಿಗೆ ಇಲ್ಲ. ಕರಾಚಿಯ ಆ ವಿಡಿಯೋದಲ್ಲಿ ಇದ್ದಿದ್ದು ಒಂದು ಸಾರ್ವಜನಿಕ ಸಭಾಂಗಣವೇ ಹೊರತು ಮಸೀದಿ ಅಲ್ಲ ಎಂಬುದನ್ನೂ ಸಂಘಿ ಭಕ್ತಕುರಿಗಳು ಗುರುತಿಸದಿರುವುದು ಜಾಣ ಕುರುಡು ಅಷ್ಟೇ.



ನಿಜವಾಗಿ ಮೋದಿ ಎಂದೂ ಕ್ರಿಕೆಟ್ ಅಥವಾ ಹಾಕಿ ಆಡಿಯೇ ಇಲ್ಲ, ಅವರು ಕೇವಲ ಲಗೋರಿ, ಗೋಲಿ ಮತ್ತು ಕುಟ್ಟಿ-ದೊಣ್ಣೆ ಆಟ ಮಾತ್ರ ಆಡಿದ್ದಂತೆ. ಅವರಿಗೆ ಕ್ರಿಕೆಟ್ ಆಟದ ಬಗ್ಗೆ ಹೆಚ್ಚು ಮಾಹಿತಿ ಇಲ್ಲ ಎಂದು ಅವರೇ ಹಿಂದೊಮ್ಮೆ ಒಪ್ಪಿಕೊಂಡಿದ್ದರು. ಬ್ಯಾಟ್ ಯಾವುದು, ಹಾಕಿ ಸ್ಟಿಕ್ ಯಾವುದು ಎಂಬ ಭೇದವೂ ಅವರಿಗೆ ಗೊತ್ತಿಲ್ಲವಂತೆ. ಅಂತಹವರು ಕ್ರಿಕೆಟಿನಲ್ಲಿ ಗೆಲುವಿನ ರಣತಂತ್ರ ರೂಪಿಸಲು ಹೇಗೆ ಸಾಧ್ಯ? ಮೇಲಾಗಿ ಗುಜರಾತಿಗಳಿಗೆ ಕೇವಲ ಹಣ ಮಾಡುವ ಟ್ರಿಕ್ಕುಗಳು ಗೊತ್ತೇ ವಿನಹ ಅಪಾರ ದೈಹಿಕ ಶ್ರಮ ಬೇಡುವ ಕ್ರೀಡಾ ಕ್ಷೇತ್ರದಲ್ಲಿ ಹಾಗೂ ಸೇನಾಪಡೆಗಳಲ್ಲಿ ಗುಜರಾತಿಗಳು ಅತ್ಯಂತ ವಿರಳ. ಹೀಗಿರುವಾಗ ಮೋದಿಯವರು ವಿರಾಟ್ ಕೊಹ್ಲಿಗೆ ಕ್ರಿಕೆಟಿನಲ್ಲಿ ಗೆಲುವಿನ ತಂತ್ರ ರೂಪಿಸಿ ಕೊಡಲು ಎಂದಾದರೂ ಸಾಧ್ಯವೇ? ರಾಷ್ಟ್ರಪತಿ ಚುನಾವಣೆಯ ಗೆಲುವಿನ ರಣತಂತ್ರವೇ ಬೇರೆ ಹಾಗೂ ಕ್ರಿಕೆಟ್ ಆಟದ ಗೆಲುವಿನ ರಣತಂತ್ರವೇ ಬೇರೆ ಎಂದು ಮೋದಿ ಭಕ್ತರಿಗೆ ತಿಳಿದರೆ ಒಳ್ಳೆಯದು.

- ದಿಗಂತ್ ಹೆಗ್ಡೆ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸಬಹುದು.

13 ◀◀ 'ಶಾಶ್ವತ ಶಂಕಿತರ'

ಆದರೆ ಹಾಗೆ ನಡೆಯಲಿಲ್ಲ. ಅದು ಕೇವಲ ಪೊಲೀಸರ ದೌರ್ಜನ್ಯ ಮಾತ್ರವಲ್ಲ, ಇದಕ್ಕೆ ನಮ್ಮ ಕಾನೂನಿನ ಕುರಿತಾದ ಅಜ್ಞಾನದ ಕಾರಣ ಮತ್ತು ನಮಗೆ ಸೂಕ್ತ ಸಂದರ್ಭದಲ್ಲಿ ವಕೀಲರು ದೊರಕದೇ ಹೋಗಿದ್ದು ಸಹ ಇದಕ್ಕೆ ಮೂಲಕಾರಣ.

ನ್ಯಾಯಾಲಯದಲ್ಲಿ ನನ್ನ ಹಾಜರುಪಡಿಸಿದ ನಂತರವೂ ಪಬ್ಲಿಕ್ ಪ್ರಾಸಿಕ್ಯೂಟರ್, ತನಿಖೆ ಅಧಿಕಾರಿ ಒಳಗೊಂಡಂತೆ ಪ್ರತಿಯೊಬ್ಬರೂ ನ್ಯಾಯಾಧೀಶರೊಂದಿಗೆ ಇಂಗ್ಲಿಷನಲ್ಲಿ ಮಾತನಾಡಲು ಪ್ರಾರಂಭಿಸಿದರು. ಇಂಗ್ಲಿಷ್ ಭಾಷೆ ಗೊತ್ತಿರದ ನನಗೆ ತನಿಖೆ ಅಧಿಕಾರಿ ಇಂಗ್ಲಿಷ್‌ನಲ್ಲಿ ಏನು ಮಾತನಾಡುತ್ತಿದ್ದಾರೆ, ನ್ಯಾಯಾಧೀಶರು ಏನು ಹೇಳುತ್ತಿದ್ದಾರೆ ಒಂದೂ ಅರ್ಥವಾಗುತ್ತಿರಲಿಲ್ಲ, ಹೊರಗೆ ಬಂದನಂತರ ತಿಳಿದದ್ದು ನನಗೆ 10 ದಿನಗಳ ಕಾಲ ಪೊಲಿಸ್ ಕಸ್ಟಡಿಯಲ್ಲಿ ಬಂಧಿಸಲು ಆದೇಶಿಸಲಾಗಿದೆ ಎಂದು. ಅಮಾಯಕರ ವಿರುದ್ಧ ಅನ್ಯಾಯದ ಸರಣಿ ಇಲ್ಲಿಂದ ಆರಂಭವಾಗುತ್ತದೆ. ಕಾನೂನುಬದ್ಧವಾದ ಸೆರೆಯಲ್ಲಿಡುವುದು ಮತ್ತು ಕಾನೂನುಬಾಹಿರವಾಗಿ ಸೆರೆಯಲ್ಲಿಡುವುದು ಹೀಗೆ ಎರಡು ಬಗೆಯ ಕಸ್ಟಡಿಗಳಿವೆ. ನನ್ನ ಬಂಧನದ ನಂತರ 7 ದಿನಗಳ ಕಾಲ ಅನಧಿಕೃತವಾಗಿ ಸೆರೆಯಲ್ಲಿ ಬಂಧಿಸಿದ್ದು ಕಾನೂನುಬಾಹಿರವಾಗಿತ್ತು, ಈ ಬಂಧನದ ಕುರಿತಾಗಿ ನ್ಯಾಯಾಲಯಕ್ಕೆ ತಿಳಿಸಿರಲಿಲ್ಲ, ನನ್ನ ಬಂಧುಗಳಿಗೆ, ಕುಟುಂಬದವರಿಗೆ ತಿಳಿದಿರಲಿಲ್ಲ, ಆದರೆ ದುರಂತವೆಂದರೆ ಈ ಕಾನೂನುಬಾಹಿರ ಬಂಧನದ ಸಂದರ್ಭದಲ್ಲಿಯೇ ಆರೋಪಪಟ್ಟಿ ಸಿದ್ಧವಾಗುತ್ತದೆ. ಸಾಕ್ಷಿಗಳು ಸೃಷ್ಟಿಯಾಗುತ್ತವೆ. ತಪ್ಪೊಪ್ಪಿಗೆ ಪಡೆದುಕೊಳ್ಳಲಾಗುತ್ತದೆ. ಎಲ್ಲವೂ ಅನಧಿಕೃತವಾಗಿ, ರಹಸ್ಯವಾಗಿ ಸಾಧಿಸಲಾಗುತ್ತದೆ. ಈ ಕಾನೂನುಬಾಹಿರ ಬಂಧನದ ಮತ್ತೊಂದು ಅಪಾಯವೆಂದರೆ ಆ ಸಂದರ್ಭದಲ್ಲಿ ಪೊಲೀಸರ ಥರ್ಡ್‌ಡಿಗ್ರಿ ಹಿಂಸೆಯ ಕಾರಣದಿಂದ ಆರೋಪಿಯು ತೀವ್ರವಾಗಿ ಗಾಯಗೊಂಡರೆ, ಸತ್ತು ಹೋದರೆ ಅದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ, ಆ ಅನಾಥಶವವನ್ನು ಪೊಲೀಸರು ರಸ್ತೆಯಲ್ಲಿ ಬಿಸಾಡುತ್ತಾರೆ. ಅದಕ್ಕೆ ಯಾವುದೇ ಪುರಾವೆಗಳೂ ಇರುವುದಿಲ್ಲ, ಏಕೆಂದರೆ ಬಂಧನವೇ ಅನಧಿಕೃತವಾಗಿರುತ್ತದೆ. ಹಾಗಾಗಿ ಸಾವು ಸಹ ಅನಧಿಕೃತವಾಗುತ್ತದೆ.

ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಿದ ನಂತರ ಕಸ್ಟಡಿಗೆ ತೆಗೆದುಕೊಳ್ಳುವುದು ಎರಡನೆಯ ಬಗೆಯ ಕಾನೂನು ಬದ್ಧವಾದ ಬಂಧನ. ಈ ಕಾನೂನುಬದ್ಧ ಬಂಧನವು ಒಂದು ನಾಟಕ. ಅದು ಕೇವಲ ಕಣ್ಣೊರೆಸುವ ತಂತ್ರವಾಗಿರುತ್ತದೆ. ಈ ಸಂದರ್ಭದಲ್ಲಿ ಪೊಲೀಸರು, ವೈದ್ಯರು ಎಲ್ಲರೂ ಒಂದಾಗುತ್ತಾರೆ. ನನ್ನ ವಿಚಾರಣೆಯನ್ನು ದೀರ್ಘ ವರ್ಷಗಳ ಕಾಲ ಲಂಬಿಸಲಾಯಿತು. 12 ವರ್ಷಗಳ ಕಾಲ ನಾನು ನಿರಂತರವಾಗಿ ಜೈಲಿನ ಸೆಲ್‌ನಲ್ಲಿ ಕೊಳೆಯುತ್ತಿದ್ದೆ, ಬೇಲ್ ಅನ್ನು ಸತತವಾಗಿ ನಿರಾಕರಿಸಲಾಗುತ್ತಿತ್ತು" ಎಂದು ನೋವಿನಿಂದ ವಿವರಿಸುತ್ತಾ ಹೋದಂತೆ ಕೇಳುತ್ತ ಕುಳಿತ ನಾವೆಲ್ಲಾ ಅಧಿಕೃತವಾಗಿ ಬದುಕಿದ್ದೇವೆಯೇ ಎನ್ನುವ ಅನುಮಾನ ಕಾಡಲಾರಂಭಿಸಿತು.

ಹೋಷಿಯಾಪುರದ ಹತ್ಯಾಕಾಂಡಕ್ಕೆ ಇಂದು ಮೂವತ್ತು ವರ್ಷಗಳು ತುಂಬುತ್ತವೆ. 1987ರಲ್ಲಿ ಉ.ಪ್ರದ ಹೋಷಿಯಾಪುರ ಪಟ್ಟಣದಲ್ಲಿ 42 ಅಮಾಯಕ ಮುಸ್ಲಿಂ ತರುಣರನ್ನು ಪೊಲೀಸರು ಹತ್ಯೆ ಮಾಡುತ್ತಾರೆ. ಇದನ್ನು ನೆನಪಿಸಿಕೊಂಡ ಅಮೀರ್ ಖಾನ್ "ಎರಡು ಕೊಲೆ ಮತ್ತು ಬಾಂಬ್ ಸ್ಫೋಟದ ಆರೋಪದ ಮೇಲೆ ಬಂಧಿತನಾದ ನನ್ನ ಕೇಸನ್ನು ನ್ಯಾಯಾಧೀಶರು ತುಂಬಾ ಸೂಕ್ಷ್ಮವಾದದ್ದು ಎನ್ನುತ್ತಾರೆ. ಆದರೆ ಮೂವತ್ತು ವರ್ಷಗಳ ಹಿಂದೆ ಹೋಷಿಯಾಪುರದಲ್ಲಿ 42 ನಾಗರಿಕರನ್ನು (ನಾನು ಮುಸ್ಲಿಂ ಎಂದು ಕರೆಯಲಾರೆ) ಹತ್ಯೆ ಮಾಡಿದ ಆ ಕೇಸು ನ್ಯಾಯಾಲಯಕ್ಕೆ ಸೂಕ್ಷ್ಮವಾದದ್ದು ಎಂದೆನಿಸುವುದಿಲ್ಲ, ಏಕೆಂದರೆ ಅಲ್ಲಿ ಆರೋಪಿಗಳು ಪೊಲೀಸರು. ಅವರಿಗೆ ಬೇಲ್ ದೊರಕುತ್ತದೆ. ನನಗೆ ದೊರಕುವುದಿಲ್ಲ, ಆದರೆ ನನ್ನದು ಮಾತ್ರ ಸೂಕ್ಷ್ಮತೆಯುಳ್ಳದ್ದು ಅನಿಸುತ್ತದೆ, ಯಾಕೆ? ನನ್ನ ಹೆಸರು ಅಮೀರ್ ಖಾನ್ ಆಗಿರುವುದಕ್ಕೇನಾ? ಅಲ್ಪಸಂಖ್ಯಾತ, ದಲಿತರು, ಅಸಹಾಯಕರಿಗೆ ಮಾತ್ರ ಗಲ್ಲು ಶಿಕ್ಷೆ ವಿಧಿಸಲಾಗುತ್ತದೆ. ಇದು ಯಾವ ಬಗೆಯ ನ್ಯಾಯ?" ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಸಂತ್ರಸ್ತರು ಕೇವಲ ಮುಸ್ಲಿಂ ಸಮುದಾಯ ಮಾತ್ರವಲ್ಲ, 1984ರಲ್ಲಿ ಸಿಖ್ ಸಮುದಾಯ ಇದೇ ಬಗೆಯ ಕೊಲೆಗಳಿಗೆ ಬಲಿಯಾಗಿದ್ದಾರೆ. ಛತ್ತೀಸ್‌ಘಡದಲ್ಲಿ ಆದಿವಾಸಿಗಳು ಸಹ ಇದೇ ಮಾದರಿಯ ಸಂತ್ರಸ್ತರು ಎಂದು ಅಭಿಪ್ರಾಯ ಪಡುವ ಅಮೀರ್ ಖಾನ್ ಕಾನೂನನ್ನು ಜೇಡರ ಬಲೆಗೆ ಹೋಲಿಸುತ್ತಾರೆ. ಈ ಜೇಡರ ಬಲೆಗೆ ಸಿಕ್ಕಿಕೊಂಡ ಸಣ್ಣ ಸಣ್ಣ ಸಮುದಾಯಗಳು, ಅನಕ್ಷರಸ್ಥರು, ಅಸಹಾಯಕರು ಬಲೆಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗದೆ ಅಲ್ಲೇ ನರಳುತ್ತಿದ್ದರೆ ಪ್ರಭಾವಶಾಲಿ ವ್ಯಕ್ತಿಗಳು ಈ ಕಾನೂನು ಎನ್ನುವ ಬಲೆಯನ್ನೇ ಹರಿದುಕೊಂಡು ಹೊರಬರುತ್ತಾರೆ ಎಂದು ಮಾರ್ಮಿಕವಾಗಿ ವಿವರಿಸಿದರು. ಅಲ್ಲಿ ನೆರೆದಿದ್ದ ಕಾನೂನು ವಿದ್ಯಾರ್ಥಿಗಳನ್ನು ಉದ್ದೇಶಿಸಿ "ನೀವು ವಕೀಲರಾಗಿ ಹೊರಬಂದಾಗ ಈ ಮಾದರಿಯ ಸಂತ್ರಸ್ತರಿಗೆ ಸಹಾಯಹಸ್ತ ನೀಡಬೇಕು" ಎಂದು ಕೇಳಿಕೊಂಡರು.

ತಮ್ಮ ಮಾತುಗಳನ್ನು ಮುಗಿಸುತ್ತಾ ಅಮೀರ್ ಖಾನ್ "ನನ್ನಂತಹ ಅಮಾಯಕರ, ಸಂತ್ರಸ್ತರಿಗೆ ನಿರಪರಾಧಿಯಾಗಿ ಹೊರಬಂದಾಗ ನಮಗೆ ಸೂಕ್ತವಾದ ಪುನರ್ವಸತಿಯ ಅವಶ್ಯಕತೆ ಇದೆ. ಅದು ಹಣಕಾಸಿನ ರೂಪದಲ್ಲಿ ಅಲ್ಲ, 14 ವರ್ಷ ಜೈಲಿನ ನರಕದಲ್ಲಿ ನರಳಿ ನಿರಪರಾಧಿಯಾಗಿ ಹೊರಬಂದ ನನ್ನಂತವರಿಗೆ ಘನತೆಯನ್ನು ತಂದುಕೊಡುವ ರೂಪದಲ್ಲಿ, ಗೌರವಯುತವಾದ ಉದ್ಯೋಗಗಳನ್ನು ಕಲ್ಪಿಸುವ ರೂಪದಲ್ಲಿ, ನಾಗರಿಕ ಸಮಾಜದಿಂದ ನಾನು ಇದನ್ನು ಬಯಸುತ್ತೇನೆ. ನನಗೆ ಹಿಂದೂಸ್ತಾನದ ಕುರಿತಾಗಿ ಹೆಮ್ಮೆ ಇದೆ. ಈ ದೇಶದ ಬಗ್ಗೆ ಗರ್ವವಿದೆ. ನನ್ನ ಪೂರ್ವಜರ ಕುರಿತಾಗಿ ನನಗೆ ಹೆಮ್ಮೆ ಇದೆ. 1947ರಲ್ಲಿ ಅವರಿಗೆ ಎರಡು ಬಗೆಯ ಆಯ್ಕೆಗಳಿದ್ದವು. ಒಂದು ಪಾಕಿಸ್ತಾನಕ್ಕೆ ಹೋಗುವುದು ಅಥವಾ ಇಲ್ಲೇ ಉಳಿಯುವುದು. ಆದರೆ ಅವರು ಹಿಂದೂಸ್ತಾನವನ್ನು ಆರಿಸಿಕೊಂಡರು. ಅದಕ್ಕಿಂತಲೂ ಮಿಗಿಲಾದ ದೇಶಭಕ್ತಿ ಮತ್ತೊಂದು ಎಲ್ಲಿದೆ? ಅವರು ಜಿನ್ನಾರವರನ್ನು ತಿರಸ್ಕರಿಸಿದರು, ಗಾಂಧಿಯವರ ಮಾನವತಾವಾದಿ, ಸೆಕ್ಯುಲರ್ ಭಾರತವನ್ನು ಆರಿಸಿಕೊಂಡರು. ದುರಂತವೆಂದರೆ ನಮ್ಮ ದೇಶಪ್ರೇಮದ ಕುರಿತಾಗಿ ಬೆರಳು ತೋರಿಸಲಾಗುತ್ತಿದೆ. ಈ ಸೆಕ್ಯುಲರ್, ಪ್ರಜಾಪ್ರಭುತ್ವ ದೇಶದಲ್ಲಿ ನಾನು ಹುಟ್ಟಿದ್ದೇನೆ. ನನಗೆ ಪುನರ್ವಸತಿ ದೊರಕಿದೆ. ಇದು ಎಲ್ಲಾ ಬಗೆಯ ನಿರಪರಾಧಿಗಳಿಗೂ ದೊರಕಬೇಕಾಗಿದೆ" ಎಂದು ಭಾವಪರವಶರಾಗಿ ಮಾತನಾಡಿದರು.

ಕಡೆಗೂ ಉಳಿದ ಪ್ರಶ್ನೆಗಳು: ಈ ಮಾದರಿಯಲ್ಲಿ ನಿರಪರಾಧಿಗಳನ್ನು ಕಾನೂನುಬಾಹಿರವಾಗಿ ಬಂಧಿಸಿ, ಅಪಹರಿಸಿ, ಚಿತ್ರಹಿಂಸೆ ನೀಡಿ, ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ ಅವರ ಬದುಕನ್ನೇ ನಾಶಪಡಿಸುವ ಪೊಲೀಸರಿಗೆ ಅವರ ತಪ್ಪಿಗೆ, ಅಪರಾಧಕ್ಕೆ ಶಿಕ್ಷೆಯನ್ನು ನೀಡುವಂತಹ ಇಚ್ಛಾಶಕ್ತಿ ನಮ್ಮ ಪ್ರಭುತ್ವ-ವ್ಯವಸ್ಥೆಗೆ ಯಾತಕ್ಕಿಲ್ಲ?? ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಯಾಕೆ ಪ್ರಭುತ್ವ ಹಿಂದೇಟು ಹಾಕುತ್ತದೆ? ಕಾನೂನುಬಾಹಿರವಾಗಿ ವರ್ತಿಸುವ, ನಾಗರಿಕ ಸಮಾಜದ ಘನತೆಯನ್ನು ಕುಗ್ಗಿಸುವ ಪೊಲೀಸರ ಈ ಕ್ರಮದ ವಿರುದ್ಧ ಯಾತಕ್ಕೆ ಜನಾಂದೋಲನ ರೂಪುಗೊಳ್ಳುತ್ತಿಲ್ಲ?? ಮುಖ್ಯವಾಗಿ ನ್ಯಾಯಾಂಗವು ಯಾತಕ್ಕೆ ಈ ವಿಷಯದಲ್ಲಿ ಉದಾಸೀನ ತೋರುತ್ತಿದೆ??

ಕೊನೆಯದಾಗಿ ಫೈಜ್ ಅಹ್ಮದ್ ಫೈಜ್‌ನ ಕವನದ ಸಾಲುಗಳು:

ದೇಹ ಮತ್ತು ನಾಲಿಗೆ ಸಾಯುವುದಕ್ಕಿಂತ ಮೊದಲು
ಈ ಅಲ್ಪ ಸಮಯ ಸಾಕಷ್ಟಿದೆ ಮಾತ್ನಾಡು
ಸತ್ಯ ಇನ್ನೂ ಜೀವಂತವಾಗಿದೆ ಮಾತ್ನಾಡು
ಹೇಳಬೇಕಾದ್ದನ್ನೆಲ್ಲ ತಿಳಿಸು, ಮಾತ್ನಾಡು.

■ ಬಿ.ಶ್ರೀಪಾದ ಭಟ್

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 12-07-2017 RNI No. KARKAN



ರಮ್ಯಾ ಜೀವನವನ್ನು ಆಧರಿಸಿದ ಸಿನಿಮಾ?

[illegible]



ಮೋಸ ಹೋದರಾ ರಚಿತಾ ರಾಮ್

ಆರ್.ಚಂದ್ರು ನಿರ್ದೇಶನದ, ದುನಿಯಾ ವಿಜಯ್ ನಟನೆಯ 'ಕನಕ' ಸಿನಿಮಾದಿಂದ ರಚಿತಾ ರಾಮ್ ಔಟ್ ಆದ ಸುದ್ದಿ ಓದಿದ್ದೀರಿ. ಈಗ ವಿಜಯ್ ಅವರ ಮತ್ತೊಂದು ಸಿನಿಮಾದಿಂದ ರಚಿತಾ ಹೊರಬಂದ ಸುದ್ದಿಯನ್ನು ಕೇಳುತ್ತಿದ್ದೀರಿ. ಎಲ್ಲವೂ ಅಂದುಕೊಂಡಂತೆ ಆದರೆ 'ಕನಕ' ಸಿನಿಮಾದಲ್ಲಿ ರಚಿತಾ ನಾಯಕಿಯಾಗಿ ನಟಿಸಬೇಕಿತ್ತು, ಆದರೆ, ವಿಜಯ್ ಅವರ 'ಜಾನಿ ಜಾನಿ ಯಸ್ ಪಾಪ' ಸಿನಿಮಾದಲ್ಲಿ ನಟಿಸಬೇಕಿದ್ದರಿಂದ, ಸ್ವತಃ ವಿಜಯ್ ಅವರೇ ನಿರ್ದೇಶಕರಿಗೆ 'ಕನಕ' ಸಿನಿಮಾದಿಂದ ಕೈಬಿಡುವಂತೆ ಕೇಳಿದ್ದರು. ಹಾಗಾಗಿ ರಚಿತಾ ಆಚೆ ಬಂದಿದ್ದರು.

ಈ ವಿಷಯದ ಕುರಿತು ಗಾಂಧಿನಗರದಲ್ಲಿ ಹಲವು ಮಾತುಗಳು ಕೇಳಿಬಂದವು. ರಚಿತಾ ಕಿವಿಗೂ ಅವು ಬಿದ್ದವು. ಇದರಿಂದ ಕುಪಿತಗೊಂಡಿರುವ ರಚಿತಾ, ವಿಜಯ್ ಅವರ ಮತ್ತೊಂದು ಸಿನಿಮಾದಿಂದಲೂ ಆಚೆ ಬಂದಿದ್ದಾರೆ ಅನ್ನುವ ಸುದ್ದಿ ಹರಿದಾಡುತ್ತಿದೆ. ಡೇಟ್ ಹೊಂದಾಣಿಕೆ ಆಗುತ್ತಿಲ್ಲ ಅನ್ನುವ ಕಾರಣ ಕೊಟ್ಟು ರಚಿತಾ ಆಚೆ ಬಂದಿದ್ದಾರೆ ಅನ್ನುವ ಮಾತೂ ಕೇಳಿಬರುತ್ತಿದೆ. ಆದರೆ, ಅಸಲಿ ಕಾರಣವೇ ಬೇರೆ.



ರಚಿತಾ ಸದ್ಯಕ್ಕೆ ಯಾವ ಸಿನಿಮಾವನ್ನು ಮಾಡುತ್ತಿಲ್ಲ, ಡೇಟ್ ಹೊಂದಾಣಿಕೆ ಆಗದೇ ಇರುವುದಕ್ಕೆ ಇದಂತೂ ಕಾರಣವಲ್ಲ, ವಿಜಯ್ ಮೇಲಿನ ಕೋಪದಿಂದಾಗಿ ಇಂಥದ್ದೊಂದು ನಿರ್ಧಾರ ತೆಗೆದುಕೊಂಡಿದ್ದಾರೆ ಅನ್ನುತ್ತಿದೆ ರಚಿತಾ ಆಪ್ತ ಬಳಗ. ಈಗ ರಚಿತಾ ಜಾಗಕ್ಕೆ ಶ್ರದ್ಧಾ ಶ್ರೀನಾಥ್ ಬರುವ ಸಾಧ್ಯತೆ ಇದೆ.

ನೂರು ಪಾತ್ರದ ಜತೆ ಶ್ರೀಮು

'ಮಫ್ತಿ' ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿರುವ ಶ್ರೀಮು... ಮತ್ತೊಂದು ಸಾಹಸ ಕೆಲಸಕ್ಕೆ ಮುಂದಾಗಿದ್ದಾರೆ. ಇವರ ಹೊಸ ಸಿ... ಬರೋಬ್ಬರಿ ನೂರು ಜನ ಕಲಾವಿದರು ಇರಲಿದ್ದು, ಅವರೊಂದಿಗೆ ... ಪಾತ್ರ ಹಂಚಿಕೊಳ್ಳುತ್ತಿದ್ದಾರೆ. ನೂರು ಜನ ಕಲಾವಿದರು ಹೊಂದಿ... ಸಿನಿಮಾ ಯಾವುದು ಅನ್ನುವುದಕ್ಕೆ ಒಂದೆರಡು ತಿಂಗಳು ಕಾಯಬ...

ಈ ಚಿತ್ರಕ್ಕೆ ನಿರ್ದೇಶಕರು ಯಾರು ಅನ್ನುವುದು ಇನ್ನೂ ಪಕ್ಕಾ... ಆದರೆ, ಜಯಣ್ಣ ಮತ್ತು ಭೋಗೇಂದ್ರ ಹಣ ಹೂಡಲು ಮುಂದಾ... ಶ್ರೀಮುರಳಿಗೆ ಒಪ್ಪುವಂತಹ ಕತೆಯನ್ನೂ ಇವರು ಆಯ್ಕೆ ಮಾಡಿಕೊ... ಇದೊಂದು ಬಹುಕೋಟಿ ಬಜೆಟ್‌ನ ಸಿನಿಮಾ ಅನ್ನುವುದು ವಿ... ಕುರಿತು ನಿರ್ಮಾಪಕರು ಹೇಳುವುದು ಹೀಗೆ: "ಸಿನಿಮಾದಲ್ಲಿ ... ಹೆಚ್ಚು ಪಾತ್ರಗಳು ಇವೆ. ಹಾಗಂತ ಅವೆಲ್ಲ ಸಣ್ಣಪುಟ್ಟ ಕ್ಯಾರೆಕ್ಟರ್ ಅಂದುಕೊ... ಪ್ರತಿ ಪಾತ್ರವೂ ಪ್ರಮುಖವಾಗಿವೆ. ಅತೀ ಮುಖ್ಯ ಸನ್ನಿವೇಶಗ... ಕಾಣಿಸಿಕೊಳ್ಳಲಿವೆ. ನೂರು ಪಾ... ಬೆಸೆದ ರೀತಿ ತುಂಬಾ ಚೆನ್ನಾಗಿ... ದಾಖಲೆಯ ಸಿನಿಮಾ ಆಗಲಿ...



ಎಲ್ಲವೂ ಅಂದುಕೊಂಡ... ನಡೆದರೆ ಸೆಪ್ಟೆಂಬರ್‌ನಲ್ಲಿ ಚಿ... ಪ್ರಾರಂಭವಾಗಲಿದೆ. ಅದೇ ... ವೇಳೆಯಲ್ಲಿಯೇ 'ಮಫ್ತಿ' ಸಿನಿಮಾವನ್ನು ತೆರೆಗೆ ತರಬೇ... ಅನ್ನುವ ಪ್ಲಾನ್ ಕೂಡ ನಡೆಯು...



ದಿಕ್ಕು ತಪ್ಪಿಸಿದ ಶೋ

ಟಾಕ್ ಶೋನಲ್ಲಿ ಯಾವತ್ತೂ ತಾವು ಭಾಗವಹಿಸುವುದಿಲ್ಲವೆಂದು ಘೋಷಿಸಿಕೊಂಡಿದ್ದಾರೆ 'ಕಿರಿಕ್ ಪಾರ್ಟಿ' ಬೆಡಗಿ ರಶ್ಮಿಕಾ ಮಂದಣ್ಣ. ಇದಕ್ಕೆ ಕಾರಣ ಯಶ್ ಬಗ್ಗೆ ಆಡಿದ ಮಾತು. ಈ ವಿಷಯದಲ್ಲಿ ತಪ್ಪು ಯಾರದು? ಎಂಬ ಮೂಲಪ್ರಶ್ನೆ ಕೂಡ ಎದ್ದಿದ್ದು, ಅದು ಚರ್ಚೆಗೂ ಕಾರಣವಾಗಿದೆ. ಖಾಸಗಿ ವಾಹಿನಿಯಲ್ಲಿ ಟಾಕ್ ಶೋ ಪ್ರಸಾರವಾಗಿ ಮೂರ್‍ನಾಲ್ಕು ತಿಂಗಳಾಗಿತ್ತು, ಅದು ಈಗ ವಿವಾದವಾಗಲು ಕಾರಣ ರಕ್ಷಿತ್ ಶೆಟ್ಟಿ ಜನಪ್ರಿಯತೆ.

ಸ್ಯಾಂಡಲ್‌ವುಡ್‌ನ ಯುವ ಕಲಾವಿದರಲ್ಲಿ ಪ್ರಮುಖವಾಗಿ ಕೇಳಿಬರುವ ಹೆಸರು ಯಶ್, ರಕ್ಷಿತ್, ಧ್ರುವ ಹೀಗೆ ಬೆರಳೆಣಿಕೆಯಷ್ಟು ಮಾತ್ರ. ಅದರಲ್ಲೂ 'ಕಿರಿಕ್ ಪಾರ್ಟಿ' ಸಿನಿಮಾದ ನಂತರ ರಕ್ಷಿತ್ ಸ್ಟಾರ್ ಆಗಿದ್ದಾರೆ. ಈ ಜನಪ್ರಿಯತೆಯನ್ನು ತುಳಿದುಹಾಕಲು ಕೆಲವರು ಹಳೆಯ ವಿಡಿಯೋವನ್ನು ಸಾಮಾಜಿಕ ಜಾಲತಾಣಕ್ಕೆ ಹಾಕಿ, ಯಶ್ ಅಭಿಮಾನಿಗಳನ್ನು ಹಿಂದೆ ಬಿಟ್ಟಿದ್ದಾರೆ. ಇದು ಯಶ್‌ಗೆ ಅರ್ಥವಾಗುತ್ತಿದ್ದಂತೆಯೇ ಎಚ್ಚೆತ್ತುಕೊಂಡು, ಈ ವಿವಾದ ಇಲ್ಲಿಗೆ ಬಿಟ್ಟುಬಿಡಿ ಎಂದು ಅಭಿಮಾನಿಗಳಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಎಲ್ಲರಿಗೂ ಗೊತ್ತಿರುವಂತೆ ಜುಲೈ 3ರಂದು ರಕ್ಷಿತ್ ಮತ್ತು ರಶ್ಮಿಕಾ ನಿಶ್ಚಿತಾರ್ಥ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ, ಇಬ್ಬರೂ ನಾನಾ ಪ್ರಾಜೆಕ್ಟ್‌ಗಳಲ್ಲಿ ಸಖತ್ ಬ್ಯುಸಿಯಾಗಿದ್ದಾರೆ. ಯಶ್ ಮತ್ತು ರಾಧಿಕಾ ಪಂಡಿತ್ ಜೋಡಿಯಂತೆಯೇ, ರಕ್ಷಿತ್ ಮತ್ತು ರಶ್ಮಿಕಾ ಬೆಳೆಯುವುದನ್ನು ಸಹಿಸದೆ ಕುತಂತ್ರಿಗಳು ಮಾಡಿದ ಕೆಲಸವಿದು ಅನ್ನುವ ಮಾತು ಕೇಳಿಬರುತ್ತಿದೆ. ಆದರೆ, ಬಲಿಯಾಗಿದ್ದು ಮಾತ್ರ ಯಶ್ ಮತ್ತು ಅವರ ಅಭಿಮಾನಿಗಳು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com